ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



anashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 31

ಜುಲೈ 31, 2011 ರೂ. 5/- ಪುಟ 16

ಅಕ್ರಮ ಗಣಿಗಾರಿಕೆ : ವರದಿ ಸೋರಿಕೆ

ಕುಣಿಕೆಯಲ್ಲಿ ಸಿ.ಎಂ. ಬಿಜೆಪಿ ಪಟಾಲಂ









ರೈತರ ಪ್ರತಿರೋಧ :

ಪೋಸ್ಕೋ ಗೆ ಹಿನ್ನಡೆ

ಜೀವನಾವಶ್ಯಕ 'ಕನಿಷ್ಟ ಕೂಲಿ' ಕೊಡಲು ಏನು ದಾಡಿ?

ಅಸಂಘಟಿತ ಕಾರ್ಮಿಕರ ಪ್ರಶ್ನೆ





ಶೈಕ್ಷಣಿಕ ಕ್ಷೇತ್ರದ ಒಂದು ಮೂಲ ಉದ್ದೇಶ ವಿದ್ಯಾರ್ಥಿಗಳಿಗೆ ವೈಚಾರಿಕ ಮನೋಭಾವನೆಯನ್ನು ಬೆಳೆಸುವುದಾಗಿದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳಿಗೆ ಪ್ರಸ್ತುತ ವಿದ್ಯಮಾನಗಳ ಪರಿಚಯ ಹಾಗೂ ವೈಚಾರಿಕ ವಿಚಾರಗಳನ್ನು ಪ್ರಯೋಗಾತ್ಮಕವಾಗಿ ತೋರಿಸಿಕೊಡುವುದರ ಬದಲಾಗಿ ಅಪ್ರಸ್ತುತವಾದ ಧಾರ್ಮಿಕ ಭಾವನೆಗಳನ್ನು, ಬೆಳೆಯುವ ಮುಗ್ಧ ಮನಸ್ಸುಗಳ ಮೇಲೆ ಹೇರಲು ಹೊರಟಿರುವುದು ಅವೈಜ್ಞಾನಿಕವಲ್ಲವೇ? ಹಿಂದೂ ಮತಾಂಧ ಆರ್‌ಎಸ್‌ಎಸ್ ಅಜೆಂಡಾವನ್ನು ಸರ್ಕಾರಿ ಯೋಜನೆಯ ಭಾಗವಾಗಿ ಕಾರ್ಯರೂಪಕ್ಕೆ ತರಲು ಮುಂದಾಗಿರುವುದು ಸಚಿವರ 'ಸ್ವಧರ್ಮ'ವಲ್ಲದೇ ಮತ್ತೇನು ಎಂಬುದು ಪ್ರಗತಿಪರರೆನಿಸಿಕೊಂಡವರ ಮುಂದಿಟ್ಟಿರುವ ಪ್ರಶ್ನೆ

'ಭಗವದ್ಗೀತೆ'ಯ ಮರೆಯಲ್ಲಿ ಅಡಗಿದ ಏಜೆಂಡಾ

ಡಾ. ಜಿ. ಭಾಸ್ಕರಮಯ್ಯ

ಕ್ರೈಸ್ತರಿಗೆ 'ಬೈಬಲ್', ಮುಸ್ಲಿಮರಿಗೆ 'ಕುರಾನ್' ಇದ್ದ ಹಾಗೆ 'ಹಿಂದೂ' ಎಂದು ಕರೆಯಲಾಗುವ 'ಯಾವುದಾದರೊಂದು' ಸಮುದಾಯವಿದ್ದರೆ ಕಾನೂನು ಗ್ರಂಥ (ಮುಸ್ಲಿಮರಿಗೆ 'ಶರಿಯತ್' ಇದ್ದ ಹಾಗೆ) ಎಂದು ಇದುವರೆಗೂ ಯಾರೂ ಹೇಳಿದ್ದಿಲ್ಲ; ಹೇಳಲು ಸಾಧ್ಯವೂ ಇಲ್ಲ.

'ಭಗವದ್ಗೀತೆ' ಒಂದು ಧರ್ಮಗ್ರಂಥ ಅಲ್ಲ. ಅದು ಒಂದು ಅತೀ ಕ್ಲಿಷ್ಟವಾದ, ಮೇಲ್ನೋಟಕ್ಕೆ ಅತ್ಯಂತ ಗೊಂದಲವನ್ನುಂಟು ಮಾಡುವ ಒಂದು ತತ್ವಶಾಸ್ತ್ರೀಯ ಗ್ರಂಥ. ಆದ್ದರಿಂದಲೇ ಅದಕ್ಕೆ ನಾನಾ ಭಾಷ್ಯಗಳು. ಆಚಾರ್ಯ ಶಂಕರ (788–820), ಭಾಸ್ಕರ (ಕ್ರಿ.ಶ.1000), ರಾಮಾನುಜ (ಕ್ರಿ.ಶ.1140), ಮಧ್ವ (ಕ್ರಿ.ಶ.1238), ನಿಬಾಂಕರ(ಕ್ರಿ.ಶ.1250), ಶ್ರೀಕಂಠ(ಕ್ರಿ.ಶ.1270), ಶ್ರೀಪತಿ(ಕ್ರಿ.ಶ.1140), ವಲ್ಲಭ (ಕ್ರಿ.ಶ. 1479–1544) ವಿಜ್ಞಾನ ಭಿಕ್ಷು (ಕ್ರಿ.ಶ.1600), ಬಲಸೇನ (ಕ್ರಿ.ಶ.1725)ಇವರುಗಳಲ್ಲದೇ ಆಧುನಿಕ ಯುಗದಲ್ಲಿ ವಿವೇಕಾನಂದ, ಬಾಲಗಂಗಾಧರ ತಿಲಕ, ಗಾಂಧೀಜಿ, ಎಲ್ಲರೂ ಪರಸ್ಪರ ವಿರುದ್ಧವಾದ ವ್ಯಾಖ್ಯಾನವನ್ನು ಮಾಡಿರುತ್ತಾರೆ.

ವೈವಿಧ್ಯಮಯ ವ್ಯಾಖ್ಯಾನ

ಆಚಾರ್ಯ ರಜನೀಶರಿಗೆ ಭಗವದ್ಗೀತೆಯಲ್ಲಿ 'ಮುಕ್ತಕಾಮ' ಹಾಗೂ 'ಸ್ವಚ್ಛಂದ ಪ್ರಣಯ' ಕಾಣಿಸಿದ್ದರೆ ಭಾರತದ ಮಹಾನ್ ತತ್ವಶಾಸ್ತ್ರಜ್ಞ ಶಂಬಾ ಜೋಷಿಯವರಿಗೆ 'ಅವಿಮುಕ್ತ ಕುರುಕ್ಷೇತ್ರ' ಅರ್ಥಾತ್ 'ಸಂಭೋಗ'ದ ದರ್ಶನವಾಗಿದೆ. ('ರಾಜಯೋಗದ ರಹಸ್ಯ' ಕೃತಿಯಲ್ಲಿ). ಇಂತಹ ಒಂದು ಸಂಕೀರ್ಣವಾದ ತತ್ವ ಶಾಸ್ತ್ರೀಯ ಗ್ರಂಥವನ್ನು ಕುರಿತು ತತ್ವಶಾಸ್ತ್ರದ ಗಂಧಗಾಳಿಯಿಲ್ಲದ ಜನರು ಏನೆಂದು ಅಭಿಯಾನ ನಡೆಸುತ್ತಾರೆ? ಇವರು ಇದಕ್ಕೆ ಯಾವ ಅರ್ಥವನ್ನು ಹಚ್ಚುತ್ತಾರೆ? ಇದು ಎರಡನೆಯ ತರಗತಿಯ ಮಕ್ಕಳು 'ಮದುವೆ ಆಟ' ಆಡಿದ ಹಾಗೆ 'ಬಾಲಿಶ' ಎನ್ನಬಹುದಾದರೂ ಇದು ಅತ್ಯಂತ ಅಪಾಯಕಾರಿಯಾದ ಬೆಳವಣಿಗೆ. ಏಕೆಂದರೆ, 'ಭಗವದ್ಗೀತೆ'ಯನ್ನು ಇಷ್ಟೊಂದು ಹಗುರವಾಗಿ ಕಾಣುವ ಜನರಿಂದ 'ಭಗವದ್ಗೀತೆ'ಯ ಮೇಲೆ ಹಿಂದೆಂದೂ ನಡೆಯದ ಭಯಾನಕ ಅತ್ಯಾಚಾರ ನಡೆಸಲ್ಪಡುತ್ತದೆ. ಇದು 'ಹಿಂದೂ'–'ಧರ್ಮ' ಮತ್ತು 'ದರ್ಶನ'ದ ಮೇಲೆ ಅಧಾರ್ಮಿಕ, ರಾಕ್ಷಸೀಯ ಶಕ್ತಿಗಳಿಂದ ನಡೆಸಲ್ಪಡುತ್ತಿರುವ ಹಲ್ಲೆಯಾಗಿದೆ.

ಅಶಿಕ್ಷಿತ ಅಬ್ಬರ

ಈ ಸಂದರ್ಭದಲ್ಲಿ, ಶಿಕ್ಷಣಮಂತ್ರಿ 'ಭಗವದ್ಗೀತೆ' ಯನ್ನು ವಿರೋಧಿಸುವವರು ದೇಶ ಬಿಟ್ಟು ತೊಲಗಲಿ ಎಂದು ಅಬ್ಬರಿಸಿರುವುದು ಆತ ಎಷ್ಟೊಂದು ಅಶಿಕ್ಷಿತ, ಭಗವದ್ಗೀತೆಯ ಗಂಧಗಾಳಿ ಅರಿಯದವ–ಎಂಬುದನ್ನು ಸಾಬೀತುಪಡಿಸುತ್ತದೆ. ಇಂತವರು ನಡೆಸುವ 'ಅಭಿಯಾನ' ಒಂದು ದಾರ್ಶನಿಕ ಕೃತಿಯನ್ನು ಅತ್ಯಂತ ಸಂಕುಚಿತವಾಗಿ ಅದನ್ನು ಅಪಮಾನಿಸುವುದಾಗಿದೆ.

ಈ ಶಿಕ್ಷಣ ಮಂತ್ರಿ ತನ್ನ ಬಿಡುವಿನ ವೇಳೆಯಲ್ಲಿ ಭಗವದ್ಗೀತೆಯನ್ನು ಚೆನ್ನಾಗಿ ಓದಿಕೊಳ್ಳುವ ಪ್ರಯತ್ನ ಮೊದಲು ಮಾಡಲಿ. ಏಕೆಂದರೆ, ಈತ 'ಭಗವದ್ಗೀತೆ' ಹೇಳುವ 'ಸ್ವಧರ್ಮ'ವನ್ನು ಆಚರಿಸದೆ ಭಯಾನಕ'ವಾದ ಪರಧರ್ಮವನ್ನು ಆಚರಿಸಿದ್ದಾರೆ. ಶಿಕ್ಷಣ ಮಂತ್ರಿಯ ಸ್ವಧರ್ಮವು ಶಿಕ್ಷಣದ ಬಗ್ಗೆ ಸಂವಿಧಾನ ಹೇಳಿದ ಮೌಲ್ಯಗಳನ್ನು ಎತ್ತಿ ಹಿಡಿಯುವುದು. ಅದನ್ನು ರಕ್ಷಿಸುವುದು, ವೈಜ್ಞಾನಿಕ ಮನೋಧರ್ಮವನ್ನು ಬೆಳೆಸುವುದು. ಅದನ್ನೆಲ್ಲಾ ಬಿಟ್ಟು ಧರ್ಮ ವಿರೋಧಿಗಳಾದ ಕೋಮುವಾದಿಗಳ 'ಅಮಾನವೀಯ'ವಾದ 'ದೇಶಬಿಟ್ಟು ತೊಲಗಿ' ಎಂಬ ಪರಧರ್ಮವನ್ನು ಈತ ಆಚರಿಸುತ್ತಿದ್ದಾರೆ.ಈತನೊಂದಿಗೆ ಕೇಂದ್ರ ರೈಲೆ ರಾಜ್ಯ ಸಚಿವ ಮುನಿಯಪ್ಪ ನೆಂಬ ಮಹಾಮುನಿಯು 'ಅಭಿಯಾನ'ಕ್ಕೆ ಮಹಾ



ಪೋಷಕನಾಗಿದ್ದಾರೆ. ಇಂತಹ ರೋಗಿಷ್ಟ ಮನಸ್ಸುಗಳು ಶಿಕ್ಷಣ ಕ್ಷೇತ್ರದ ಉನ್ನತ ಹುದ್ದೆಯಲ್ಲಿದ್ದರೆ ಅಂತಹ ಸಮಾಜ ಮಾನಸಿಕ ಆರೋಗ್ಯ ಸಂಪೂರ್ಣವಾಗಿ ಹದಗೆಡುತ್ತದೆ.

2. ಮೇಲಿನವರ ಒತ್ತಡಕ್ಕೋ ಅಥವಾ ಗುಲಾಮಗಿರಿಯ 'ಸ್ವಧರ್ಮ'ಕ್ಕೆ ಒಳಗಾಗಿಯೋ ಶಿಕ್ಷಣ ಆಯುಕ್ತರ ಕಚೇರಿಯ ನಿರ್ದೇಶಕರು–ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾ.ಶಿ.ಇಲಾಖೆಗಳಿಗೆ ಅಗತ್ಯಕ್ರಮಕ್ಕಾಗಿ ಕಳುಹಿಸಿದ ಸುತ್ತೋಲೆಯಲ್ಲಿ ಅಂತಹ ವಿಶೇಷವೇನೂ ಕಾಣಿಸುವುದಿಲ್ಲ. ಏಕೆಂದರೆ, ಸುತ್ತೋಲೆಯಲ್ಲಿ ಸ್ಪಷ್ಟವಾಗಿ "ಶೈಕ್ಷಣಿಕ ಪ್ರಗತಿಗೆ ಧಕ್ಕೆಯಾಗದಂತೆ ಆಸಕ್ತ ಪ್ರಾಥಮಿಕ, ಪ್ರೌಢಶಾಲಾ ಮತ್ತು ಸಂಸ್ಕೃತ ಪಾಠ ಶಾಲಾ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಶಾಲಾವಧಿಯ ನಂತರ ದಿನಕ್ಕೊಂದು ಗಂಟೆಯಂತೆ 8 ದಿನಗಳ ಕಾಲ ಮಾನವೀಯ ಮೌಲ್ಯಗಳನ್ನು ಬೋಧಿಸುವ ಕಾರ್ಯಕ್ರಮಕ್ಕೆ ಹಾಜರಾಗಲು ಶಾಲಾ ಮುಖ್ಯ ಶಿಕ್ಷಕರು ಅವಕಾಶ ಮಾಡಿಕೊಡಲು ಅನುಮತಿ ನೀಡಿದೆ" ಇದು ಆಸಕ್ತರಿಗೆ ಮಾತ್ರ. ಅದೂ ಶಾಲಾವಧಿ ಮುಗಿದ ಬಳಿಕ. ಇದೇ ರೀತಿ ಬೇಕಿದ್ದರೆ, 'ಬೈಬಲ್' ಮತ್ತು 'ಕುರಾನ್' ಗಳನ್ನು(ಮಾನವೀಯ ಮೌಲ್ಯಗಳಿಗಾಗಿ) ಶಾಲಾವಧಿ ಮುಗಿದ ಬಳಿಕ ಪ್ರವಚನ ಮಾಡಲು ಆಸಕ್ತರಿಗಾಗಿ ಮಾತ್ರ ಅನುಮತಿ ನೀಡುವಂತೆ ಕ್ರೈಸ್ತ ಮತ್ತು ಮುಸ್ಲಿಂ ಬಾಂಧವರು ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಚೇರಿಗೆ ಬರೆದುಕೊಳ್ಳ ಬಹುದಾಗಿದೆ. ಆಗ, ಅವರು ಅನುಮತಿ ನೀಡದಿದ್ದರೆ ಅದು ಅವರ 'ಸ್ವಧರ್ಮ' ವಾಗುವುದಿಲ್ಲ. ಅವರನ್ನು ನ್ಯಾಯಾಲಯ ದಲ್ಲಿ ವಿಚಾರಿಸಿ ಕೊಳ್ಳಬಹುದು. 'ಮಾನವೀಯ ಮೌಲ್ಯ'ಗಳನ್ನು ಹೆಚ್ಚುವರಿಯಾಗಿ ಕಲಿಸಬೇಕೆಂದಿದ್ದರೆ ಅದಕ್ಕೆ ಸಂಬಂಧಿಸಿದ ಶಾಸ್ತ್ರ–ಥೀಸೀಸ್(ನೀತಿಶಾಸ್ತ್ರ) ವೇ ಇದೆ. ಅದು ಬಿಟ್ಟು, ಮಕ್ಕಳಿಗೆ ಕಬ್ಬಿಣದ ಕಡಲೆಆದ 'ದಾರ್ಶನಿಕ ಗ್ರಂಥ'ದ ಉಸಾಬರಿ ಏಕೆ?

ಕೋಮುವಾದಿ ಅಜೆಂಡಾ

ಸುತ್ತೋಲೆ ನ್ಯಾಯಸಮ್ಮತವಾಗಿಯೇ ಇದೆ. ಆದರೆ ಈ ದೇಶದಲ್ಲಿ ಕೋಮುವಾದಿ ಏಜೆಂಡಾ ಕೆಲಸ ಮಾಡುವ ವಿಧಾನ ಅಷ್ಟೊಂದು ಸುಲಭವಾಗಿ ತನ್ನ ರಹಸ್ಯವನ್ನು ಬಿಟ್ಟು ಕೊಡುವುದಿಲ್ಲ. ಅದು ಕಾನೂನಿನಿಂದ ಅತೀ ಸುಲಭವಾಗಿ ತಪ್ಪಿಸಿಕೊಳ್ಳುತ್ತದೆ ಹಾಗೂ ಇತರರನ್ನು ಕಾನೂನಿನ ಕಾಣಿಕೆಗೆ ಸಿಕ್ಕಿಸುತ್ತದೆ. ಅಂತೂ, ತನ್ನ ಗುರಿಯನ್ನು ತಲುಪಿದಲ್ಲಿ ಅದು ಸಂಪೂರ್ಣವಾಗಿ ಯಶಸ್ವಿಯಾಗುತ್ತದೆ. ಉದಾಹರಣೆಗೆ ಈ ನಿರುಪ್ರದವಿಯಾದ ಸುತ್ತೋಲೆ ಜಿಲ್ಲಾ, ತಾಲ್ಲೂಕು ಹೋಬಳಿ ಮಟ್ಟದ ಶಿಕ್ಷಣಾಧಿಕಾರಿಗಳಿಗೆ ತಲುಪುವಾಗ ಅದು ಉಲ್ಲಂಘಿಸಲಾಗದ ಕಠಿಣ ಆದೇಶವಾಗಿ ತಿಳಿಯಲ್ಪಡುತ್ತದೆ. ಏಕೆಂದರೆ, ಇಂದು ದೇಶದೆಲ್ಲೆಡೆ 'ಕೋಮು ಮಾನಸಿಕತೆ' ವ್ಯಾಪಿಸಿದೆ. ಅದರಲ್ಲಿ ಅಧಿಕಾರಿಗಳು, ಅಧ್ಯಾಪಕರು ಬಹುತೇಕ ಕೋಮುವಾದಿಗಳು. ಇಂತಹ ಮಾನಸಿಕತೆಯ ಜನ ಸರ್ಕಾರಿ ಆದೇಶ ವನ್ನು ತಮ್ಮ ಏಜೆಂಡಾಕ್ಕೆ ಬೇಕಾದಂತೆ ತಿರುಗಿಸಿಕೊಂಡು ಅದನ್ನು ಜಾರಿ ಮಾಡಲು ತುದಿಗಾಲಲ್ಲಿ ನಿಂತಿರುತ್ತಾರೆ. ಅವರು ಇದನ್ನು ಅವಶ್ಯಕ 'ಸ್ವಧರ್ಮ'ವೆಂದು ತಿಳಿದು ಪಾಲಿಸಲು ತೊಡಗುತ್ತಾರೆ. ಇದನ್ನು ವಿರೋಧಿಸುವವರ ಮೇಲೆ ಪೋಲೀಸರನ್ನು ಛೂ ಬಿಡುತ್ತಾರೆ. ಈ ದೇಶದ ಪೋಲೀಸರು ಬಹುತೇಕ ಅತ್ಯಂತ ಕೆಟ್ಟ ಕೋಮು ಮಾನಸಿಕತೆಯವರು. ಪೋಲೀಸ್ ವ್ಯವಸ್ಥೆಯಲ್ಲಿ ಅಲ್ಪಸಂಖ್ಯಾತರ ಪ್ರತಿನಿಧಿತ್ವ ಶೇ.4ಕ್ಕಿಂತಲೂ ಕಡಿಮೆ. ಕೋಮು ದಂಗೆಗಳಲ್ಲಿ ಇವರು ಬಹುಸಂಖ್ಯಾತರಿಗೆ ಪ್ರಿಯರಾಗಿ ಅಲ್ಪಸಂಖ್ಯಾತರಿಗೆ ಶತ್ರುಗಳಾಗಿರುವ ವಿಚಾರಗಳನ್ನು ಐ.ಜಿ.ಯಾಗಿರುವ ಆಂಧ್ರಪ್ರದೇಶದ 'ನ್ಯಾಷನಲ್ ಪೋಲೀಸ್ ಅಕಾಡೆಮಿ' ಸಹಾಯದಿಂದ ಅಧ್ಯಯನ ನಡೆಸಿರುವ ವಿಭೂತಿ ನಾರಾಯಣ್ ರಾಯ್ ಬರೆದ "ಪೋಲೀಸರು ಮತ್ತು ಕೋಮು ಗಲಭೆಗಳು" ಪುಸ್ತಕದಲ್ಲಿ ಗಮನಿಸಬಹುದು. ಸ್ಟೇಟ್ಸ್‌ಮನ್ (ಸೆಪ್ಟಂಬರ್1989) ಪತ್ರಿಕೆಯಲ್ಲಿ ಅಲಹಾಬಾದ್ ಮುಖ್ಯ ನ್ಯಾಯಾಧೀಶರು ಹೇಳಿದ "They are most organised criminals in India" ಎಂಬ ಮಾತು ಅಕ್ಷರಶಃ ಸತ್ಯ.

ಹೀಗೆ ಅಧಿಕಾರಿಗಳು, ಕೋಮು ಮಾನಸಿಕತೆಯ ಅಧ್ಯಾಪಕರು–ಪ್ರಭುತ್ವದ ಸಹಕಾರದಿಂದ ಬಹು ಸುಲಭವಾಗಿ ಮಕ್ಕಳನ್ನು ತಮ್ಮಂತೆಯೇ ಮರಿ ಟೈಮ್ ಬಾಂಬ್‌ಗಳನ್ನಾಗಿ ತಯಾರು ಮಾಡುತ್ತಾರೆ. ಇತ್ತ ಮಾಧ್ಯಮಗಳಲ್ಲಿ ಭಗವದ್ಗೀತೆಯ ಬಗ್ಗೆ ಚರ್ಚೆ ಆರಂಭವಾಗುತ್ತದೆ! ಪ್ರಗತಿಪರರು ಇವರ ಅಜೆಂಡಾವನ್ನು ಅರ್ಥ ಮಾಡಿಕೊಂಡು ಪ್ರತಿಕ್ರಿಯಿಸಬೇಕಾಗುತ್ತದೆ. ಏನಾದರೂ ಮಾಡಿ ಚರ್ಚೆಯ ದಿಕ್ಕು ತಪ್ಪಿಸುವುದೇ ಕೋಮುವಾದಿಗಳ ಗುರಿ. ಭಗವದ್ಗೀತೆ ಜೀವ ವಿರೋಧಿಯೋ? ಅಥವಾ ಮಾನವೀಯ ಮೌಲ್ಯಗಳ ವಿಜಯ ಪತಾಕೆಯೋ ಎಂಬುದರ ಬದಲಿಗೆ, ಶಿಕ್ಷಣ ಕ್ಷೇತ್ರಕ್ಕೆ 'ಭಗವದ್ಗೀತೆ'ಯನ್ನು ಎಳೆದು ತಂದು ಅವಾಂತರ ಸೃಷ್ಟಿಸುವ ಪ್ರಕ್ರಿಯೆಯ ಹಿಂದಿರುವ ಹಿಡನ್ ಅಜೆಂಡಾದ–ರಾಕ್ಷಸಿ ಒಳಸಂಚನ್ನು ಬಯಲಿಗೆಳೆಯ ಬೇಕಿದೆ. ಅದರ ವಿರುದ್ಧ ಹೋರಾಡ ಬೇಕಾಗಿದೆ. ಅದು ಬಿಟ್ಟು ಬರೀ 'ಭಗವದ್ಗೀತೆ'ಯ ಕುರಿತೇ ಚರ್ಚಿಸಲು ಹೊರಡುವುದು ಶತ್ರುಗಳ ಕೈಗೆ ಆಯುಧಗಳನ್ನು ಕೊಟ್ಟಂತೆ! ಅಯೋಗ್ಯರು, ಕುತರ್ಕಿಗಳೂ, ಮೂರ್ಖರೂ, ಧರ್ಮದ ಮುಖವಾಡ ತೊಟ್ಟವರೂ, ಪಾತಕಿಗಳೂ ಆಗಿರುವವರೊಂದಿಗೆ ಎಂದಿಗೂ ಶಾಸ್ತ್ರಾರ್ಥ ಮಾಡಕೂಡದು.

ಸಂಪಾದಕೀಯ

ಅಧೋಗತಿಯ ಮತ್ತೊಂದು ಪ್ರದರ್ಶನ

ಜುಲೈ 15, 16ರಂದು ಎರಡು ದಿನಗಳ ಕಾಲ ಹುಬ್ಬಳ್ಳಿಯಲ್ಲಿ ನಡೆದ ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸಭೆ 'ಸದಾಶಿವನಿಗೆ ಅದೇ ಧ್ಯಾನ' ಎಂಬ ಗಾದೆ ಮಾತನ್ನು ನೆನಪಿಸುವಂತಿದೆ. ಸಚಿವ ಸಂಪುಟದ ವಿಸ್ತರಣೆ, ಪಕ್ಷದ ಸಂಘಟನೆ, ವರ್ಚಸ್ಸು ವೃದ್ಧಿಗೆಂದು ಘೋಷಿಸಿದ್ದ ಈ ಸಭೆಯ ಅಂತಿಮ ಫಲಿತಾಂಶದಲ್ಲಿ ಕೇವಲ ಅಧಿಕಾರದಲ್ಲಿ ಮುಂದುವರೆಯುವುದು ಮತ್ತು ಮತ್ತೆ ಅಧಿಕಾರಕ್ಕೆ ಹೇಗಾದರೂ ಬರಬೇಕೆಂಬ ಚಿಂತೆಯೇ ಕಾಡಿದೆ. ನಿಜ ಪ್ರಶ್ನೆಗಳಿಗೆ ಬೆನ್ನುತೋರಿಸಿ ಪಲಾಯನ ಮಾಡಿದೆ. ಈಗಾಗಲೇ ದೇಶದಲ್ಲೆಲ್ಲಾ ಕುಖ್ಯಾತಿಗೀಡಾದ, ಭ್ರಷ್ಟಾಚಾರ-ಹಗರಣಗಳು, ಜನರ ಸಮಸ್ಯೆಗಳ ಬಗ್ಗೆ ತೀವ್ರತರ ನಿರ್ಲಕ್ಷ್ಯತನ, ಜನದ್ರೋಹಗಳ ಬಗೆಗಾಗಲೀ, ಹಳಿತಪ್ಪಿದ ಆಘಾತಕಾರಿ ಜನವಿರೋಧಿ ಆಡಳಿತ ಬಗೆಗಾಗಲೀ ಚಕಾರವನ್ನು ಎತ್ತದೇ ಈಗಿನ ಮುಖ್ಯಮಂತ್ರಿ, ಸಚಿವ ಸಂಪುಟವನ್ನು ಅಭಿನಂದಿಸಿದ ಧಾಟಿಯಲ್ಲಿದೆ. ಈ ಹಿಂದಿನ ಕೆಲವು ಕಾರ್ಯಕಾರಿಣಿಗಳಲ್ಲಾದರೂ 'ಆತ್ಮಾವಲೋಕನ' ಎಂಬ ಶಬ್ದದ ಪುನರುಚ್ಚಾರವಾದರೂ ನಡೆಯುತ್ತಿತ್ತು. ಈಗ ಬಿಜೆಪಿಯ ಶಬ್ದ ಭಂಡಾರದಿಂದ ಈ ಶಬ್ದ ಹೊರ ನೂಕಲ್ಪಟ್ಟಿದೆ.

ಯಡಿಯೂರಪ್ಪನವರ ನೇತೃತ್ವದಲ್ಲಿ ಸರ್ಕಾರ ರಚನೆಗೊಂಡಿದ್ದೇ ಅಧಿಕಾರ ದಾಹದ ಅಕ್ರಮಗಳಿಂದ. ಇಡೀ ಮೂರು ವರ್ಷದುದ್ದಕ್ಕೂ ಅದರ ಆಡಳಿತವೆಂದರೆ ವಚನಭ್ರಷ್ಟತೆ, ಸಾರ್ವಜನಿಕ ಸಂಪತ್ತಿನ ಲೂಟಿ, ಬ್ರಹ್ಮಾಂಡ, ಭ್ರಷ್ಟಾಚಾರ-ಅಕ್ರಮ-ಹಗರಣ-ಸ್ವಜನಪಕ್ಷಪಾತ. ಎಲ್ಲೂ ಕಾಣದ ಜನಕಾಳಜಿ ಇಲ್ಲವಾದ ಸತತ ಕಾನೂನು-ಸಂವಿಧಾನದ ಉಲ್ಲಂಘನೆ ಕನಿಷ್ಠ ಈ ವಿಷಯಗಳ ಬಗ್ಗೆ ಮಾತನಾಡುವ ಯಾವ ನೈತಿಕ ಹಕ್ಕನ್ನು ಬಿಜೆಪಿ ನಾಯಕತ್ವ ಉಳಿಸಿಕೊಂಡಿಲ್ಲ. 'ಕೇಶವ ಕೃಪಾ' ದಿಂದ ಹಿಡಿದು ಸರ್ಕಾರ-ಪಕ್ಷದ ಪ್ರತಿಹಂತಗಳ ನಾಯಕರೂ ಈ ಅಕ್ರಮಗಳ ಫಲಾನುಭವಿಗಳಾಗಿರುವಾಗ ಕಿರುಬೆರಳನ್ನೆತ್ತಲಾದರೂ ಹೇಗೆ ಸಾಧ್ಯವಾದೀತು.

ಹಾಗೆಯೇ ದೇಶಾದ್ಯಂತ ಬೆಲೆ ಏರಿಕೆ ಬಗ್ಗೆ ದೊಡ್ಡ ಗಂಟಲಲ್ಲಿ ಕೂಗುವ ಬಿಜೆಪಿಗೆ ತನ್ನ ಆಡಳಿತವಿರುವ ಈ ರಾಜ್ಯದಲ್ಲಿ ಕನಿಷ್ಠ ಕೊಡಬಹುದಾದ ಪರಿಹಾರದ ಕ್ರಮಗಳು ಹಾಗೂ ಸೌಲಭ್ಯಗಳ ಬಗ್ಗೆ ಪ್ರಸ್ತಾಪವೇ ಇಲ್ಲ. ದುಡಿವ ಜನಕೋಟಿಗಳ ಬದುಕಿನ ಒಂದು ಪ್ರಶ್ನೆಯೂ ಪ್ರಸ್ತಾಪಕ್ಕೆ ಅನರ್ಹವೆಂದೇ ಭಾವಿಸಿದೆ. ಅಭಿವೃದ್ಧಿಯೆಂದರೆ ಕಾರ್ಪೋರೇಟ್ ಕಂಪನಿಗಳಿಗೆ, ಭೂ ಹಾಗೂ ಗಣಿ ಮಾಫಿಯಾಗಳ ಮನಸೋ ಇಚ್ಛೆ ಲೂಟಿಗೆ ಮುಕ್ತಾವಕಾಶಗಳನ್ನೊದಗಿ ಕನಿಷ್ಠ ಕಾರ್ಯಕಾರಣಿ ಸಭೆ ನಡೆಯುತ್ತಿರುವ ಹುಬ್ಬಳ್ಳಿ ಸುತ್ತಮುತ್ತಲೂ ಗದಗ-ವಿಜಾಪುರ, ಬಳ್ಳಾರಿ ಮುಂತಾದೆಡೆ ಕೈಗಾರಿಕೆಗಳು, ಅಭಿವೃದ್ಧಿ ಹೆಸರಿನಲ್ಲಿ ಅಂಥಾ ದುಂಧಿ-ಫಲವತ್ತಾದ ಭೂಮಿಯನ್ನು ಸ್ವಾಧೀನಪಡಿಸಿ ಕೊಳ್ಳುತ್ತಿರುವುದರ ವಿರುದ್ಧ ರೈತರು ಹೋರಾಡುತ್ತಿರುವುದರ ಬಗೆಗಾಗಲೀ ಬಿಜೆಪಿ ಸಭೆ ಕಿಂಚಿತ್ತು ಗಮನಹರಿಸದೇ ತಿರಸ್ಕಾರದಿಂದಲೇ ನೋಡಿದೆ. ಕೃಷಿಯ ಬಗೆಗಿನ ಕಾಳಜಿ ಒಂದು ವಿಚಾರಗೋಷ್ಠಿಯ ಮಟ್ಟಕ್ಕೆ ಇಳಿಸಲಾಯಿತಾದರೂ ಅದರಲ್ಲಿ ಕೃಷಿ ಬಿಕ್ಕಟ್ಟು, ರೈತ ಕೃಷಿ ಕಾರ್ಮಿಕರ ಜೀವನಸ್ಥಿತಿ, ಸುಧಾರಣೆಯಂತಹ ಗಂಭೀರ ವಿಷಯಗಳನ್ನು ಪೂರ್ಣ ನಿರ್ಲಕ್ಷ್ಯಿಸಲಾಗಿದೆ. ಗ್ರಾಮೀಣ ಪ್ರದೇಶಗಳಿಂದ ನಗರಗಳತ್ತ ಜನರ ವಲಸೆ ಬಗ್ಗೆ ಚಿಂತೆ ವ್ಯಕ್ತಪಡಿಸಿರುವುದು ಅವರು ನಗರಗಳಿಗೆ ಶಾಪ ಎಂಬ ಧಾಟಿಯಲ್ಲಿದೆ. ಬದಲಾಗಿ ಇಂತಹ ವಲಸೆ ತಪ್ಪಿಸುವ ಮೂಲಭೂತ ಕ್ರಮಗಳ ಬಗ್ಗೆ ಚಿಂತನೆಯೇ ಇಲ್ಲವಾಗಿದೆ. ಕೈಗಾರಿಕೆ-ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶದ ಸಿದ್ಧತೆಯಲ್ಲಿರುವ ಸರ್ಕಾರ ಲಕ್ಷಾಂತರ ಎಕರೆ ಭೂಸ್ವಾಧೀನಕ್ಕೆ ಸನ್ನಿಹದಲ್ಲಿದೆ. ಅರಣ್ಯ ಭೂಮಿ ಹೆಸರಿನಲ್ಲಿ ಸಾವಿರಾರು ರೈತರನ್ನು-ಕೃಷಿಕೂಲಿಕಾರರ ಬುಡಕಟ್ಟು ಜನರನ್ನು ಹೊರದಬ್ಬುವ ಹುನ್ನಾರದಲ್ಲಿಯೇ ಇದೆ. ಇದು ಗಂಭೀರವಾದ ವಿಷಯವೇ ಅಲ್ಲವೆಂದು ಕಾರ್ಯಕಾರಣಿ ಭಾವಿಸಿದೆ.

ಇಂತಹ ಜನರನ್ನು, ರಾಜ್ಯವನ್ನು ಉಳಿಸುವ ಯಾವ ಇರಾದೆಯೂ ಇಲ್ಲದೇ ಹೇಗಾದರೂ ಅಧಿಕಾರದಲ್ಲಿ ಉಳಿಯಬೇಕು. ಹಿಡಿಯಬೇಕು ಎಂಬ ಅದರ ಧಾಟಿಯೇ ಅಕ್ರಮ ಮಾರ್ಗಗಳನ್ನು ದೃಢೀಕರಿಸಿದಂತಿದೆ. ಹಲವಾರು ಆಂತರಿಕ-ಬಾಹ್ಯ ಬೇಗುದಿಗಳಿಂದ ಬಿರಿಯುತ್ತಿರುವ ಬಿಜೆಪಿ ಚುನಾವಣೆ ಯಾವಾಗಲಾದರೂ ಸಂಭವಿಸಬೇಕಾದ ನಿರೀಕ್ಷೆಯಲ್ಲಿಯೇ ಸಿದ್ಧತೆ ಮಾಡಿಕೊಳ್ಳುವ ಆತಂಕದ ಸಂದೇಶವೇ ಈ ಕಾರ್ಯಾಕಾರಣಿಯಲ್ಲಿ ವ್ಯಕ್ತಗೊಂಡಿವೆ. ಸರ್ಕಾರ ತಾನು ಮಾಡಿದ 'ಘನಂದಾರಿ' ಸಾಧನೆಗಳನ್ನೇ ಏಕಮುಖವಾಗಿ ಓತಪ್ರೇತವಾಗಿ ಪ್ರಚಾರಿಸುವುದಕ್ಕೆ ಭಾರೀ ಒತ್ತು ನೀಡಿದೆ.

ಹೀಗೆಲ್ಲಾ ಜ್ವಲಂತ ಪ್ರಶ್ನೆಗಳನ್ನು 'ಮರೆತಿರುವ ಬಿಜೆಪಿ ಜನರನ್ನು ವಿಭಜಿಸುವ ಕೋಮುವಾದಿ ಅಜೆಂಡಾವನ್ನು ಕೈಬಿಟ್ಟಿಲ್ಲ'. ಸಂವಿಧಾನ ವಿರೋಧಿಯಾದ 'ಗೀತಾ ಅಭಿಯಾನ'ದ ತೀವ್ರ ಸಮರ್ಥನೆ. ಅದರ ಇನ್ನಷ್ಟು ಆಗ್ರಹ ಕೇಂದ್ರ ಸರ್ಕಾರ ತರಲಿರುವ 'ಕೋಮು ಹಿಂಸಾಚಾರ ತಡೆ ಮಸೂದೆಗೆ ತಿದ್ದುಪಡಿ ಸೂಚಿಸದೇ ಕಡು ವಿರೋಧ ವ್ಯಕ್ತಪಡಿಸಿ ರುವುದು ಚುನಾವಣಾ ಸಿದ್ಧತೆಯ ಒಂದು ಭಾಗವೆಂದೇ ತಿಳಿಯಬೇಕಾಗಿದೆ.


ಇವೆಲ್ಲದರ ನಡುವೆ ಪಕ್ಷದ ಕಾರ್ಯ ಕಾರಣಿ ಸಭೆಗೆ ಅನಂತಕುಮಾರ ಬಣ ಗೈರು ಹಾಜರಾಗಿ ಭಿನ್ನಮತದ ಎತ್ತರವನ್ನು ತೋರಿಸಿದ್ದು ಸಭೆಯ ಹೈಲೈಟ್!

ಒಟ್ಟಾರೆ ಬಿಜೆಪಿ ಕಾರ್ಯಕಾರಣಿ ರಾಜ್ಯ ಸರ್ಕಾರದ ದುರಾಡಳಿತವನ್ನು ತಡೆಯುವಲ್ಲಿ, ಎಚ್ಚರಿಕೆ ನೀಡುವಲ್ಲಿ ವಿಫಲವಾಗಿ ಪಕ್ಷದ ಶಾಮೀಲುತನವನ್ನೇ ತೋರಿಸಿದೆ. ಅಧಿಕಾರದಾಹ, ಪ್ರಧಾನವೆಂದಿದೆ. ಒಂದೆಡೆ ಜನದ್ರೋಹಿ ಉದಾರೀಕರಣ ಆರ್ಥಿಕ ನೀತಿಗಳ ಜಾರಿ, ಕೋಮುವಾದ ವಿಭಜಕ ರಾಜಕಾರಣಕ್ಕೆ ಬಲವಾಗಿ ಅಂಟಿಕೊಂಡಿದೆ. ಈ ಸಭೆ ಬಿಜೆಪಿಯ ಅಧೋಗತಿಯ ಸ್ಥಿತಿಯ ದ್ಯೋತಕದ ಮತ್ತೊಂದು ಪ್ರದರ್ಶನ ಅಷ್ಟೇ.

ಲೋಕಾಯುಕ್ತರ ವರದಿ ಸೋರಿಕೆ! ಸ್ಫೋಟಗೊಳ್ಳುವ ಮೊದಲೇ ಸದ್ದು!

ಅಕ್ರಮ ಗಣಿಗಾರಿಕೆಯ ವರದಿಯನ್ನು ಸರ್ಕಾರಕ್ಕೆ ಇದೇ ಜುಲೈ 23 ರಂ ಸಲ್ಲಿಸುವುದಾಗಿ ಕರ್ನಾಟಕ ಲೋಕಾಯುಕ್ತ ನ್ಯಾ.ಸಂತೋಷಹೆಗಡೆಯವ ಪ್ರಕಟಿಸಿದ್ದರು. ಅದರ ತಯಾರಿಯಲ್ಲಿಯೇ ಇದ್ದರು. ಅಕ್ರಮದಲ್ಲಿ ಯಾರ ಭಾಗಿ, ಹೇಗೆಲ್ಲಾ, ಮುಂದೇನಾಗುವುದು ಎಂಬಂತಹ ಕುತೂಹಲದ ಸನ್ನಿವೇಶ ನಿರ್ಮಾಣವಾಗಿತ್ತು. ಆದರೆ ವರದಿ ಸಲ್ಲಿಕೆಯ ಮೊದಲೇ ಅದರ ಕೆಲವು ಮು ಸಂಗತಿಗಳು ಹೊರಬಂದಿವೆ. 'ಟೈಮ್ಸ್ ಟುಡೇ' ಇಂಗ್ಲಿಷ್ ಚಾನೆಲ್ ಅಕ್ರಮಗಳ ಆರೋಪಿತರ ಹೆಸರು, ಮೊತ್ತ ಇತ್ಯಾದಿ ವಿಚಾರಗಳನ್ನು ಬಹಿರಂಗಕ್ಕೆ ತಂ ಇದು ಕೋಲಾಹಲ ಸೃಷ್ಟಿಸಿದೆ.

ಇದರಂತೆ ಹೆಚ್.ಡಿ.ಕುಮಾರಸ್ವಾಮಿ, ಜನಾರ್ಧನರೆಡ್ಡಿ, ಕರುಣಾಕರ ರೆಡ್ಡಿ, ವಿ.ಸೋಮಣ್ಣ, ಅನಿಲ್ ಲಾಡ್ ಮುಂತಾದವರ ಹೆಸರುಗಳು ಬಂದಿವೆ. 6 ಅಧಿಕಾರಿಗಳ ಭಾಗಿಯಾಗಿದ್ದಾರೆ. ಬಹಳ ಮುಖ್ಯವಾಗಿ ಮುಖ್ಯಮಂತ್ರಿ ಯಡಿಯೂರಪ್ಪ, ಅವರ ಮಕ್ಕಳು, ಅಳಿಯ ಇವರ ಅಕ್ರಮ-ಹಗರಣಗಳು ಪ್ರಮುಖವಾದವು. ಕೇವಲ 14 ತಿಂಗಳಲ್ಲೇ ಅದಿರು ಮೇಲಿನ ರಾಜಧನ ವಸೂಲಿ ವಂಚನೆಯಿಂದ ಸರ್ಕಾರದ ಬೊಕ್ಕಸಕ್ಕೆ 1,827 ಕೋಟಿ ರೂ. ನಷ್ಟವಾಗಿದೆ. ಜಿಂದಾಲ್ ಸಮೂಹದ ಸೌತ್‌ವೆಸ್ಟ್ ಮೈನಿಂಗ್ ಕಂಪನಿಯಿಂದ 40 ಕೋಟಿ ರೂಪಾಯಿಗಳನ್ನು ಯಡಿಯೂರಪ್ಪ ಕುಟುಂಬವು ಲಂಚ ಪಡೆದಿರುವ ಅಂಶವು ವರದಿಯಲ್ಲಿ ಪ್ರಸ್ತಾಪವಾಗಿದೆ ನಿಜ. ವರದಿ ಇನ್ನಷ್ಟೆ ಬಿಡುಗಡೆಯಾಗಬೇಕಿದೆ. ಆದರೆ 'ಲೀಕ್' ಆದ ಈ ಅಂಶಗಳು ವರದಿಯಲ್ಲಿರು ವಂತಹುವು ಎಂದು ಲೋಕಾಯುಕ್ತಾರೇ ಒಪ್ಪಿಕೊಂಡಿದ್ದಾರೆ.



ಹಾಗಾದರೆ ಇದನ್ನು ಬಹಿರಂಗ ಪಡಿಸಿದವರ್ಯಾರು? ಅವರ ನಿಜ ಉದ್ದೇಶವಾದರೂ ಏನು? ಈ ಸಂಗತಿಗಳು ಖಂಡಿತಕ್ಕೂ ಆಳ ತನಿಖೆಯಿಂ ಹೊರಬರಬೇಕು. ತನಿಖೆಯಾಗಲೇಬೇಕು. ಅಂತೂ ಈ ಬಹಿರಂಗಪಡಿಸುವಿಕೆಯ ಹಿಂದೆ ಒಂದು ದೊಡ್ಡ ರಾಜಕೀಯ ಹುನ್ನಾರವೇ ಇದೆ ಎಂಬುದರಲ್ಲಿ ಸಂಶಯವಿಲ್ಲ. ಲೋಕಾಯುಕ್ತ ಸಂತೋಷ ಹೆಗಡೆಯ ದೂರವಾಣಿಯನ್ನೇ ಬೆಂಗಳೂರಿನ ಎರಡು ಸ್ಥಳಗಳಿಂದ ಕದ್ದಾಲಿಸಲಾಗುತ್ತಿತ್ತು ಎಂದು ಸ್ವತಃ ಹೆಗಡೆಯವರು ಬಹಿರಂಗಪಡಿಸಿರುವ ಅಂಶ ಅಘಾತಕಾರಿಯಾದದ್ದು. ಹೀಗೆ ಬಹಿರಂಗಪಡಿಸುವ ಮೂಲಕ ವರದಿಯ ಪರಿಣಾಮವನ್ನು ದುರ್ಬಲಗೊಳಿಸಿ, ಹಾದಿ ತಪ್ಪಿಸುವ ದುರುದ್ದೇಶವೂ ಇಲ್ಲದಿಲ್ಲ. ಸುಮಾರು 9000 ಪುಟಗಳ ಈ ವರದಿ ತಯಾರಿಕೆಗೆ ದಾಖಲೆಗಳ ಆಧಾರ ಒದಗಿಸಿ; ವಿಶ್ಲೇಶಿಸುವಲ್ಲಿ ಅಪಾರ ಶ್ರಮ ಅಡಗಿದೆ

ಪುಟ 14 ಕ್ಕೆ

ಕಾರ್ಟೂನ್ ಕಾರ್ನರ್



ಉಪವಾಸ : ಅಂದು-ಇಂದು

ದಿನನಿತ್ಯ ಉಪವಾಸ ಬಿದ್ದು ಉತ್ತಮ ಬದುಕಿನ ಹಕ್ಕುಗಳಿಗಾಗಿ ಸೆಣಸಾಡುತ್ತಿರುವ ಜನಸಾಮಾನ್ಯರ ಬದುಕಿನ ಹೋರಾಟಗಳಿಗೆ ಸಿಗದ ಪ್ರಾಮುಖ್ಯತೆ ಕೆಲವೊಮ್ಮೆ ಕೆಲವು 'ನೇತಾರ' ರ ಉಪವಾಸಕ್ಕೆ ಸಿಕ್ಕು ಬಿಡುತ್ತದೆ. ಉಪವಾಸ ಸತ್ಯಾಗ್ರಹ ಏನಿದ್ದರೂ ಹೋರಾಟದ ಒಂದು ಸಂಕೇತ. ಜನಾಂದೋಲನ ಹಾಗೂ ಅದರಲ್ಲಿ ಜನ ಸಮೂಹಗಳ ಕ್ರಿಯಾಶೀಲ ಪಾತ್ರ ಬಹಳ ಮಹತ್ವದ್ದು.

ಶಾವಲ್ ಹಮೀದ್ ಗುಲ್ವಾಡಿ

ಏಕಾದಶಿ ಉಪವಾಸ, ರಮ್ಜಾನ್ ಉಪವಾಸ, ಗುಡ್‌ಫ್ರೈಡೆ ಉಪವಾಸ....ಕ್ಷಮಿಸಿ ನಾನು ಈ ಉಪವಾಸದ ಬಗ್ಗೆ ಹೇಳೋಕೆ ಹೊರಟಿಲ್ಲ. ಇವೆಲ್ಲಾ ಉಪವಾಸಗಳು ಆಯಾಯ ಧರ್ಮದಲ್ಲಿ ಗೌರವ ಹೊಂದಿರುವ ಪವಿತ್ರ ಹಾಗೂ ಮಹತ್ವ ಹೊಂದಿರುವ ಉಪವಾಸವಾಗಿವೆ.

ಆದರೆ ಈಗೀಗ ಮಾಧ್ಯಮಗಳಲ್ಲಿ ಪದೇ ಪದೇ ಕೇಳಿಬರುತ್ತಿರುವ 'ಉಪವಾಸ' ಅನ್ನುವ ಶಬ್ಧದಿಂದಾಗಿ ಧಾರ್ಮಿಕ ಆಚರಣೆಗಳಿಗಾಗಿ ಉಪವಾಸ ಕೈಗೊಳ್ಳುವವರು ಹಿಂದು ಮುಂದು ನೋಡಬೇಕಾಗಿ ಬಂದಿದೆ. ಈಗೀಗ ಸಾಲು ಸಾಲಾಗಿ ಉಪವಾಸ ಕೈಗೊಳ್ಳುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಾ ಇದೆ.

ಅಣ್ಣ ಹಜಾರೆಯವರ ಉಪವಾಸ... ಬಾಬಾ ರಾಮ್‌ದೇವ್‌ರವರ ಉಪವಾಸ... ದೇವೇಗೌಡರ ಉಪವಾಸ... ಕುಮಾರಸ್ವಾಮಿಯವರ ಉಪವಾಸ...ಮುಂದೆ ಈ ಪಟ್ಟಿ ಇನ್ನಷ್ಟು ಉದ್ದವಾಗಬಹುದು.

ಅಂದು ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರು ಒಂದು ತಿಂಗಳ ಉಪವಾಸ ಕೈಗೊಂಡಿದ್ದು ಬಹಳ ಸುದ್ದಿಯಾದರೂ ಅವರು ಕೈಗೊಂಡ ಉಪವಾಸಕ್ಕೆ ನೈಜ ಅರ್ಥ ಹಾಗೂ ಮಹತ್ವ



ಇದ್ದ ಕಾರಣ ಆ 'ಉಪವಾಸ' ಅನ್ನುವ ಪದಕ್ಕೆ ಗೌರವ ಇದ್ದಿತ್ತು.

ಇಂದು ನಾಗರೀಕ ಸಮಾಜದ ಅಣ್ಣಾ ಹಜಾರೆಯುವರು 'ಉಪವಾಸ' ಸತ್ಯಾಗ್ರಹ ನಡೆಸಿದಾಗ ವ್ಯಾಪಕ ಭ್ರಷ್ಟಾಚಾರದಿಂದಾಗಿ ರೋಸಿಹೋಗಿದ್ದ ಜನತೆ ಈ ಹೋರಾಟಕ್ಕೆ ದೇಶಾದ್ಯಂತ ಬೆಂಬಲ ನೀಡಿದರು. ಇದರಿಂದಾಗಿ ಹಜಾರೆಯುವರು 'ಲೋಕಪಾಲ ಮಸೂದೆ' ಜಾರಿಗಾಗಿ ಪಟ್ಟು ಹಿಡಿದು ಕೇಂದ್ರ ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಸಾಧ್ಯವಾದರೂ, ಮುಂದೆ ಈ ಹೋರಾಟ ದಿಕ್ಕಾಪಾಲಾಗಿರೋದು ಬೇರೆ ವಿಚಾರ.


ಅತ್ತ ದೇಶದ ಜನತೆ ಹಜಾರೆಯವರ ಹೋರಾಟದ ಬಗ್ಗೆ ಚರ್ಚೆ ನಡೆಸುತ್ತಿರುವಾಗಲೆ, ಇತ್ತ ಬಾಬಾ ರಾಮ್‌ದೇವ್ ಕಪ್ಪು ಹಣವನ್ನು ವಿದೇಶದಿಂದ (ಕ್ಷಮಿಸಿ ದೇಶದೊಳಗಿನ ಕಪ್ಪು ಹಣದ ಬಗ್ಗೆ ಅವರು ಮಾತಾಡಿಲ್ಲ) ಕೂಡಲೇ ತರಿಸಬೇಕೆಂದು 'ಉಪವಾಸ' ಕೂರುತ್ತಾರೆ! ಹಜಾರೆಯವರಿಗೆ ಸಿಕ್ಕಿದ ಜನ ಬೆಂಬಲವನ್ನು ತನ್ನ ಕಡೆಗೆ ಆಕರ್ಷಿಸಲು ತಾನೇನು ಕಡಿಮೆಯೆಂದು ಮಾಡಿದ 'ಯೋಗ' ಲೆಕ್ಕಾಚಾರದ 'ಉಪವಾಸ ಸತ್ಯಾಗ್ರಹ'ದಲ್ಲಿ ತಾನು ದಾರಿ ತಪ್ಪಿದ್ದಲ್ಲದೆ, ಭ್ರಷ್ಟಾಚಾರದ ವಿರುದ್ಧದ ಹೋರಾಟವನ್ನು ಪ್ರಹಸನದ ಮಟ್ಟಕ್ಕೆ ಇಳಿಸಿದ್ದಾರೆ! ಬಾಬಾರಾಮ್‌ದೇವ್‌ರ 'ಉಪವಾಸ'ದ ಮರ್ಮ ಗೊತ್ತಾಗಿರೋದು ಆತನ ಸ್ವಂತ "ಬಂಡವಾಳ" ಹೊರ ಬಂದ ಮೇಲೆಯೇ. ಸ್ವತಃ ಕೋಟ್ಯಾಂತರ ರೂಪಾಯಿಗಳ ಒಡೆಯನಾಗಿದ್ದ ಆತ ಉಪವಾಸ ಕೂತಿರೋದು ಪ್ರಚಾರದ ದೃಷ್ಟಿಯಿಂದಲೋ? ಅಥವಾ ಭ್ರಷ್ಟಾಚಾರದ ವಿರುದ್ಧ ಸಮರಸಾರಿದ್ದ ಹಜಾರೆಯವರ 'ಚಕ್ರಾಧಿಪತ್ಯ' ಮುರಿಯಲೋ..... ಅನ್ನೋದು ನಾಗರೀಕರಿಗೆ ಅನುಮಾನ ಬಂದಿರುವುದಂತು ನಿಜ.

ಮಾಜಿ ಪ್ರಧಾನಿ ದೇವೇಗೌಡರು ತಮ್ಮ ಸ್ವಂತ ಜಿಲ್ಲೆಯ ಅಭಿವೃದ್ಧಿಯ ಹಿನ್ನೆಡೆಗೆ ರಾಜಕೀಯ ದ್ವೇಷವೇ ಕಾರಣ ಎಂದು ಒಂದು ದಿನದ ಉಪವಾಸ ಕೈಗೊಂಡರು. ಅವರಿಗೆ ಅವರ ಪಕ್ಷದಿಂದ ಬಾರೀ ಬೆಂಬಲವಿತ್ತೆನ್ನುವ ವಿಷಯ ಸತ್ಯವಾದರೂ ಬೆಂಬಲಿಗರ್‍ಯಾರೂ 'ಉಪವಾಸ' ಕೂರಲಿಲ್ಲ ಅನ್ನೋದು ಅಷ್ಟೆ ಸತ್ಯ. ದೇವೇಗೌಡರು ಪ್ರಚಾರಕ್ಕಾಗಿ ಉಪವಾಸ ಕೂರದೆ ಇದ್ದರೂ ಅಥವಾ ಅವರಿಗೆ ಪ್ರಚಾರದ ಅವಶ್ಯಕತೆ ಇಲ್ಲದೇ ಇದ್ದರೂ ಜನರ ಮನಸ್ಸಿನಿಂದ ಒಂದೇ ದಿನಕ್ಕೆ ಪ್ರಚಾರವಾಗಿ, ಉಪವಾಸ ಕುಳಿತು ಎದ್ದಷ್ಟೆ ವೇಗವಾಗಿ ಮಾಯವಾಗಿದ್ದು ತುಸು ಬೇಸರದ ಸಂಗತಿಯೇ. ರಾಜ್ಯ ಬಿಜೆಪಿ ಸರ್ಕಾರವು ಈ ಉಪವಾಸವನ್ನು ಅಂದು ಗಂಭೀರವಾಗಿ ಪರಿಗಣಿಸದೆ, ನಿಜವಾದ ರಾಜಕೀಯ ದ್ವೇಷ ಪ್ರದರ್ಶಿಸಿತ್ತು.

ಆಣೆ ಪ್ರಮಾಣದ ಪಲಾಯನ ಮಾಡಿದ್ದ ನಾಟಕದ ನಂತರ ಯಡಿಯೂರಪ್ಪನವರು ದೇವೇಗೌಡರ ಕುಟುಂಬದ ವಿರುದ್ಧ ಅಕ್ರಮ ಆಸ್ತಿ ಸಂಪಾದಿಸಿದ "ಜಾರ್ಜ್ ಶೀಟ್" ಬಿಡುಗಡೆ ಮಾಡಿಸಿದ್ದಾರೆ. ಈ ಆರೋಪಗಳ ಬಗ್ಗೆ ತನಿಖೆ ನಡೆಸಲು ಮಾಜಿ ಮುಖ್ಯ ಮಂತ್ರಿ ಕುಮಾರಸ್ವಾಮಿಯವರು ಸರ್ಕಾರಕ್ಕೆ 8 ದಿನಗಳ ಗಡುವು ನೀಡಿದ್ದಲ್ಲದೆ, ಬೇಡಿಕೆ ಈಡೇರದಿದ್ದರೆ 'ಉಪವಾಸ' ಕೈಗೊಳ್ಳುವುದಾಗಿ ಗುಡುಗಿದರು. ಈ ವಿನೂತನ ಕಾರ್ಯಕ್ರಮವು 'ಉಪವಾಸ' ಕೂರುವವರ ಪಟ್ಟಿಗೆ ಹೊಸ ಸೇರ್ಪಡೆ. ವೈಯುಕ್ತಿಕ ಆರೋಪ-ಪ್ರತ್ಯಾರೋಪದ ಕಾರಣಕ್ಕಾಗಿ ಈ 'ಉಪವಾಸ' ನಡೆದರೂ ಒಂದು ದಿನದ ಮಟ್ಟಿಗೆ ರಾಜ್ಯದಲ್ಲಿ ಚರ್ಚೆಯಾಗಬಹುದು ಇಲ್ಲವೇ ಅದರ ಪರಿಣಾಮವನ್ನು ಇನ್ನಷ್ಟು ಕಾದು ನೋಡಬೇಕಾಗಿದೆ.

ಗಾಂಧೀಜಿಯವರರಾಗಲಿ, ಹಿಂದೆ ಕಮ್ಯುನಿಸ್ಟ್ ನಾಯಕರಾದ ಇ.ಎಂ.ಎಸ್., ಎಕೆಜಿ, ಜ್ಯೋತಿಬಸು ಮುಂತಾದವರು ಕೈಗೊಂಡ ಉಪವಾಸಕ್ಕೆ, ತಾತ್ವಿಕ ನೆಲೆಗಟ್ಟು ಇದ್ದಿತ್ತು. ಆದರೆ ಈಗ ನಡೆಯುತ್ತಿರುವ ಈ ಎಲ್ಲಾ ಉಪವಾಸಗಳು ಪ್ರಚಾರಕ್ಕೋ, ಬ್ಲಾಕ್ ಮೇಲೆ ತಂತ್ರವೋ ಅಥವಾ ರಾಜಕೀಯ ಉದ್ದೇಶಕ್ಕೆ ಬಳಸಿಕೊಳ್ಳುವುದಕ್ಕೋ ಅನ್ನೋದು ಗೊಂದಲ ಹುಟ್ಟಿಸಿದರೂ ಜನ ಸಾಮಾನ್ಯರಿಗೆ ಅರ್ಥವಾಗೋ ದಿನ ದೂರ ಇಲ್ಲ.





ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ರೈತರ ಮತ್ತು ಕಾರ್ಮಿಕರ ಅನಿರ್ದಿಷ್ಟಾವಧಿ ಮುಷ್ಕರ 'ಧರಣಿ' ಉಪವಾಸ ಸತ್ಯಾಗ್ರಹಗಳು ನಿರಂತರ ನಡೆಯುತ್ತಿದೆ. ಈ ಹೋರಾಟದಲ್ಲಿ ಇವರು ತಮ್ಮ ಬೇಡಿಕೆಗಳನ್ನು ಘೋಷಣೆಗಳ ಮುಖಾಂತರ ತನ್ನ ಗಂಟಲು ಒಣಗುವವರೆಗೂ ಕೂಗುತ್ತಾರೆ. ತುತ್ತಿನ ಚೀಲ ತುಂಬದಿರುವುದಕ್ಕಾಗಿಯೇ ಮುಷ್ಕರ ಹೂಡುವ ಇವರು ತನ್ನಲ್ಲಿರುವ 1,2,5 ರುಪಾಯಿ ಸೇರಿಸಿ ಪುರಿ (ಮಂಡಕ್ಕಿ) ತರಿಸಿ ತಿನ್ನುತ್ತ ಖಾಲಿ ಹೊಟ್ಟೆಯಲ್ಲಿ ಇಲ್ಲವೆ ಅರೆ ಹೊಟ್ಟೆಯಲ್ಲಿದ್ದು ಹಸಿವಿನಿಂದ ಮುಷ್ಕರದ ದಿನಗಳನ್ನು ಕಳೆಯುತ್ತಾರೆ. ಆದರೆ ಇದನ್ನು 'ಉಪವಾಸ ಸತ್ಯಾಗ್ರಹ' ಎಂದು ಕರೆಸಿಕೊಳ್ಳಲು ಅವರು ಇಷ್ಟ ಪಡುವುದಿಲ್ಲ. ಅಲ್ಲದೆ ಬಡ ಕೂಲಿ ಕಾರ್ಮಿಕರು ರೈತರಿಗೆ 'ಉಪವಾಸ' ಮಾಮೂಲಿಯಾಗಿರುವುದರಿಂದ ಮಾಧ್ಯಮಗಳು ಇದನ್ನು 'ಉಪವಾಸ ಸತ್ಯಾಗ್ರಹ' ಎಂದು ಬಿಂಬಿಸುವುದೂ ಇಲ್ಲ. ಪ್ರಚಾರ ಪ್ರಿಯರ 'ಹೈಟೆಕ್' ಉಪವಾಸವು ಬಡ ಕಾರ್ಮಿಕರ 'ನೈಜ ಉಪವಾಸ'ವನ್ನು ಮರೆ ಮಾಚುತ್ತಿರುವುದು ವಿಪರ್ಯಾಸ.

ನಾಯಕರ ಈ ಉಪವಾಸಗಳ ನಡುವೆ ದೂರದ ಡೆಹ್ರಾಡೂನಲ್ಲಿ ಗಂಗಾನದಿಯು ಕಲುಷಿತಗೊಳ್ಳಲು ಕಾರಣವಾದ ಗಂಗೆಯ ತಟದಲ್ಲಿನ ಅಕ್ರಮ ಗಣಿಗಾರಿಕೆ ವಿರುದ್ಧ ಯಾವುದೇ ಪ್ರಚಾರವನ್ನು ಬಯಸದೆ ಅದು ಸಿಗದೇ ಸುಮಾರು 114 ದಿನಗಳ 'ಉಪವಾಸ' ಮಾಡಿದ ಸ್ವಾಮಿ ನಿಗಮಾನಂದರ ಹೋರಾಟ ಆತನ ಸಾವಿನಲ್ಲೇ ಅಂತ್ಯ ಕಂಡಿರುವುದು ದುರಂತ. ಸ್ವಾರ್ಥ ಇರದ ಅವರ ಉಪವಾಸಕ್ಕೆ ಸಾಮಾಜಿಕ ಕಳಕಳಿ, ಕಾಳಜಿಯೂ ಇತ್ತು. ಉಪವಾಸದಿಂದ ಬಳಲಿದ ಅವರನ್ನು ಭೇಟಿ ಮಾಡುವ ಅಥವಾ ಉಪವಾಸ ಸ್ಥಗಿತಗೊಳಿಸುವಂತೆ ಮನ ಒಲಿಸುವ ಗೋಜಿಗೆ ಹೋಗದ ಸರ್ಕಾರ. ಸಂಬಂಧಪಟ್ಟ ಅಧಿಕಾರಿಗಳು ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸದೇ ಇದ್ದರೂ ಪರೋಕ್ಷವಾಗಿ ನಿಗಮಾನಂದರ ಹೃದಯ ಬಡಿತ ನಿಲ್ಲಿಸುವಲ್ಲಿ ಯಶಸ್ವಿಯಾದರು!

ಮುಖಂಡರೆನಿಸಿಕೊಂಡವರು ಬೂಟಾಟಿಕೆಗೆ ಒಂದು ದಿನ ಉಪವಾಸವಿದ್ದರೆ, ಆರೋಗ್ಯ ಏನೂ ಏರುಪೇರಾಗೊಲ್ಲ. ಆದರೆ ಈ ದಿನಗಳಲ್ಲಿ ಅಗತ್ಯ ಅವಸ್ತುಗಳ ಬೆಲೆ ಏರಿಕೆಯ ಪರಿಣಾಮವಾಗಿ ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲದೆ 'ಉಪವಾಸ'ದಿಂದ ನರಳುತ್ತಿರುವ ನೈಜ 'ಉಪವಾಸ'ಗಾರರನ್ನು ನೋಡಿಯೂ ಕಣ್ಣು ಮುಚ್ಚಿ ಕುಳಿತಿರುವ ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ, ಆಳುವ ಸರ್ಕಾರಗಳಿಗೆ ಏನನ್ನಬೇಕು?

ಈ ಲೇಖನದಲ್ಲಿರುವ 'ಉಪವಾಸ' ಶಬ್ದಗಳನ್ನು ಲೆಕ್ಕಹಾಕುತ್ತಾ ತಲೆ ಚಿಟ್ಟು ಹಿಡಿದು ನೀವೂ 'ಉಪಹಾಸ' ಕೂರಬೇಡಿ! ಬಲಿಷ್ಠ ಲೋಕಪಾಲ ಮಸೂದೆ ಸಂಸದೀಯ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸದಂತೆ ಶೀಘ್ರದಲ್ಲೇ ಜಾರಿಯಾಗುವಂತೆ ಒತ್ತಾಯಿಸಿ ನಡೆಯುತ್ತಿರುವ ಹೋರಾಟದಲ್ಲಿ ಭಾಗವಹಿಸಿ "ಭ್ರಷ್ಟಾಚಾರ"ವನ್ನು ಬೇರು ಮಟ್ಟದಿಂದ ಕಿತ್ತೆಸೆಯಲು ಕೈ ಜೋಡಿಸಿ...

ಜನಶಕ್ತಿ
ಕನ್ನಡ ವಾರಪತ್ರಿಕೆ

'ಪ್ರಜಾಪ್ರಭುತ್ವವೇ ನಮ್ಮ ಧರ್ಮ, ಸಂವಿಧಾನವೇ ನಮ್ಮ ಧರ್ಮ ಗ್ರಂಥ'

'ಭಗವದ್ಗೀತೆ ಅಭಿಯಾನ ಮತ್ತು ಕಾಗೇರಿ ಹೇಳಿಕೆ ಸಂವಿಧಾನ ವಿರೋಧಿ'

ಎಲ್ಲಾ ಧರ್ಮದ ಮಕ್ಕಳಿರುವ ಸರ್ಕಾರಿ ಶಾಲೆಗಳಲ್ಲಿ ಒಂದು ಧರ್ಮಕ್ಕೆ ಸೇರಿದ ಭಗವದ್ಗೀತೆಯನ್ನಷ್ಟೇ ಬೋಧಿಸುತ್ತಿರುವ ಸರ್ಕಾರದ ಕ್ರಮ ಹಾಗೂ ಭಗವದ್ಗೀತೆಯನ್ನು ವಿರೋಧಿಸುವವರು ವಿದೇಶಕ್ಕೆ ಹೋಗಲಿ ಎಂದು ಹೇಳಿರುವ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿಯವರ ಹೇಳಿಕೆ ಸಂವಿಧಾನ ವಿರೋಧಿಯಾಗಿದೆ ಎಂದು ಪ್ರಗತಿಪರ ಚಿಂತಕರಾದ ಪ್ರೊ॥ ಜಿ.ಕೆ.ಗೋವಿಂಧರಾವ್‌ರವರು ಹೇಳಿದರು. ಪ್ರಗತಿಪರ ಸಂಘಟನೆಗಳು–ಸಾಹಿತಿಗಳು–ಚಿಂತಕರು ಸೇರಿ ಈಗ ರಾಜ್ಯ ಸರ್ಕಾರ ಸರ್ಕಾರಿ ಶಾಲೆಗಳಲ್ಲಿ ನಡೆಸುತ್ತಿರುವ ಭಗವದ್ಗೀತೆ ಅಭಿಯಾನ ಹಾಗೂ ಶಿಕ್ಷಣ ಸಚಿವ ಕಾಗೇರಿ ಹೇಳಿಕೆ ವಿರುದ್ಧ ನಡೆಸುತ್ತಿದ್ದ ಪ್ರತಿಭಟನಾ ಧರಣಿಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು ಭಾರತ ದೇಶದ ಪ್ರತಿಯೊಬ್ಬ ನಾಗರೀಕರಿಗೂ ಪ್ರಜಾಪ್ರಭುತ್ವವೇ ನಮ್ಮ ಧರ್ಮ, ಸಂವಿಧಾನವೇ ನಮ್ಮ ಧರ್ಮ ಗ್ರಂಥವೆಂಬುದು ಶಿಕ್ಷಣ ಸಚಿವರು ಅರಿಯಬೇಕೆಂದರು.

ಸಂವಿಧಾನದ ಮೌಲ್ಯಗಳನ್ನು ಒಪ್ಪಿಕೊಂಡು ಅವುಗಳನ್ನು ಸ್ವೀಕರಿಸಿರುವ ಇಂತಹ ಸಂದರ್ಭದಲ್ಲಿ ಏಕಪಕ್ಷೀಯವಾಗಿ ಶಾಲೆಗಳಲ್ಲಿ ಭಗವದ್ಗೀತೆಯನ್ನು ಬೋಧಿಸುತ್ತಿರುವ ಬಿಜೆಪಿ ಸರ್ಕಾರದ ಕ್ರಮ ಫ್ಯಾಸಿಸ್ಟ್ ಧೋರಣೆಯದ್ದಾಗಿದೆ.



ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲದಿರುವ ಶಿಕ್ಷಣ ಸಚಿವ ಕಾಗೇರಿಯವರು ಸರ್ಕಾರದಲ್ಲಿ ಸಚಿವರಾಗಿ ಮುಂದುವರಿಯಲು ಯೋಗ್ಯತೆ ಇಲ್ಲ ಎಂದು ಬಂಡಾಯ ಸಾಹಿತಿಗಳಾದ ಪ್ರೊ॥ ಚಂದ್ರಶೇಖರ್ ಪಾಟೀಲ್(ಚಂಪಾ)ರವರು ಹೇಳಿದರು.

ಜಾತಿ, ವರ್ಣ ವ್ಯವಸ್ಥೆಯನ್ನು ಸಮರ್ಥಿಸುವ ಭಗವದ್ಗೀತೆ ಪಠಣ ಶಾಲೆಗಳಲ್ಲಿ ಅಗತ್ಯವಿಲ್ಲ. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸುವ, ವೈಜ್ಞಾನಿಕ–ವೈಚಾರಿಕ ಶಿಕ್ಷಣ ನೀಡುವುದು ಇಂದಿನ ತುರ್ತು ಅಗತ್ಯವಿದೆ. ಶಾಲೆಗಳಲ್ಲಿ ಯಾವುದೇ ಧರ್ಮ ಗ್ರಂಥದ ಬೋಧನೆ ಅವಶ್ಯಕತೆ ಇಲ್ಲ ಎಂದು ಖ್ಯಾತ ವಿಮರ್ಶಕರಾದ ಪ್ರೊ॥ ಕೆ.ಮರುಳಸಿದ್ದಪ್ಪರವರು ತಿಳಿಸಿದರು.

ಸಮಾಜದಲ್ಲಿರುವ ಅನಿಷ್ಠ, ಪಾಳೇಗಾರಿಕೆಯನ್ನು ಅನ್ಯಾಯವನ್ನು ಪ್ರಶ್ನಿಸುವವರ ನಾಲಿಗೆ ಕತ್ತರಿಸುವ ತತ್ವಶಾಸ್ತ್ರ ಇದಾಗಿದೆ.ವರ್ಣ ವ್ಯವಸ್ಥೆಯನ್ನು ಒಪ್ಪಿಕೊಂಡು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ದುಡಿಯಬೇಕೆಂಬ ಅಂಶಗಳು ದುಡಿಯುವವರ ವಿರೋಧಿಯಾಗಿದೆ. ಇಂತಹ ವಿಚಾರಗಳನ್ನೊಳಗೊಂಡ ಭಗವದ್ಗೀತೆಯನ್ನು ಶಾಲೆಗಳಲ್ಲಿ ಬೋಧಿಸುವುದನ್ನು ನಿಲ್ಲಿಸಬೇಕೆಂದು ಹೊಸತು ಪತ್ರಿಕೆ ಸಂಪಾದಕರಾದ ಡಾ॥ ಜಿ. ರಾಮಕೃಷ್ಣರವರು ಸರ್ಕಾರವನ್ನು ಒತ್ತಾಯಿಸಿದರು.

ಶಿಕ್ಷಣವನ್ನು ಕೋಮುವಾದೀಕರಿಸಲು ನಿರಂತರವಾಗಿ ಪ್ರಯತ್ನಿಸುತ್ತಿರುವ ಬಿಜೆಪಿ ಸರ್ಕಾರ ಮತ್ತು ಶಿಕ್ಷಣ ಸಚಿವ ಕಾಗೇರಿ ಸಂವಿಧಾನ ವಿರೋಧಿಯಾಗಿ ವರ್ತಿಸುತ್ತಿರುವುದು ಖಂಡನೀಯ ಎಂದು ದ.ಸಂ.ಸ(ಅಂಬೇಡ್ಕರ್ ವಾದ) ಮುಖಂಡರಾದ ಮಾವಳ್ಳಿ ಶಂಕರ್ ಹೇಳಿದರು.

ಚಲನಚಿತ್ರ ನಿರ್ದೇಶಕ, ಬಿ.ಸುರೇಶ್, ಮಠ-ಮಾನ್ಯಗಳಿಗೆ ಸೇರಿದ ಶಾಲೆಗಳ ವಿದ್ಯಾರ್ಥಿಗಳು ಸೇರಿದಂತೆ ವಿದ್ಯಾರ್ಥಿ ಸಮುದಾಯದಲ್ಲಿ ಶಾಲೆಗಳಲ್ಲಿನ ಈ ಭಗವದ್ಗೀತಾ ಅಭಿಯಾನಕ್ಕೆ ವ್ಯಾಪಕ ವಿರೋಧವಿದೆ ಎಂದರು. ಟಿಪ್ಪುಸುಲ್ತಾನ್ ಸಂಯುಕ್ತರಂಗ ಮಹಮ್ಮದ್ ಖರೇಶಿ, ಪತ್ರಕರ್ತರಾದ ರಾಮಣ್ಣ ಕೊಡಿಹೊಸಹಳ್ಳಿ, ಜನಶಕ್ತಿ ಪತ್ರಿಕೆ ಸಂಪಾದಕರಾದ ಎಸ್.ವೈ.ಗುರುಶಾಂತ್, ಎಸ್‌ಎಫ್‌ಐ–ಡಿವೈಎಫ್‌ಐ–ಜೆಎಂಎಸ್–ಸಮುದಾಯ–ದಲಿತ ಸಂಘರ್ಷ ಸಮಿತಿ ಸಂಘಟನೆ ಕಾರ್ಯಕರ್ತರು ಭಾಗವಹಿಸಿದ್ದರು.

ರಾಜ್ಯಪಾಲರಿಗೆ ಮನವಿ: ಸಾಹಿತಿ–ಚಿಂತಕರು–ಪ್ರಗತಿ ಪರ ಸಂಘಟನೆಗಳ ಮುಖಂಡರ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿ ಸರ್ಕಾರಿ ಶಾಲೆಗಳಲ್ಲಿ ಭಗವದ್ಗೀತೆ ಅಭಿಯಾನ ನಿಲ್ಲಿಸಲು ಸರ್ಕಾರಕ್ಕೆ ಸೂಚಿಸುವಂತೆ ಒತ್ತಾಯಿಸಲಾಯಿತು.

ಅಭಿವೃದ್ಧಿ ನೆಪ–ಸಾರ್ವಜನಿಕ ಸಂಪತ್ತಿನ ಹಗಲು ದರೋಡೆ – ವಿ. ಗೋಪಾಲಗೌಡ ತೀವ್ರ ಆತಂಕ

ಸಂವಿಧಾನದ ಆಶಯದ ವಿರುದ್ಧ ಅಭಿವೃದ್ಧಿ ನೆಪ ಒಡ್ಡಿ ಸಾರ್ವಜನಿಕ ಸಂಪತ್ತನ್ನು ಹಗಲು ದರೋಡೆ ನಡೆಸಲಾಗುತ್ತಿದೆ. ದೇಶದ ಎಲ್ಲರಿಗೂ ಸೇರಿದ ಮುಂದಿನ ಪೀಳಿಗೆಗೆ ಕಾಪಾಡಿ ಇಡಬೇಕಾದ ಅರಣ್ಯ, ಖನಿಜ ಮುಂತಾದ ಸಂಪತ್ತನ್ನು ಖಾಸಗಿ ಲೂಟಿಗೆ ಮುಕ್ತ ಮಾಡಿ ಮಾನವ ಹಕ್ಕುಗಳನ್ನು ಉಲ್ಲಂಘಿಸಲಾಗುತ್ತಿದೆ ಎಂದು ಒರಿಸ್ಸಾ ಉಚ್ಚ ನ್ಯಾಯಾಲಯದ ಗೌರವಾನ್ವಿತ ಮುಖ್ಯ ನ್ಯಾಯಾಧೀಶರಾದ ವಿ. ಗೋಪಾಲ ಗೌಡ ರವರು ತೀವ್ರ ಆತಂಕ ವ್ಯಕ್ತಪಡಿಸಿದರು. ಜೂನ್ 5ರಂದು ನ್ಯಾಯಾಲಯದ ಆವರಣದಲ್ಲಿ ಅಖಿಲ ಭಾರತ ವಕೀಲರ ಸಂಘ, ಕಾನೂನು ಸೇವೆಗಳ ಪ್ರಾಧಿಕಾರ, ಮಳವಳ್ಳಿ ತಾ॥ ವಕೀಲರ ಸಂಘ ಜಂಟಿಯಾಗಿ ಸಂಘಟಿಸಿದ್ದ "ವಿಶ್ವ ಪರಿಸರ ದಿನಾಚರಣೆ"ಯನ್ನು ಉದ್ಘಾಟಿಸಿ ಅವರು ಮಾತಾನಾಡುತ್ತಿದ್ದರು.

ಭಾರತ ದೇಶ ಕೃಷಿ ಪ್ರಧಾನವಾದ ದೇಶ ಶೇ. 70ರಷ್ಟು ಜನ ಹಳ್ಳಿಗಾಡಿನಲ್ಲೆ ವಾಸಿಸುತ್ತಿದ್ದಾರೆ. ಸ್ವಾತಂತ್ರ್ಯ ಬಂದ ಇಷ್ಟು ವರ್ಷದ ನಂತರವೂ ರೈತರ–ಕೃಷಿಕೂಲಿಕಾರರ ಸಮಸ್ಯೆಗಳು ಬಗೆಹರಿದಿಲ್ಲ. ಇಂತಹ ಸಂದರ್ಭದಲ್ಲಿ ಎಗ್ಗಿಲ್ಲದೆ ನಡೆಯುತ್ತಿರುವ ಪರಿಸರ ನಾಶದಿಂದ ಕೋಟ್ಯಾಂತರ ದುಡಿಮೆಗಾರರ ಬದುಕಿಗೆ ಸಂಚಕಾರ ಬಂದಿದೆ. ಜಾಗತಿಕ ತಾಪಮಾನದಲ್ಲಿ ಆಗುತ್ತಿರುವ ಏರಿಕೆಯಿಂದ ಆಹಾರ ಭದ್ರತೆಗೆ ಧಕ್ಕೆ ಬಂದಿರುವುದನ್ನು ಬಹಳ ಎಚ್ಚರಿಕೆಯಿಂದ ಎದುರಿಸಬೇಕು ಎಂದು ಸಲಹೆ ನೀಡಿದರು.

ಗ್ರಾಮೀಣ ಪ್ರದೇಶದ ಬಾಲ್ಯಜೀವನವನ್ನು ಮೆಲುಕು ಹಾಕಿದ ಗೌರವಾನ್ವಿತರು ಹಳ್ಳಿಗಳ ಬದಲಾಗುತ್ತಿರುವ ಸ್ವರೂಪವನ್ನು ಪಟ್ಟಿ ಮಾಡಿ ಪಾರಂಪರಿಕ ಜ್ಞಾನ ನಶಿಸಿ ಹೋಗುತ್ತಿರುವುದನ್ನು ವಿವರಿಸಿದರು. ವಾಣಿಜ್ಯೀಕಾರಣ ಗೊಳ್ಳುತ್ತಿರುವ ಇವತ್ತಿನ ದಿನಗಳಲ್ಲಿ ಆರೋಗ್ಯ, ಶಿಕ್ಷಣ ವ್ಯವಸ್ಥೆಯನ್ನು ಎಲ್ಲರಿಗೂ ಕೈಗೆಟುಕುವಂತೆ ಮಾಡುವುದು ದೇಶದ ಸಮಗ್ರ ಸುಸ್ಥಿರ ಅಭಿವೃದ್ಧಿಗೆ ಕಾಣಿಕೆ ಎಂದು ವಿಶ್ಲೇಷಿಸಿದರು.

ಇದೇ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ AILU ರಾಜ್ಯ ಕಾರ್ಯದರ್ಶಿ ಖ್ಯಾತ ವಕೀಲ ಶಂಕರಪ್ಪರವರು ನ್ಯಾಯಾಂಗದ ಕ್ರಿಯಾಶೀಲತೆಯಿಂದಾಗಿ ಸಂವಿಧಾನದ ಸಂರಕ್ಷಣೆ ಸಾಧ್ಯವಾಗುವುದು. ವ್ಯಾಪಕಗೊಳ್ಳುತ್ತಿರುವ ಪರಿಸರ ಮಾಲಿನ್ಯದ ವಿರುದ್ಧ ಕ್ರಿಯಾಶೀಲವಾದ ಪಾತ್ರವನ್ನು ಸಮಾಜದ ಎಲ್ಲಾ ವಿಭಾಗಗಳು ನಿರ್ವಹಿಸಿದಾಗ ಮಾತ್ರ ನ್ಯಾಯಾಂಗದ ಕ್ರಿಯಾಶೀಲತೆ ಅರ್ಥಪೂರ್ಣವಾಗುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ವಿ.ಗೋಪಾಲ ಗೌಡರನ್ನು ಮಳವಳ್ಳಿ ತಾ. ವಕೀಲರ ಸಂಘದ ಪರವಾಗಿ, ರೈತ ಕೂಲಿಕಾರರ ಒಕ್ಕೂಟದವರು, ಶಿಕ್ಷಕವೃಂದ, ದುಡಿಯುವ ಮಹಿಳೆಯರು, ಪುರಸಭೆ, ಸ್ಥಾಯಿ ಸಮಿತಿ ಅಧ್ಯಕ್ಷರು, ಸದಸ್ಯರುಗಳು ಸೇರಿದಂತೆ ಹಲವು ಮಹಿಳಾ ಸಂಘಗಳು ಕಾನೂನು ಸೇವೆಗಳ ಪ್ರಾಧಿಕಾರದ ಮೂಲಕ ಕರ್ನಾಟಕದಲ್ಲಿ ಶ್ರೀಯುತರು ನಡೆಸಿದ ಹಲವು ಸಾಮಾಜಿಕ ಕಾರ್ಯಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡು ಗೌರವಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ ಎ.ವಿ.ಚಂದ್ರಶೇಖರ್ ವಹಿಸಿದರು. ಮಳವಳ್ಳಿ ತಾ॥ ಹಿರಿಯ ನ್ಯಾಯಾಧೀಶರಾದ ಹೇಮ ಪಸ್ತಾಪುರ, ವಕೀಲರ ಸಂಘದ ಅಧ್ಯಕ್ಷರಾದ ಸತೀಶ, AILU ಜಿಲ್ಲಾ ಸಂಚಾಲಕ ಶ್ರೀನಿವಾಸ ಕುಮಾರ ಮುಂತಾದವರು ಉಪಸ್ಥಿತರಿದ್ದರು.

ವರದಿ: ಯಶವಂತ, ಮಂಡ್ಯ



ಎಡಪಕ್ಷಗಳ ಪ್ರತಿಭಟನೆ, ದಲಿತ ಹೋರಾಟ ಇತ್ಯಾದಿ

ಭ್ರಷ್ಟಾಚಾರದ ವಿರುದ್ಧ ಎಡಪಕ್ಷಗಳ ಪ್ರತಿಭಟನೆ

ಭ್ರಷ್ಟಾಚಾರದ ವಿರುದ್ಧ ಎಡಪಕ್ಷಗಳಿಂದ ರಾಷ್ಟ್ರವ್ಯಾಪಿ ಹೋರಾಟ ಜುಲೈ 15 ರಿಂದ ಜುಲೈ 21ರ ವರೆಗೆ ಹಮ್ಮಿಕೊಂಡುದುದರ ಭಾಗವಾಗಿ, ಜುಲೈ 15 ರಂದು ಮಂಗಳೂರಿನಲ್ಲಿ ಸಿಪಿಐ ಮತ್ತು ಸಿಪಿಐ(ಎಂ) ಪಕ್ಷಗಳು ಜಂಟಿಯಾಗಿ ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಿದ್ದವು.



ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಸಿಪಿಎಂ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಹಾಗೂ ಸಿಪಿಐ ಜಿಲ್ಲಾ ಸಹ ಕಾರ್ಯದರ್ಶಿ ಬಿ.ಶೇಖರ್ ಮಾತಾಡಿದರು. ಪ್ರತಿಭಟನೆಯ ನೇತೃತ್ವವನ್ನು ಸಿಪಿಎಂ ಜಿಲ್ಲಾ ಸಮಿತಿ ಮುಖಂಡರಾದ ಕೆ.ಆರ್.ಶ್ರೀಯಾನ್, ಜೆ.ಬಾಲಕೃಷ್ಣ ಶೆಟ್ಟಿ, ಯು.ಬಿ.ಲೋಕಯ್ಯ, ಕೆ.ಯಾದವ ಶೆಟ್ಟಿ, ವಾಸು ಗಟ್ಟಿ, ಸಂಜೀವ ಬಂಗೇರ, ಕೃಷ್ಣಪ್ಪ ಸಾಲ್ಯಾನ್, ಸುನೀಲ್ ಕುಮಾರ್ ಬಜಾಲ್, ಸುಕುಮಾರ್, ಬಾಬು ದೇವಾಡಿಗ, ಸಿಪಿಐನ ಸೀತಾರಾಮ್ ಬೇರಿಂಜೆ, ಕರುಣಾಕರ್, ಭಾಸ್ಕರ್, ಹೆನ್ರಿ ಲೋಬೋ ಮತ್ತಿತರರು ವಹಿಸಿದ್ದರು.ಸಿಪಿಎಂನ ವಸಂತ ಆಚಾರಿ ಸ್ವಾಗತಿಸಿ, ಸಿಪಿಐನ ಬಿ.ಸುರೇಶ್ ವಂದಿಸಿದರು.

ಕುಂದಾಪುರದಲ್ಲಿ ಸಿಪಿಐ(ಎಂ) ಪ್ರತಿಭಟನೆ ಸಾರ್ವಜನಿಕ ಸಭೆ

2011 ಜುಲೈ 15ರಿಂದ 21ರ ವರೆಗೆ ಭ್ರಷ್ಟಾಚಾರದ ವಿರುದ್ಧ ಎಡಪಕ್ಷಗಳ ರಾಷ್ಟ್ರ ವ್ಯಾಪಿ ಚಳುವಳಿಯ ಅಂಗವಾಗಿ ಕೇಂದ್ರ ರಾಜ್ಯ ಸರಕಾರಗಳ ನೀತಿಯನ್ನು ಪ್ರತಿಭಟಿಸಿ ಕುಂದಾಪುರದಲ್ಲಿ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ತಾರೀಕು 15-07-2011ರಂದು ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಯಿತು.

ಸಾರ್ವಜನಿಕ ಸಭೆಯನ್ನುದ್ದೇಶಿಸಿ, ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ. ಶಂಕರ್‌ರವರು ಮಾತನಾಡಿರು.

ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಎಚ್. ನರಸಿಂಹ ರವರು ವಹಿಸಿದರು. ಜಿಲ್ಲಾ ಸಮಿತಿಯ ಸದಸ್ಯರಾದ ವೆಂಕಟೇಶ ಕೋಣಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಆರಂಭದಲ್ಲಿ ತಾಲೂಕು ಕಾರ್ಯದರ್ಶಿಯುವರಾದ ಮಹಾಬಲ ವಡೇರಹೋಬಳಿ ಸ್ವಾಗತಿಸಿ ಕೊನೆಗೆ ಶ್ರೀಯುತ ಮುತ್ತಯ್ಯ ಕನ್ಯಾನ ಧನ್ಯವಾದ ನೀಡಿದರು.



ಮಂಗಳೂರು ಮಹಾನಗರ ಪಾಲಿಕೆಗೆ ದಲಿತರ ಪಾದಯಾತ್ರೆ

ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯ ಮುಲ್ಲಕಾಡು ಆಕಾಶಭವನ ಪ್ರದೇಶದಲ್ಲಿ ರಸ್ತೆ ಅಗಲೀಕರಣಕ್ಕಾಗಿ ಪರ್ಯಾಯ ವ್ಯವಸ್ಥೆಯನ್ನು ಮಾಡದೆ ದಲಿತರ ಮನೆಗಳನ್ನು ನೆಲಸಮ ಮಾಡುವ ಮಹಾನಗರ ಪಾಲಿಕೆ ಯತ್ನವನ್ನು ಖಂಡಿಸಿ ದಲಿತ ಹಕ್ಕುಗಳ ಹೋರಾಟ ಸಮಿತಿ ಮತ್ತು ಸಿಪಿಎಂ ಮಂಗಳೂರು ನಗರ ಸಮಿತಿ ವತಿಯಿಂದ ಜೂನ್ 18 ರಂದು ಮುಲ್ಲಕಾಡಿನಿಂದ ಪಾಲಿಕೆ ಕಚೇರಿವರೆಗೆ ಪಾದಯಾತ್ರೆ ನಡೆಸಲಾಯಿತು. ಬಳಿಕ ಪಾಲಿಕೆ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು.



ಪಾದಯಾತ್ರೆಯನ್ನು ಉದ್ಘಾಟಿಸಿ ಮಾತನಾಡಿದ ಸಿಪಿಎಂ ಜಿಲ್ಲಾ ಸಮಿತಿ ಸದಸ್ಯ ಕೃಷ್ಣಪ್ಪ ಕೊಂಚಾಡಿ ರಸ್ತೆಯ ಹೆಸರಿನಲ್ಲಿ 50 ವರ್ಷಗಳಿಂದ ಮುಲ್ಲಕಾಡಿನಲ್ಲಿ ವಾಸಿಸುತ್ತಿರುವ 10 ದಲಿತ ಕುಟುಂಬಗಳನ್ನು ರಸ್ತೆ ವಿಸ್ತರಣೆಗಾಗಿ ಮನೆ ಬಿಡುವಂತೆ ಒತ್ತಾಯಿಸಲಾಗುತ್ತಿದೆ ಎಂದು ದೂರಿದರು. 'ಬಿಜೆಪಿ ಸರ್ಕಾರ ಬಂದ ಬಳಿಕ ದಲಿತರನ್ನು ಒಕ್ಕಲೆಬ್ಬಿಸುವ ಕೆಲಸ ನಡೆಯುತ್ತಿದೆ. ಹಲವಾರು ವರ್ಷಗಳಿಂದ ವಾಸವಿರುವ ಮನೆಗಳಿಗೆ ಮನೆ ನಂಬ್ರ, ರೇಶನ್ ಕಾರ್ಡು ನೀಡಲು ಸತಾಯಿಸಲಾಗುತ್ತಿದೆ. ಈ ಹಿಂದೆ ಹೆದ್ದಾರಿ ವಿಸ್ತರಣೆ ಹೆಸರಿನಲ್ಲಿ ಕೆಲವು ಆದಿವಾಸಿ ಕೊರಗ ಕುಟುಂಬಗಳನ್ನು ಒಕ್ಕಲೆಬ್ಬಿಸಲಾಯಿತು. ಈಗ ಮುಲ್ಲಕಾಡಿನಲ್ಲಿ ವಾಸವಾಗಿರುವ ಬಡ ದಲಿತರನ್ನು ಒಕ್ಕಲೆಬ್ಬಿಸಲು ಮುಂದಾಗಿದೆ' ಎಂದು ಕಿಡಿ ಕಾರಿದರು.


ಸಿಪಿಎಂ ನಗರ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಸಿಪಿಎಂ ಜಿಲ್ಲಾ ಸಮಿತಿ ಸದಸ್ಯ ವಸಂತ ಆಚಾರಿ, ಪಿಯುಸಿಎಲ್‌ನ ಸುರೇಶ್‌ಭಟ್ ಬಾಕ್ರಬೈಲ್, ದಲಿತ ಹಕ್ಕುಗಳ ಸಮಿತಿಯ ನಗರ ಕಾರ್ಯದರ್ಶಿ ಲಿಂಗಪ್ಪ ನಂತೂರು ಪ್ರತಿಭಟನೆಯನ್ನು ಬೆಂಬಲಿಸಿ ಮಾತನಾಡಿದರು.

6 ಕಿ.ಮೀ.ಉದ್ದದ ಈ ಪಾದಯಾತ್ರೆಗೆ ದ.ಕ.ಜಿಲ್ಲಾ ಪ್ರಗತಿಪರ ಚಿಂತಕರ ವೇದಿಕೆಯ ಅಧ್ಯಕ್ಷ ಪಿ.ಎ.ಪ್ರಸನ್ನ ಚಾಲನೆ ನೀಡಿದರು. ನೂರಕ್ಕೂ ಹೆಚ್ಚು ಮಂದಿ ಪಾದಯಾತ್ರೆಯಲ್ಲಿ ಭಾಗವಹಿಸಿದರು. ಪ್ರತಿಭಟನೆಯ ನೇತೃತ್ವವನ್ನು ಯಮುನಾ ಪಚ್ಚನಾಡಿ, ಜಯಕುಮಾರ್, ಸುನಂದಾ, ತಿಮ್ಮಯ್ಯ, ಪ್ರಶಾಂತ್ ಎಂ.ಬಿ., ಮನೋಜ್ ಉರ್ವಸ್ಟೋರ್, ಹರೀಶ್ ಬೋಳೂರು, ಶಶಿಕಲಾ, ಮಾಧವ, ಬೇಬಿ ಮುಂತಾದವರು ವಹಿಸಿದ್ದರು.

ಭಗವದ್ಗೀತೆ ಅಭಿಯಾನ ವಿರೋಧಿಸಿ ಮಂಗಳೂರಿನಲ್ಲಿ ಎಸ್‌ಎಫ್‌ಐ ಪ್ರತಿಭಟನೆ

ಧರ್ಮನಿರಪೇಕ್ಷ ಭಾರತದಲ್ಲಿ ಭಗವದ್ಗೀತೆಯನ್ನಾಗಲೀ ಅಥವಾ ಇತರೇ ಯಾವುದೇ ಧರ್ಮಗ್ರಂಥಗಳನ್ನಾಗಲೀ ಕಡ್ಡಾಯಗೊಳಿಸುವುದು ಸಂವಿಧಾನ ಬಾಹಿರವಾದುದು. ಕರ್ನಾಟಕ ರಾಜ್ಯ ಸರ್ಕಾರವು ಸರ್ಕಾರೀ ಪ್ರೌಢಶಾಲೆಗಳಲ್ಲಿ ಕೈಗೊಂಡಿರುವ ಭಗವದ್ಗೀತಾ ಅಭಿಯಾನವನ್ನು ಎಸ್‌ಎಫ್‌ಐ ವಿರೋಧಿಸುತ್ತದೆ. ಈ ಅಭಿಯಾನವನ್ನು ವಿರೋಧಿಸುವವರು ದೇಶಬಿಟ್ಟು ತೊಲಗಲಿ ಎಂದು ಹೇಳಿಕೆ ಕೊಟ್ಟಿರುವ ರಾಜ್ಯದ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಸಂವಿಧಾನ ಬಾಹಿರವಾಗಿ ವರ್ತಿಸುತ್ತಿದ್ದು, ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕೆಂದು ಜೂನ್ 20 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಎಸ್‌ಎಫ್‌ಐ ದ.ಕ.ಜಿಲ್ಲಾ ಸಮಿತಿ ಕರೆ ನೀಡಿ ಪ್ರತಿಭಟಿಸಿದೆ. ರಾಜ್ಯವ್ಯಾಪಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಡೆದ ಕಾರ್ಯಕ್ರಮಗಳ ಭಾಗವಾಗಿ ಈ ಪ್ರತಿಭಟನೆಯನ್ನು ಏರ್ಪಡಿಸಲಾಗಿತ್ತು.

ಪ್ರತಿಭಟನೆಯನ್ನುದ್ದೇಶಿಸಿ ಎಸ್‌ಎಫ್‌ಐ ದ.ಕ.ಜಿಲ್ಲಾ ಅಧ್ಯಕ್ಷ ಸುಜಿತ್ ಬೆಳ್ತಂಗಡಿ, ಕಾರ್ಯದರ್ಶಿ ಮನೋಜ್ ವಾಮಂಜೂರು, ಡಿವೈಎಫ್‌ಐ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ, ಕಾರ್ಯದರ್ಶಿ ದಯಾನಂದ ಶೆಟ್ಟಿ ಮಾತನಾಡಿದರು. ಚರಣ್ ಸ್ವಾಗತಿಸಿ, ರೂಪೇಶ್ ಕುಮಾರ್ ವಂದಿಸಿದರು. ಎಸ್‌ಎಫ್‌ಐ ಮುಖಂಡರಾದ ಅಜೀಜ್ ಕೃಷ್ಣಾಪುರ, ಮೋಜೇಶ್ ಬಂಟ್ವಾಳ, ತುಲಸೀದಾಸ್ ವಿಟ್ಲ, ರಜಾಕ್ ಮೊಂಟೆಪದವು, ಚಾಂದಿನಿ ಬೋಳಾರ್, ದಿವ್ಯಾ, ನಿತಿನ್ ಕುತ್ತಾರ್ ಮತ್ತಿತರರು ಪಾಲ್ಗೊಂಡಿದ್ದರು.



'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಜುಲೈ 22 ರ ಸಂಚಿಕೆ ಸಂಪಾದಕೀಯ ಆಧರಿಸಿ

ಅಮೆರಿಕಾದ ಅಡಿಯಾಳು ಮಿತ್ರ ಭಾರತ–ಅಮೆರಿಕಾ ಜಂಟಿ ಹೇಳಿಕೆಯ ಸಾರ

ಭಾರತ–ಅಮೆರಿಕಾ 'ಆಯಕಟ್ಟಿನ ಸಂವಾದ' ಯಾವ ದಿಕ್ಕಿನಲ್ಲಿ ಸಾಗಿದೆ ಎಂಬುದನ್ನು ಗಮನಿಸಿದರೆ ಇದು ಭಾರತದ ಮಟ್ಟಿಗೆ ಅಮೆರಿಕನ್ ಸಾಮ್ರಾಜ್ಯಶಾಹಿಯ ಕಾರ್ಯತಂತ್ರಗಳಲ್ಲಿ ಜಾಗತಿಕ ಭೌಗೋಳಿಕ–ರಾಜಕೀಯ ಅಡಿಯಾಳು ಮಿತ್ರನ ಪಾತ್ರವನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ ಎಂಬುದು ಸ್ಪಷ್ಟ. ಭಾರತದ ಶಕ್ತಿ ಅಡಗಿದ್ದುದು ಅಂತರ್ರಾಷ್ಟ್ರೀಯ ವ್ಯವಹಾರಗಳಲ್ಲಿ ಅದರ ಸ್ವತಂತ್ರ ಪಾತ್ರದಿಂದಾಗಿ, ಈಗಲೂ ಅದು ಆಧರಿಸಿರುವುದು ಅಭಿವೃದ್ಧಿಶೀಲ ಜಗತ್ತಿನ ಕೋಟ್ಯಂತರ ನಿವಾಸಿಗಳ ಆಕಾಂಕ್ಷೆಗಳನ್ನು ಬಿಂಬಿಸುವ ಅದರ ಸ್ವತಂತ್ರ ಪಾತ್ರವನ್ನು. ಭಾರತ–ಅಮೆರಿಕಾ ಪರಮಾಣು ಒಪ್ಪಂದದಿಂದ ಆರಂಭವಾದ 'ಸಂವಾದ'ಗಳು ಅದರ ಈ ಸ್ವತಂತ್ರ ಪಾತ್ರವನ್ನು ನಿರಾಕರಿಸುತ್ತವೆ.



2008ರಲ್ಲಿ ಅಂತಿಮಗೊಳಿಸಿದ ಭಾರತ–ಅಮೆರಿಕಾ ಪರಮಾಣು ವ್ಯವಹಾರ ವಾಸ್ತವವಾಗಿ ಭಾರತವನ್ನು ಅಮೆರಿಕನ್ ಸಾಮ್ರಾಜ್ಯಶಾಹಿಯ ಜಾಗತಿಕ ತಂತ್ರಗಳಲ್ಲಿ ಒಂದು ಅಡಿಯಾಳು ಮಿತ್ರನಾಗಿ ಸೆಳೆದುಕೊಳ್ಳುವ ಪ್ರಯತ್ನದ ಆರಂಭ ಎಂದು ಎಡಪಕ್ಷಗಳು ಈ ಹಿಂದೆ ಸಂದೇಹ ವ್ಯಕ್ತಪಡಿಸಿದ್ದವು. ಅದನ್ನೀಗ ಎರಡನೇ ಭಾರತ–ಅಮೆರಿಕಾ ಆಯಕಟ್ಟಿನ ಸಂವಾದಗಳ ನಂತರ ಹೊರಡಿಸಿದ ಜಂಟಿ ಹೇಳಿಕೆ ಪೂರ್ಣವಾಗಿ ದೃಢಪಡಿಸಿದೆ. ಇದು ಎರಡು ದೇಶಗಳ ನಡುವಿನ ಆಯಕಟ್ಟಿನ ಸಂಬಂಧವಷ್ಟೇ ಅಲ್ಲ, ನಮ್ಮ ದೇಶ ಅಮೆರಿಕಾದ ಭೌಗೋಳಿಕ–ರಾಜಕೀಯ ಕಾರ್ಯತಂತ್ರದಲ್ಲಿ ಒಂದು ಭಾಗವೇ ಆಗಿ ಬಿಟ್ಟಿದೆ.

ಎರಡೂ ದೇಶಗಳು "ಭಾರತ–ಅಮೆರಿಕಾ ಜಾಗತಿಕ ಆಯಕಟ್ಟಿನ ಪಾಲುದಾರಿಕೆಯನ್ನು ಇನ್ನಷ್ಟು ವಿಸ್ತಾರಗೊಳಿಸುವುದನ್ನು ಮತ್ತು ಆಳಗೊಳಿಸುವುದನ್ನು ಮುಂದುವರೆಸಲು ಕಟಿಬದ್ಧವಾಗಿವೆ" ಎಂದು ಈ ಜಂಟಿ ಹೇಳಿಕೆ ಬಿಂಬಿಸುತ್ತದೆ. ಈ "ಸಂಬಂಧದ ವಿಶಿಷ್ಟ ಹರಹಿನ ಮತ್ತು ಆಳದ" ಬಗ್ಗೆ ಹೇಳುತ್ತಾ ಇದು "2010ರಲ್ಲಿ ಆಯಕಟ್ಟಿನ ಸಂವಾದ ಆರಂಭವಾದಂದಿನಿಂದ ಭಾರತ–ಅಮೆರಿಕಾ ಪಾಲುದಾರಿಕೆಯ ಫಲಿತಾಂಶವಾಗಿ ಮಾನವ ಪ್ರಯತ್ನದ ಸುಮಾರು ಪ್ರತಿಯೊಂದು ರಂಗದಲ್ಲಿಯೂ ಮುನ್ನಡೆಗಳಾಗಿವೆ" ಎನ್ನುತ್ತದೆ. ಅಮೆರಿಕಾ ಭಾರತಕ್ಕೆ 'ಸಂಪೂರ್ಣ ನಾಗರಿಕ ಪರಮಾಣು ಸಹಕಾರ'ವನ್ನು ಕೊಡುತ್ತದೆ ಎಂದು ಯುಪಿಎ–1 ಸರಕಾರ ಭಾರತೀಯ ಸಂಸತ್ತಿಗೆ ತಿಳಿಸಿತ್ತು. ಅಮೆರಿಕಾ ಈಗ ಆ ಮಾತಿಗೆ ತಪ್ಪುತ್ತಿದೆ. ಈ ಬಗ್ಗೆ ಮುಂದೆ ನೋಡೋಣ.

ರಾಷ್ಟ್ರೀಯ ಮತ್ತು ಆಂತರಿಕ ಭದ್ರತೆಗೆ ಧಕ್ಕೆ

ಭಾರತ ಈಗ ಅಮೆರಿಕನ್ ಜಾಗತಿಕ ಕಾರ್ಯತಂತ್ರದ ಒಂದು ಭಾಗ ಎಂಬುದನ್ನು ದೃಢಪಡಿಸುತ್ತಾ ಈ ಹೇಳಿಕೆ "ಎರಡೂ ಕಡೆಯವರು ಜೂನ್ 2011ರಲ್ಲಿ ನವದೆಹಲಿಯಲ್ಲಿ ಒಂದು ಮಧ್ಯ ಏಶ್ಯಾ ಸಂವಾದವನ್ನು ಮತ್ತು ಜುಲೈ 2011ರಲ್ಲಿ ವಾಶಿಂಗ್ಟನ್ ಡಿ ಸಿ ಯಲ್ಲಿ ಪಶ್ಚಿಮ ಏಶ್ಯಾ ಸಂವಾದವನ್ನು ಆರಂಭಿಸಿದ್ದಾರೆ. ಎರಡೂ ಕಡೆಯವರು ಆಯಕಟ್ಟಿನ ಸಮಾಲೋಚನೆಗಳನ್ನು ಲ್ಯಾಟಿನ್ ಅಮೆರಿಕಾ ಮತ್ತು ಕರೆಬಿಯನ್ ಪ್ರದೇಶ ಸೇರಿದಂತೆ ಇತರ ಪ್ರದೇಶಗಳಿಗೂ ವಿಸ್ತರಿಸುವ ಆಶಯ ಹೊಂದಿದ್ದಾರೆ, ಹಾಗೂ ಸೆಪ್ಟಂಬರ್ 2011ರಲ್ಲಿ ಪೂರ್ವ ಏಶ್ಯಾ ಸಂವಾದದ ನಾಲ್ಕನೇ ಸುತ್ತನ್ನು ನಡೆಸುವ ಯೋಜನೆ ಹಾಕಿದ್ದಾರೆ. ಭಾರತ, ಅಮೆರಿಕಾ ಮತ್ತು ಜಪಾನ್ ಉನ್ನತ ಅಧಿಕೃತ ಮಟ್ಟದಲ್ಲಿ ಒಂದು ತ್ರಿಪಕ್ಷೀಯ ಸಂವಾದವನ್ನು ಆರಂಭಿಸುವ ಯೋಜನೆ ಹಾಕಿಕೊಂಡಿವೆ" ಎಂಬ ಮಾಹಿತಿಯನ್ನು ಕೊಡುತ್ತದೆ.

"ಅಫ಼ಘಾನಿಸ್ತಾನ'ದಲ್ಲಿ ಸಮಾಲೋಚನೆ, ಸಂಯೋಜನೆ ಮತ್ತು ಸಹಕಾರ"ಕ್ಕೆ ತಾವು ಬದ್ಧ ಎಂದು ಎರಡೂ ಕಡೆಯವರು ಮತ್ತೆ ದೃಢ ಪಡಿಸಿದ್ದಾರೆ. ಆಫ್ರಿಕಾ ಮತ್ತು ಜಗತ್ತಿನ ಇತರ ಭಾಗಗಳಲ್ಲೂ ಜಂಟಿ ಭಾರತ–ಅಮೆರಿಕಾ ಮುತುವರ್ಜಿಗಳ ಬಗ್ಗೆಯೂ ಹೇಳಿಕೆ ಮಾತಾಡುತ್ತದೆ.

ಇದು ಭಾರತದ ರಾಷ್ಟ್ರೀಯ ಮತ್ತು ಆಂತರಿಕ ಭದ್ರತೆಗೆ ಗಂಭೀರ ಪರಿಣಾಮ ಉಂಟು ಮಾಡುವಂತದ್ದು. ಅಮೆರಿಕನ್ ಸಾಮ್ರಾಜ್ಯಶಾಹಿ ಪ್ರಾಯೋಜಿಸುವ ಪ್ರಭುತ್ವ ಭಯೋತ್ಪಾದನೆ ಮತ್ತು ಮೂಲಭೂತವಾದಿ ಭಯೋತ್ಪಾದನೆಯ ಕೃತ್ಯಗಳು ಪರಸ್ಪರ ಪೋಷಿಸುವಂತವು ಎಂಬುದನ್ನು ನಾವು ಈ ಅಂಕಣದಲ್ಲಿ ಮತ್ತೆ–ಮತ್ತೆ ಚರ್ಚಿಸಿದ್ದೇವೆ. ಇರಾಕಿನಲ್ಲಿ ಅಮೆರಿಕನ್ ಮಿಲಿಟರಿ ಆಕ್ರಮಣ, ಅಫಘಾನಿಸ್ತಾನದಲ್ಲಿ ಅಮೆರಿಕನ್ ನೇತೃತ್ವದ ನಾಟೋ ಕಾರ್ಯಾಚರಣೆ, ಲಿಬ್ಯಾದ ವಿರುದ್ಧ ಅದರ ಇತ್ತೀಚಿನ ಮಿಲಿಟರಿ ಆಕ್ರಮಣ ಮತ್ತು ಪ್ಯಾಲೆಸ್ತೀನಿಯನ್ನರಿಗೆ ಅವರ ತಾಯ್ನಾಡಿನ ನೈಜ ಹಕ್ಕನ್ನು ನೀಡುವಲ್ಲಿ ಈಗಲೂ ನಿರಾಕರಣೆಯ ಹಠಮಾರಿ ನಿಲುವು– ಇವೆಲ್ಲ ಅಮೆರಿಕನ್ ಸಾಮ್ರಾಜ್ಯಶಾಹಿಯ ಯಾಜಮಾನಿಕೆಯ ಮತ್ತು ತನ್ನ ನೇತೃತ್ವದಲ್ಲಿ ಒಂದು ಏಕಪಕ್ಷೀಯ ವಿಶ್ವವ್ಯವಸ್ಥೆಯನ್ನು ಹೇರುವ ಪ್ರಯತ್ನದ ಉದಾಹರಣೆಗಳೆಂದು ಜಗತ್ತಿನಲ್ಲೆಲ್ಲ ಕಾಣಲಾಗುತ್ತಿದೆ. ಇಂತಹ ಒಂದು ಜಾಗತಿಕ ಕಾರ್ಯತಂತ್ರದಲ್ಲಿ ಅಮೆರಿಕಾದ ಭಾಗೀದಾರನಾಗುವುದು ಭಾರತದ ರಾಷ್ಟ್ರೀಯ ಅಥವ ಭದ್ರತಾ ಹಿತದೃಷ್ಟಿಯಿಂದ ಒಳ್ಳೆಯದಲ್ಲ.

ಹೆಚ್ಚಿನ ಒಳನೋಟಗಳೇನೂ ಇಲ್ಲ

ಜಾಗತಿಕ ಭಯೋತ್ಪಾದನೆಯನ್ನು ಜಂಟಿಯಾಗಿ ಎದುರಿಸುವ ಮತ್ತು ಭಯೋತ್ಪಾದನೆಗೆ ಪ್ರತಿಯಾದ ಸಹಕಾರವನ್ನು ಬಲಪಡಿಸುವ ಮಾತುಗಳನ್ನಾಡುತ್ತಲೇ ಈ ಹೇಳಿಕೆ "ನವಂಬರ್ 2008ರ ಮುಂಬೈ ಭಯೋತ್ಪಾದಕ ದಾಳಿಯಲ್ಲಿ ತೊಡಗಿದ್ದವರ ವಿಚಾರಣೆಯನ್ನು ಶೀಘ್ರವಾಗಿ ನಡೆಸಲು ಮುಂದಾಗಬೇಕು ಎಂದು ಪಾಕಿಸ್ತಾನಕ್ಕೆ ಕರೆ ನೀಡಿದೆ". ಹೀಗೆ ಇದು ನಡೆಯುವಂತೆಯಾಗಲೀ ಮತ್ತು ಹೆಡ್ಲಿ ಮುಂತಾದ ವಿಷಯಗಳಲ್ಲಾಗಲೀ ಅಮೆರಿಕಾ ಏನು ಮಾಡಬೇಕೆಂದಿದೆ ಎಂಬುದರ ಬಗ್ಗೆ ಭಾರತೀಯ ಜನತೆಗೆ ಹೆಚ್ಚಿನ ಒಳನೋಟಗಳೇನೂ ಈ ಹೇಳಿಕೆಯಲ್ಲಿ ಸಿಗುವುದಿಲ್ಲ.

ಈ ಹೇಳಿಕೆ ಹಲವಾರು ಪ್ರಶ್ನೆಗಳ ಬಗ್ಗೆ ಮಾತಾಡಿದೆ– ಸೈಬರ್ ಪ್ರಶ್ನೆಗಳಲ್ಲಿ, ಮುಕ್ತ ಮೂಲದ ಸರಕಾರದ ಮಾಹಿತಿಗಳನ್ನು ಒದಗಿಸುವ ಗಣಕ ತಂತ್ರಾಂಶ ವೇದಿಕೆಗಳು, ಚುನಾವಣಾ ನಿರ್ವಹಣಾ ಸಾಮರ್ಥ್ಯವನ್ನು ಬಲಪಡಿಸುವಲ್ಲಿ, ನಾಗರಿಕ ಭದ್ರತೆ ಮುಂತಾದವುಗಳಲ್ಲಿ ಸಹಕಾರದ ಮಾತುಗಳಿವೆ. ಆದರೆ ಈಗಲೂ 'ದ್ವಿಪಕ್ಷೀಯ ರಕ್ಷಣಾ ಸಹಕಾರದಲ್ಲಿ ಪ್ರಗತಿ'ಯ ಸ್ವಾಗತವೇ ಮುಖ್ಯ ವಿಷಯವಾಗುಳಿದಿದೆ. ಅಮೆರಿಕನ್ ಕಂಪನಿಗಳಿಗೆ ಭಾರತದಿಂದ ಸಿಕ್ಕ ಆರ್ಡರುಗಳ 'ಸಂಚಿತ ಮೌಲ್ಯ ಕಳೆದ ದಶಕದಲ್ಲಿ 8 ಬಿಲಿಯ ಡಾಲರುಗಳನ್ನು' ಅಂದರೆ 40,000 ಕೋಟಿ ರೂಪಾಯಿಗಳನ್ನು ದಾಟಿದೆ ಎಂದು ಈ ಹೇಳಿಕೆ ತಿಳಿಸುತ್ತದೆ. ಇದೀಗ ಅಮೆರಿಕಾದ ಪ್ರಾಥಮಿಕ ಗುರಿ – ರಕ್ಷಣಾ ಮತ್ತು ಪರಮಾಣು ವಿದ್ಯುತ್ ಉತ್ಪಾದನೆಯ ಕ್ಷೇತ್ರಗಳಲ್ಲಿ ತನ್ನ ವಾಣಿಜ್ಯ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಅಷ್ಟೇ ಮೌಲ್ಯದ ಪರಮಾಣು ರಿಯಾಕ್ಟರುಗಳನ್ನಾದರೂ ಮಾರುವುದು.

ಇನ್ನೊಂದು ಆತಂಕದ ಕ್ಷೇತ್ರವೆಂದರೆ ಶಿಕ್ಷಣ ಕ್ಷೇತ್ರದಲ್ಲಿನ ಯೋಜನೆಗಳು. ಈ ಜಂಟಿ ಹೇಳಿಕೆ ಈ ವರ್ಷ ಅಕ್ಟೋಬರಿನಲ್ಲಿ ನಡೆಯಲಿರುವ ಭಾರತ–ಅಮೆರಿಕಾ ನಡುವಿನ ಒಂದು ಉನ್ನತ ಶಿಕ್ಷಣ ಶೃಂಗ ಸಭೆಯ ಬಗ್ಗೆ ಹೇಳುತ್ತದೆ. ಈ ಕ್ಷೇತ್ರದಲ್ಲಿ ಸಹಯೋಗದ ಹಲವು ಮಾರ್ಗಗಳ ಬಗ್ಗೆ ಇದರಲ್ಲಿ ಒತ್ತು ನೀಡಲಾಗುವುದಂತೆ. ಇಂತಹ ಒಂದು ಸಂವಾದ ಖಾಸಗಿ/ಸರಕಾರೇತರ ವಲಯಗಳನ್ನು ಒಳಗೊಳ್ಳುವ ವಾರ್ಷಿಕ ಸಭೆಗಳ ಮೂಲಕ ಮುಂದುವರೆಯುತ್ತದಂತೆ. ಒಬಾಮ–ಸಿಂಗ್ 21ನೇ ಶತಮಾನದ 'ಜ್ಞಾನ ಉಪಕ್ರಮ'ದ ಭಾಗವಾಗಿ ಮಾಧ್ಯಮಿಕ ಮಟ್ಟದ ನಂತರದ ಸಂಪರ್ಕಗಳನ್ನು ಬಲಪಡಿಸಲಾಗುವುದಂತೆ. ಇವೆಲ್ಲ ಭಾರತದಲ್ಲಿ ಶಿಕ್ಷಣವನ್ನು ಇನ್ನಷ್ಟು ಖಾಸಗೀಕರಿಸುವ ಯುಪಿಎ–2 ಸರಕಾರದ ಯೋಜನೆಗಳ ಭಾಗವಷ್ಟೇ ಅಲ್ಲ, ನಮ್ಮ ದೇಶದಲ್ಲಿ ವಿದೇಶಿ ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ಅವಕಾಶ ಕೊಟ್ಟು ಅವು ತಮ್ಮ ಲಾಭಕೋರ ಅಂಗಡಿಗಳನ್ನು ತೆರೆಯಲು ಬಿಡುವ ಯೋಜನೆಯ ಭಾಗವೂ ಹೌದು.

'ವಿಶ್ವಾಸಘಾತ'

ಬಾಹ್ಯಾಕಾಶ ಶೋಧನೆಯೂ ಸೇರಿ ದಂತೆ ಇನ್ನೂ ಹಲವು ಕ್ಷೇತ್ರಗಳಲ್ಲಿ ಇನ್ನಷ್ಟು ಸಹಕಾರದ ಮಾತಿದ್ದರೂ, ನಾಗರಿಕ ಪರಮಾಣು ಸಹಕಾರದ ಪ್ರಶ್ನೆಯ ಮೇಲೆ ಭಾರತಕ್ಕೆ ತಂತ್ರಜ್ಞಾನದ ವರ್ಗಾವಣೆ ಕುರಿತು 2008ರಲ್ಲಿ ಕೊಟ್ಟ ಮಾತಿನ ಬಗ್ಗೆ ಈಗಲೂ ಅಮೆರಿಕಾ ಚಂಚಲತೆಯನ್ನೇ ಪ್ರದರ್ಶಿಸುತ್ತಿದೆ. ಅದು ಈಗಲೂ ಭಾರತ ತನ್ನ ಪರಮಾಣು ಬಾಧ್ಯತೆ ಮಸೂದೆಯಲ್ಲಿ ತಿದ್ದುಪಡಿ ತರಬೇಕೆಂದು ಒತ್ತಡ ಹಾಕುತ್ತಲೇ ಇದೆ.

ಪುಟ 15ಕ್ಕೆ



ಜೀವನಾವಶ್ಯಕ 'ಕನಿಷ್ಠ ಕೂಲಿ' ಕೊಡಲು ಏನು ದಾಡಿ?

ಅಸಂಘಟಿತ ಕಾರ್ಮಿಕರ ಪ್ರಶ್ನೆ

ಮಹೇಶ್ ಊಗಿನಹಳ್ಳಿ, ಆನೇಕಲ್



ರಾಜ್ಯದೆಲ್ಲೆಡೆ ಅಸಂಘಟಿತ ವಲಯದ ಕಾರ್ಮಿಕರಿಗೆ ಸಮಾನ ಕನಿಷ್ಠ ಕೂಲಿ ನೀಡುವಂತೆ ಜುಲೈ 18 ರಿಂದ 21ರವರೆಗೆ ಬೆಂಗಳೂರಿನಲ್ಲಿ ನಡೆಸಿದರು.

ನಗರ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ರ್ಯಾಲಿ ನಡೆಸಿದ ಪ್ರತಿಭಟನಾಕಾರರು, 'ಅಸಂಘಟಿತ ಕಾರ್ಮಿಕರಿಗೆ ರಾಜ್ಯದ ವಿವಿಧೆಡೆ ಒಂದೊಂದು ರೀತಿಯಲ್ಲಿ ಕೂಲಿ ನೀಡಲಾಗುತ್ತಿದೆ. ಕೂಲಿ ಪ್ರಮಾಣ ಕಡಿಮೆ ಇರುವುದರಿಂದ ಕಾರ್ಮಿಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಮಾನ ಕೂಲಿ ನೀತಿ ಜಾರಿಗೆ ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದ್ದರೂ ಪ್ರಯೋಜನ ವಾಗಿಲ್ಲ' ಎಂದು ಖಂಡಿಸಿದರು.

'ಸರ್ಕಾರ ಮಾಲೀಕರ ಒತ್ತಡಕ್ಕೆ ಮಣಿದು ಸಮಾನ ಕನಿಷ್ಠ ಕೂಲಿ ನೀತಿ ಜಾರಿಗೊಳಿಸಲು ಹಿಂದೇಟು ಹಾಕುತ್ತಿದೆ. ಖಾಸಗಿ ಕಂಪನಿಗಳು ಹೆಚ್ಚಿನ ಆದಾಯ ಗಳಿಸುತ್ತಿದ್ದರೂ ಕಾರ್ಮಿಕರಿಗೆ ಹೆಚ್ಚಿನ ವೇತನ ನೀಡುತ್ತಿಲ್ಲ. ಕಂಪೆನಿಗಳು ಒಟ್ಟು ಆದಾಯ ಗಳಿಕೆಯಲ್ಲಿ ಶೇ.12ರಷ್ಟನ್ನು ಮಾತ್ರ ಕಾರ್ಮಿಕರ ವೇತನಕ್ಕೆ ನೀಡುತ್ತಿವೆ' ಎಂದು ಸಿಐಟಿಯು ರಾಜ್ಯ ಅಧ್ಯಕ್ಷ ವಿ.ಜೆ.ಕೆ.ನಾಯರ್ ಹೇಳಿದರು.

'ವೇತನ ಹೆಚ್ಚಿಸುವ ಮೂಲಕ ಕಾರ್ಮಿಕ ಆರ್ಥಿಕ ಸ್ಥಿತಿ ಸುಧಾರಣೆ ಮಾಡುವಂತೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಮನವಿ ಪತ್ರ ನೀಡಲಾಗಿದೆ. ಆದರೆ ಬಿಜೆಪಿ ಸರ್ಕಾರ ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಕೂಲಿ ಪ್ರಮಾಣ ಕಡಿಮೆ ಇರುವುದರಿಂದ ಕಾರ್ಮಿಕರ ಜೀವನ ನಿರ್ವಹಣೆಗೆ ಕಷ್ಟವಾಗಿದೆ. ಅಗತ್ಯವಸ್ತುಗಳ ಬೆಲೆ ಏರಿಕೆಯಿಂದ ಮತ್ತ... ತೊಂದರೆ ಅನುಭವಿಸುವಂತಾ...ೆ' ಎಂದರು.

ಕೂಲಿ ಪ್ರಮಾಣ ಹೆಚ್ಚಳ ಮಾಡಿ ರಾಜ್ಯದೆಲ್ಲೆಡೆ ಸಮಾ... ಕೂಲಿ ನೀತಿ ಜಾರಿಗೆ ತರಬೇಕು. ಕಾರ್ಮಿ... ಆರ್ಥಿಕ ಸ್ಥಿತಿ ...ಧಾರಣೆಗೆ ಪ್ರತ್ಯೇಕ ...ಲ್ಯಾಣ ಮಂಡಳಿ ...ಸಬೇಕು. ಗುತ್ತಿಗೆ ಆ...ಾರದಲ್ಲಿ ಕಾ...ರ್ಯನಿರ್ವಹಿಸುತ್ತಿರುವ ಕಾ...ರ್ಮಿಕರ ಕೆಲಸ ಕಾಯಂಗೊಳಿಸಬೇಕು. ...ರ್ಮಿಕ ಕಾ...ನೂನುಗಳನ್ನು ಪರಿಣಾಮಕಾರಿಯಾಗಿ ಜಾ...ರಿಗೊಳಿಸಬೇಕು ಎಂ...ದು ಪ್ರತಿಭಟನಾ ನಿರತರು ಒತ್ತಾಯಿಸಿದರು.

4 ದಿನಗಳ ನಿರಂತರ ...ರಣಿ

ಜುಲೈ 18 ರಿಂ... ...ರಂಭಗೊಂಡ ಈ ನಿರಂತರ ಧರಣಿಗೆ ...ತಿದಿನವೂ 4 ರಿಂದ 5

ಪುಟ 14ಕ್ಕೆ

ದಿನೇ ದಿನೇ ಪೆಟ್ರೋಲ್-ಡಿಸೇಲ್ ಅಡುಗೆ, ಆಟೋ ಗ್ಯಾಸ್ ಮತ್ತು ಸೀಮೆಎಣ್ಣೆ ಬೆಲೆಗಳನ್ನು ಲಂಗುಲಗಾಮು ಇಲ್ಲದೆ ಹೆಚ್ಚಿಸಲಾಗುತ್ತಿದೆ. ಇದರ ಪ್ರಭಾವದಿಂದ ಅಗತ್ಯ ವಸ್ತುಗಳ ಬೆಲೆಗಳು ತರಕಾರಿ, ಆಹಾರ ಧಾನ್ಯಗಳು ಬೆಲೆಗಳು ಬಡವರ ಕೈಗೆ ಸಿಗದಂತೆ ಮುಗಿಲು ಮುಟ್ಟುತ್ತಿವೆ. ಇದರ ಬೆನ್ನಲ್ಲೇ ಕೆಲವು ಶ್ರೀಮಂತರ ಬಂಡವಾಳಗಾರರ ಆದಾಯವು ಹೆಚ್ಚುತ್ತಿದೆ. ಜೊತೆಗೆ ನಮ್ಮನ್ನಾಳುವ ಜನ ಪ್ರತಿನಿಧಿಗಳಾದ ಶಾಸಕರು, ಎಂಎಲ್‌ಎಗಳು, ಮಂತ್ರಿಗಳು, ಮುಖ್ಯಮಂತ್ರಿಗಳ ಸಂಬಳ ಸಾರಿಗೆ ಭತ್ಯೆ ಇತ್ಯಾದಿಗಳನ್ನು ಶೇ.300ಕ್ಕಿಂತ ಮೇಲ್ಪಟ್ಟು ಹೆಚ್ಚು ಮಾಡಿಕೊಂಡಿದ್ದಾರೆ. ಆದರೆ ವಿಪರ್ಯಾಸವೆಂದರೆ ಒಟ್ಟು ದೇಶದ ಆಂತರಿಕ ಆದಾಯ ನಿರಂತರ ಅಭಿವೃದ್ಧಿ ಆಗುತ್ತಿದೆ ಎಂದು ಸಂತೋಷ ಸಂಭ್ರಮಾಚರಣೆಯಲ್ಲಿ ತೊಡಗಿರುವ ಸರ್ಕಾರಗಳು. ದುಡಿಯುವ ಜನರ ಬಡ ಕಾರ್ಮಿಕರ ಸಂಬಳಗಳು, ಅಂಗನವಾಡಿ, ಆಶಾ ಮತ್ತು ಬಿಸಿಯೂಟ ಕಾರ್ಯಕರ್ತರು, ಅಸಂಘಟಿತ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಹಮಾಲಿ, ಆಟೋ ಚಾಲಕರು, ದೋಬಿಗಳು ಹೋಟೇಲ್ ಕಾರ್ಮಿಕರ, ದರ್ಜಿಗಳ ಸ್ಥಿತಿಗಳು, ಮೂಲಭೂತ ಸೌಲಭ್ಯಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ.

ಇವರನ್ನೆಲ್ಲಾ ಮರೆತುಬಿಟ್ಟಿದೆ. ತಮ್ಮದೇ ಸ್ವ ಹಿತಾಸಕ್ತಿಯ ಲಾಲಸೆಯಲ್ಲಿ ತೇಲುತ್ತಿರುವುದು ನಾಚಿಕೆ ಆಗಬೇಕು. ಇಂತಹ ಅನ್ಯಾಯಕ್ಕೆ ಕೊನೆಗಾಣಿಸುವ ಸಲುವಾಗಿ ಹಾಗೂ ಕಿವುಡಾದ, ಕುರುಡಾದ ಸರ್ಕಾರವನ್ನು ಬಡಿದೆಬ್ಬಿಸಲು ಪಣ ತೊಟ್ಟು ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕರು ವಿಧಾನಸೌಧದ ಫ್ರೀಡಂ ಪಾರ್ಕ್ ಬಳಿ ನಿರಂತರ ಧರಣಿ ಸತ್ಯಾಗ್ರಹ ಜನಮನ ಗಮನ ಸೆಳೆಯಿತು. ರಾಜ್ಯಾದ್ಯಂತ ದೂರದ ಊರುಗಳ ವಿಜಾಪುರ, ರಾಯಚೂರು, ಬೀದರ್, ಗದಗ, ಸೇರಿದಂತೆ ರಾಜ್ಯದ ಹತ್ತಾರು ಜಿಲ್ಲೆಗಳಿಂದ ಸಾವಿರಾರು ಕಾರ್ಮಿಕರು ಪಾಲ್ಗೊಂಡಿದ್ದರು.







ಜನಶಕ್ತಿ
ಕನ್ನಡ ವಾರಪತ್ರಿಕೆ

ಜಿಲ್ಲೆಗಳ ಕಾರ್ಮಿಕರು ಬೆಂಗಳೂರಿನ ರೈಲ್ವೆ ನಿಲ್ದಾಣದಿಂದ ಫ್ರೀಡಂ ಪಾರ್ಕ್‌ವರೆಗೆ ಮೆರವಣಿಗೆ ನಡೆಸಿದರು.

ಮೊದಲನೆ ಮತ್ತು ಎರಡನೇ ದಿನದ ಧರಣಿ ಸತ್ಯಾಗ್ರಹವನ್ನು ಕಾಂ:ವಿ.ಜೆ.ಕೆ.ನಾಯರ್ ಉದ್ಘಾಟಿಸಿದರೆ 3ನೇ ದಿನದ ಧರಣಿಯನ್ನು ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಕಾಂ: ಕೆ.ಶಂಕರ್ 4ನೇ ದಿನದ ಧರಣಿಯನ್ನು ಮತ್ತೊಬ್ಬ ಉಪಾಧ್ಯಕ್ಷರಾದ ಕಾಂ: ವಿ.ಸುಕುಮಾರ್ ಉದ್ಘಾಟಿಸಿದರು. ಇದಲ್ಲದೆ ಈ





ಹೋರಾಟದ ನೇತೃತ್ವವನ್ನು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್, ರಾಜ್ಯ ಕಾರ್ಯದರ್ಶಿಗಳು ಮತ್ತು ಅಂಗನವಾಡಿ ನೌಕರರ ಸಂಘದ ರಾಜ್ಯ ಅಧ್ಯಕ್ಷರಾದ ಎಸ್.ವರಲಕ್ಷ್ಮಿ, ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ಮೀನಾಕ್ಷಿ ಸುಂದರಂ, ಅಕ್ಷರದಾಸೋಹ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಲೀಲಾವತಿ, ಹಮಾಲಿ ಕಾರ್ಮಿಕ ಫೆಡರೇಷನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ್, ಗ್ರಾ.ಪಂ.ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಬಿ.ನಾಡಗೌಡ, ಬೀಡಿ ಕಾರ್ಮಿಕರ ಫೆಡರೇಷನ್ ಪ್ರಧಾನ ಕಾರ್ಯದರ್ಶಿ, ಸೈಯ್ಯದ್ ಮುಜೀಬ್ ಕಟ್ಟಡ ಕಾರ್ಮಿಕರ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಎಸ್.ವೀರಾಸ್ವಾಮಿ, ಆಟೋ ಚಾಲಕರ ಫೆಡರೇಷನ್ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ, ಬೆಂಗಳೂರು ಜಿಲ್ಲಾ ಸಿಐಟಿಯು ಪ್ರಧಾನ ಕಾರ್ಯದರ್ಶಿ ಕೆ.ಎನ್.ಉಮೇಶ್, ಸೇರಿದಂತೆ ಹಲವಾರು ಮುಖಂಡರು ವಹಿಸಿದ್ದರು.

ಸೌಹಾರ್ದ ಬೆಂಬಲ

4 ದಿನಗಳ ಈ ಕಾರ್ಮಿಕರ ಧರಣಿಗೆ–ಜನಶಕ್ತಿ ಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ್, ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಕೃಷಿ ಕೂಲಿಕಾರರ ರಾಜ್ಯ ಉಪಾಧ್ಯಕ್ಷರಾದ ಜಿ.ಎನ್.ನಾಗರಾಜ್, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಡಿವೈಎಫ್ಐ ರಾಜ್ಯ ಅಧ್ಯಕ್ಷರಾದ ಎನ್.ಎಲ್.ಭರತ್‌ರಾಜ್ ಸೇರಿದಂತೆ ಹಲವಾರು ಮುಖಂಡರು ಪಾಲ್ಗೊಂಡು ಬೆಂಬಲಿಸಿ ಮಾತನಾಡಿದರು.



ಅಧಿಕಾರಿಗಳ ಭೇಟಿ–ಹಲವು ಭರವಸೆಗಳು

ನಾಲ್ಕು ದಿನಗಳ ಈ ಧರಣಿ ಸತ್ಯಾಗ್ರಹದಲ್ಲಿ ಅಂಗನವಾಡಿ ನೌಕರರು, ಗ್ರಾ.ಪಂ.ನೌಕರರು, ಅಕ್ಷರದಾಸೋಹ, ಆಶಾ ಕಾರ್ಯಕರ್ತೆಯರು, ಹಮಾಲಿ ಕಾರ್ಮಿಕರು, ಕಟ್ಟಡ, ಆಟೋ, ಬೀಡಿ ಕಾರ್ಮಿಕರು, ವಿವಿಧ ಕಾರ್ಖಾನೆ ಕಂಪನಿಗಳ ಗುತ್ತಿಗೆ ಕಾರ್ಮಿಕರು ಫ್ಲಾಂಟೇಷನ್ ಕಾರ್ಮಿಕರು, ವಿವಿಧ ಕಾರ್ಖಾನೆಗಳ ಕಾರ್ಮಿಕರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಮೊದಲನೆ ದಿನದ ಧರಣಿ ಸತ್ಯಾಗ್ರಹಕ್ಕೆ



ರಾಜ್ಯದ ಕಾರ್ಮಿಕ ಇಲಾಖೆ ಕಾರ್ಯದರ್ಶಿಗಳಾದ ಜಿ.ಎಸ್.ನಾರಾಯಣ ಸ್ವಾಮಿ, ಕಾರ್ಮಿಕ ಇಲಾಖೆ ಹೆಚ್ಚುವರಿ ಕಾರ್ಮಿಕ ಆಯುಕ್ತರಾದ ಗುರುದಾಸ್‌ಭಟ್, ಪಾಲ್ಗೊಂಡು ಸರ್ಕಾರದ ಪರವಾಗಿ ಎಲ್ಲಾ ವಿಭಾಗದ ಮನವಿ ಸ್ವೀಕರಿಸಿದರು.

ಎರಡನೇ ದಿನದ ಧರಣಿಗೆ ಶಿಕ್ಷಣ ಇಲಾಖೆಯ (ಪ್ರಾಥಮಿಕ) ನಿರ್ದೇಶಕರಾದ ಜಯಪ್ರಕಾಶ್, ಅಕ್ಷರದಾಸೋಹ ನೌಕರರ ಬೇಡಿಕೆಗಳ ಕುರಿತು, ಮನವಿ ಸ್ವೀಕರಿಸಿದರೆ, ಪೌರ ಕಾರ್ಮಿಕರ ಬೇಡಿಕೆಗಳ ಕುರಿತು ಪೌರಾಡಳಿತ ನಿರ್ದೇಶನಾಲಯದ ಹೆಚ್ಚುವರಿ ನಿರ್ದೇಶಕರಾದ ಸಂಜಯನಾಯ್ಕ, ನಗರಾಭಿವೃದ್ಧಿ ಇಲಾಖೆಯ ಉಪ ಕಾರ್ಯದರ್ಶಿ ಎಸ್.ಎನ್.ಸನ್ನದ್, ಪಾಲ್ಗೊಂಡು ಮನವಿ ಸ್ವೀಕರಿಸಿದರು.

ಮೂರನೇ ದಿನದ ಧರಣಿಗೆ ಎಪಿಎಂಸಿ ಹಮಾಲಿ ಕಾರ್ಮಿಕರ ಬೇಡಿಕೆಗಳ ಕುರಿತು ಕೃಷಿ ಮಾರಾಟ ಇಲಾಖೆಯ ನಿರ್ದೇಶಕರಾದ ಪಾಟೀಲ್. ಹೆಚ್ಚುವರಿ ನಿರ್ದೇಶಕರಾದ ನಾಗರಾಜ್‌ರವರು ಪಾಲ್ಗೊಂಡು ಮನವಿ ಸ್ವೀಕರಿಸಿದರು.

ಧರಣಿಯ 4ನೇ ದಿನ ಆಶಾ ಕಾರ್ಯಕರ್ತೆಯರ ಬೇಡಿಕೆಗಳ ಕುರಿತು ಆರೋಗ್ಯ ಇಲಾಖೆ ಕಾರ್ಯದರ್ಶಿಗಳಾದ ಶ್ರೀ ಸೆಲ್ವಕುಮಾರ್ ಮತ್ತು ರಾಜ್ಯದ ಕಾರ್ಮಿಕ ಇಲಾಖೆ ಆಯುಕ್ತರಾದ ಶ್ರೀ ಉಮಾಶಂಕರ್ ಪಾಲ್ಗೊಂಡು ಮನವಿಗಳನ್ನು ಸ್ವೀಕರಿಸಿದರು. ಮತ್ತು ತಮ್ಮ ತಮ್ಮ ವ್ಯಾಪ್ತಿಯ ಇಲಾಖೆಗಳ ಬೇಡಿಕೆಗಳನ್ನು ನಿಗದಿತ ಕಾಲಘಟ್ಟದಲ್ಲಿ ಬಗೆಹರಿಸುವ ಭರವಸೆ ನೀಡಿದರು.

ಇದಲ್ಲದೆ ಗ್ರಾ.ಪಂ.ನೌಕರರ ಬೇಡಿಕೆಗಳ ಕುರಿತು ಗ್ರಾಮೀಣಾಭಿವೃದ್ಧಿ ಇಲಾಕೆಯ ಅಧಿಕಾರಿಗಳೂ ಕಾರ್ಮಿಕ ಸಂಘದ ಮುಖಂಡರು ಮಾತುಕತೆ ನಡೆಸಿ, ಹಲವಾರು ಬೇಡಿಕೆಗಳನ್ನು ಈಡೇರಿಸಿದ್ದಾರೆ.

4 ದಿನಗಳ ಈ ಕಾರ್ಮಿಕರ ಧರಣಿ ಸತ್ಯಾಗ್ರಹದಲ್ಲಿ ಪ್ರತಿನಿತ್ಯವು 4 ರಿಂದ 5 ಸಾವಿರ ಕಾರ್ಮಿಕರು ಪಾಲ್ಗೊಳ್ಳುವುದರ ಮೂಲಕ ರಾಜ್ಯ ಬಿಜೆಪಿ ಸರ್ಕಾರದ ಕಾರ್ಮಿಕ ಜನ ವಿರೋಧಿ ನೀತಿಗಳ ವಿರುದ್ಧ ತನ್ನ ಹೋರಾಟದ ಕಹಳೆ ಮೊಳಗಿಸಿದರು.

ಅಪಘಾತ: ಮೃತ ಕಾರ್ಮಿಕ ಮಹಿಳೆಯ ಕುಟುಂಬಕ್ಕೆ ಪರಿಹಾರ ಸಂಗ್ರಹ

ಸಿಐಟಿಯು ರಾಜ್ಯ ಸಮಿತಿ ಸಂಘಟಿಸಿದ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಲು ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಆದಾವಳ್ಳಿ ಎಸ್ಟೇಟ್‌ನ ಕಾರ್ಮಿಕರು ಎರಡು ವ್ಯಾನ್‌ಗಳಲ್ಲಿ ಬರುತ್ತಿದ್ದ ಸಂದರ್ಭದಲ್ಲಿ ದಿನಾಂಕ:21.07.2011ರ ಬೆಳಗಿನ 1 ಗಂಟೆಗೆ ವೇಳೆ ಕೆ.ಎಸ್.ಆರ್.ಟಿ.ಸಿ. ಬಸ್‌ಗೆ ಸಿಕ್ಕಿ ಗೌರಮ್ಮ ಎಂಬ ಮಹಿಳೆ ಧಾರುಣವಾಗಿ ಮೃತರಾಗಿದ್ದಾರೆ.

ವ್ಯಾನ್‌ಗಳಲ್ಲಿ ಬರುತ್ತಿದ್ದ ತೋಟ ಕಾರ್ಮಿಕರು ಹಿರೇಸಾವೆ ಬಳಿ ವ್ಯಾನ್ ನಿಲ್ಲಿಸಿ ಕಾಫಿಗೆ ಇಳಿದ ಸಂದರ್ಭ ಮೂತ್ರ ವಿಸರ್ಜನೆಗೆಂದು ಗೌರಮ್ಮ ರಸ್ತೆಯನ್ನು ದಾಟಲು ಹೋದಾಗ ವೇಗದಿಂದ ಬರುತ್ತಿದ್ದ ಬಸ್ಸಿಗೆ ಸಿಕ್ಕಿ ಅಪಘಾತಕ್ಕೊಳಗಾದರು.

ಆದಾವಳ್ಳಿ ತೋಟದಲ್ಲಿ ಕಾರ್ಮಿಕರು ಕಳೆದ ಎಂಟು ವರ್ಷಗಳಿಂದ ಹಂಗಾಮಿ ಎಂಬ ಹೆಸರಿನಲ್ಲಿ ದುಡಿಯುತ್ತಿದ್ದು, ಇತ್ತೀಚೆಗೆ ಚಂಗೂಲಿ ಹಂಗಾಮಿ ಗುತ್ತಿಗೆ ಕಾರ್ಮಿಕರನ್ನು ಸಂಘಟನೆಯಡಿ ಸೇರಿಸಲು ಸಿಐಟಿಯು ನೇತೃತ್ವದ ತೋಟ ಕಾರ್ಮಿಕರ ಸಂಘದ ಪ್ರಯತ್ನ ಹಾಗೂ ಅಸಂಘಟಿತ ಕಾರ್ಮಿಕರ ಚಳುವಳಿಯ ಮಹತ್ವದ ಬಗ್ಗೆ ಸಂಘಟನೆ ನಡೆಸಿದ ಪ್ರಚಾರದ ಪ್ರಭಾವದಿಂದ ಚಳುವಳಿಗೆ ಹಂಗಾಮಿ ಕಾರ್ಮಿಕರು ಭಾಗವಹಿಸಲು ಬರುತ್ತಿದ್ದರು.

ದಿ:21.07.2011ರ ಬೆಳಿಗ್ಗೆ ಅಪಘಾತದಿಂದ ಮಹಿಳೆ ನಿಧನರಾಗಿರುವ ವಿಷಯ ತಿಳಿದು, ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಲು ಬಂದಿದ್ದ ಸಾವಿರಾರು ಕಾರ್ಮಿಕರು ದಿಗ್ಭ್ರಾಂತರಾದರು. ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಸಭೆಯ ಸಾವಿರಾರು ಕಾರ್ಮಿಕರು ಮೃತ ಗೌರಮ್ಮನಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದಲ್ಲದೆ, ಸಿಐಟಿಯು ಮುಖಂಡರ ಮನವಿಗೆ ಓಗೊಟ್ಟು ಕೂಡಲೇ ಅಲ್ಲಿ ನೆರೆದಿದ್ದ ಕಾರ್ಮಿಕರು ಒಟ್ಟು ರೂ.22;565–00 ಸಂಗ್ರಹಿಸಿ ಸಿಐಟಿಯು ನೇತೃತ್ವದ ತೋಟ ಕಾರ್ಮಿಕರ ಸಂಘದ ಮುಖಂಡರ ಕೈಗೆ ಸಂಗ್ರಹದ ಹಣ ನೀಡಿದರು.

ಹಾಸನ ಜಿಲ್ಲೆಯ ವಿವಿಧ ತೋಟಗಳಿಂದ ಬಂದಿದ್ದ ತೋಟಗಳಿಂದ ಬಂದಿದ್ದ ಕಾರ್ಮಿಕರು ಮಧ್ಯಾಹ್ನದ ನಂತರ ಸಕಲೇಶಪುರದ ಆದಾಹಳ್ಳಿ ತೋಟಕ್ಕೆ ಕಾಂ. ವಿ.ಸುಕುಮಾರ್ ಜೊತೆ ಮೃತರ ಮನೆಗೆ ಭೇಟಿಕೊಟ್ಟು ಮೃತರ ಪತಿ, ಮೂವರು ಮಕ್ಕಳು ಮತ್ತು ಅವರ ಕುಟುಂಬ ವರ್ಗದವರಿಗೆ ಸ್ವಾಂತನ ಹೇಳಿ ಚಳುವಳಿ ನಿರತ ಕಾರ್ಮಿಕರಿಂದ ಸಂಗ್ರಹವಾಗಿದ್ದರೂ 22,565ರೂ.ಗಳನ್ನು ಮೃತರ ಕುಟುಂಬದವರ ವಶಕ್ಕೆ ನೀಡಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕಾಲ್ಕಿತ್ತ ಪೋಸ್ಕೊ ಮಾರಿ

ಪುಟ 16 ರಿಂದ

ರೈತರ ಬಳಿಗೆ ಕಳುಹಿಸಿ ಅವರ ಮನಸ್ಸಿನ ವಿಚಾರ ತಿಳಿಯಲು ಪ್ರಯತ್ನಿಸಬೇಕಿತ್ತು. ಕೈಗಾರಿಕೆಯಿಂದಾಗುವ ಲಾಭ ಹಾನಿಗಳ ಕುರಿತು ಅವರೊಂದಿಗೆ ಚರ್ಚಿಸಬೇಕಿತ್ತು. ರೈತರ ಅಭಿಪ್ರಾಯ ಪಡೆಯುವ ಮೊದಲ ಹಂತದಲ್ಲೇ ಸರ್ಕಾರ ಸೋತಿದೆ. ಕೆಐಎಡಿಬಿ ನೋಟೀಸ್ ಮೂಲಕವೇ ರೈತರನ್ನು ಮಣಿಸಲು ಹೊರಟಿದ್ದ ಸರ್ಕಾರದ ಕ್ರಮ ಸೌಜನ್ಯರಹಿತ ವರ್ತನೆಗೆ ಸಾಕ್ಷಿಯಾಗಿದೆ. ಒಟ್ಟಾರೆ ರೈತರು ತಮ್ಮ ಭೂಮಿ ಸ್ವಾಧೀನಪಡಿಸಿಕೊಳ್ಳುವುದಕ್ಕೆ ವಿರೋಧ ವ್ಯಕ್ತಪಡಿಸ ಹತ್ತಿದರು. ಜುಲೈ 4, 2011ರಂದು ನೂರಾರು ರೈತರು ಧಾರವಾಡದ ಕೆಐಎಡಿಬಿ ಕಛೇರಿ ಎದುರು ಧರಣಿ ನಡೆಸಿ, ಮನವಿ ಕೊಡುವುದರ ಮೂಲಕ ತಮ್ಮ ವಿರೋಧ ವ್ಯಕ್ತಪಡಿಸಿದರು.

ರೈತರ ಜಾಗೃತಿ ಸಭೆಗಳು :

ಜುಲೈ 5 ರಿಂದ 7ರವರೆಗೆ ಜಂತ್ಲಿ–ಶಿರೂರ, ಹಳ್ಳಿಗುಡಿ ಹಾಗೂ ಮೇವುಂಡಿ ಗ್ರಾಮಗಳಲ್ಲಿ ರೈತರ ಸಭೆಗಳು ನಡೆದವು. ರೈತರಲ್ಲಿ ಜಾಗೃತಿ ಮೂಡಿಸಲು ಹಾಗೂ ಭೂಮಿ ನೀಡದಿರುವ ಕುರಿತು ರೈತರ ಒಟ್ಟಾಭಿಪ್ರಾಯ ಮೂಡಿಸಲು ಈ ಸಭೆಗಳಿಂದ ಸಾಧ್ಯವಾಯಿತು. ಗದಗಿನ ತೋಂಟದಾರ್ಯ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಹಾಗೂ ಮುಂಡರಗಿಯ ಶ್ರೀ ಅನ್ನದಾನೇಶ್ವರ ಮಹಾಸ್ವಾಮಿಗಳು ರೈತರ ಸಭೆಗಳಲ್ಲಿ ಸಾನಿಧ್ಯ ವಹಿಸಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ಬಿ.ಎಸ್.ಸೊಪ್ಪಿನ, ಸಿಪಿಐ ರಾಜ್ಯ ಕಾರ್ಯದರ್ಶಿ ಡಾ:ಸಿದ್ದನಗೌಡ ಪಾಟೀಲ, ಪತ್ರಕರ್ತ ಬಸವರಾಜ ಸೂಳಿಭಾವಿ, ವೈ.ಎನ್.ಗೌಡರ, ಸಾಮಾಜಿಕ ಕಾರ್ಯಕರ್ತ ಚಂದ್ರಶೇಖರ್ ಬಾಳೆ ರೈತರನ್ನು ಉದ್ದೇಶಿಸಿ ಮಾತನಾಡಿದರು. ಸರ್ಕಾರದ ರೈತ ವಿರೋಧಿ ಧೋರಣೆ, ವಿವೇಚನೆ ಇಲ್ಲದ ಭೂ ಸ್ವಾಧೀನ ಪ್ರಕ್ರಿಯೆ, ಹಲವು ಕೈಗಾರಿಕೆಗಳ ಸ್ಥಾಪನೆಯಿಂದ ಉಂಟಾಗಬಹುದಾದ ಪರಿಸರ ನಾಶ ಮತ್ತು ಸರ್ಕಾರ ಇದರ ಬಗ್ಗೆ ಕಾಳಜಿ ಮಾಡದಿರುವುದನ್ನು ಸಭೆಯಲ್ಲಿ ಖಂಡಿಸಲಾಯಿತು. ಪ್ರತಿಯೊಂದು ಸಭೆಯಲ್ಲೂ ನೂರಾರು ಸಂಖ್ಯೆಯಲ್ಲಿ ರೈತರು, ಮಹಿಳೆಯರು ಸೇರುತ್ತಿದ್ದಾರೆ. ರೈತರ ವಿರೋಧದ ಕುರಿತು ಮಾಧ್ಯಮದಲ್ಲಿ ವರದಿಯಾಗುತ್ತಿದ್ದಂತೆ, ಜಿಲ್ಲಾ ಉಸ್ತುವಾರಿ ಸಚಿವರು ತೋಂಟದಾರ್ಯ ಶ್ರೀಗಳನ್ನು ಕಂಡು ಮಾತನಾಡುವುದಾಗಿ ಹೇಳಿಕೆ ನೀಡಿದರು.

ಒರಟಾಗಿ ವರ್ತಿಸಿದ ಸಚಿವರು :

ಜುಲೈ 8 ರಂದು ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ.ಸಿ.ಪಾಟೀಲ ತೋಂಟದ ಶ್ರೀಗಳನ್ನು ಕಂಡು ಮಾತನಾಡಿದರು. ಅದೇ ದಿವಸ ಮಠದಲ್ಲಿ ಸೇರಿದ್ದ ರೈತರೊಂದಿಗೆ ಮಾತನಾಡಲು ಮುಂದಾದರು. ಒಂದು ಹಂತದಲ್ಲಿ ಡಾ: ಸಿದ್ದನಗೌಡ ಪಾಟೀಲ ಮಾತಾಡುತ್ತಾ ಕೈಗಾರಿಕೆಗೆ ಬೇಕಾದ ನೀರು ಪೂರೈಕೆ, ವಿದ್ಯುತ್ ಸರಬರಾಜು ಕುರಿತು ಸರ್ಕಾರದ ತಯಾರಿ ಏನು ಎಂದು ಕೇಳಲು ಮುಂದಾದಾಗ ಸಚಿವರು ರೈತರನ್ನು ಹೊರತುಪಡಿಸಿ ಯಾರೊಂದಿಗೂ ನಾನು ಮಾತನಾಡಲಾರೆ ಎಂದು ಏರು ಧ್ವನಿಯಲ್ಲೇ ಹೇಳಿದರು. ಅದೊಂದು ಸೌಜನ್ಯರಹಿತ ನಡುವಳಿಕೆಯಾಗಿತ್ತು. ಇನ್ನೊರ್ವ ರೈತ ಮುಖಂಡ ಮಧ್ಯಪ್ರವೇಶಿಸಿ ಮಾತನಾಡಲು ತೊಡಗಿದಾಗ "ನಾನು ನಿನ್ನೊಂದಿಗೆ ಮಾತನಾಡುವುದಿಲ್ಲ" ಎಂದು ಕೂಗಿದರು. ರೈತ ಪ್ರತಿನಿಧಿಗಳು ಇದನ್ನು ಖಂಡಿಸಿದರು. ಅಷ್ಟಕ್ಕೆ ಮಂತ್ರಿಗಳು ಮಾತು ಮೊಟಕುಗೊಳಿಸಿ ಅಲ್ಲಿಂದ ಹೊರ ನಡೆದು ಬಿಟ್ಟರು. ಸಚಿವರ ಈ ವರ್ತನೆಯನ್ನು ಎಲ್ಲರೂ ಆಕ್ಷೇಪಿಸಿದರು. ಅದೇ ದಿವಸ ಸಮಾಜ ಕಾರ್ಯಕರ್ತೆ ಮೇಧಾ ಪಾಟ್ಕರ್ ಹಳ್ಳಿಗುಡಿಗೆ ಭೇಟಿ ನೀಡಿದರು. ಅಲ್ಲಿಯೂ ಸಚಿವರೊಂದಿಗೆ ಬೀದಿಯಲ್ಲೇ ಮಾತಿನ ಚಕಮಕಿ ನಡೆಯಿತು.



ಹೋರಾಟ ಸಮಿತಿ ಅಸ್ತಿತ್ವಕ್ಕೆ :

ಭೂ ಸ್ವಾಧೀನ ವಿರೋಧಿ ಚಳುವಳಿಯನ್ನು ಮುಂದಕ್ಕೆ ಕೊಂಡೊಯ್ಯಲು ಒಂದು ವಿಶಾಲ ತಳಹದಿಯಲ್ಲಿ ಹೋರಾಟ ಸಮಿತಿ ಅಗತ್ಯವಾಗಿತ್ತು. ಆದ್ದರಿಂದ "ಭೂ ಸ್ವಾಧೀನ ವಿರೋಧಿ ಸಂಗ್ರಾಮ ಸಮಿತಿ" ಅಸ್ತಿತ್ವಕ್ಕೆ ಬಂದಿತು. ಗದಗಿನ ತೋಂಟದ ಶ್ರೀ ಸಿದ್ದಲಿಂಗ ಸ್ವಾಮಿಗಳು ಹಾಗೂ ಮುಂಡರಗಿ ಅನ್ನದಾನ ಸ್ವಾಮಿಗಳು ಗೌರವಾಧ್ಯಕ್ಷರಾಗಿ ಡಾ: ಸಿದ್ದನಗೌಡ ಪಾಟೀಲ, ಬಸವರಾಜ ಸೂಳಿಭಾವಿ, ಬಿ.ಎಸ್.ಸೊಪ್ಪಿನ, ವೈ.ಎನ್.ಗೌಡರ, ಬಸವರಾಜ ಚಟ್ನಳ್ಳಿ, ಶರಣಪ್ಪ ಹೂಗಾರ, ಬಿ.ಎಸ್. ಹಿರೇಗೌಡ್ರ, ಚನ್ನಪ್ಪ ಬೂದಿಹಾಳ, ಹನುಮಪ್ಪ ಗಡ್ಡದ, ಸಂಚಾಲಕರಾಗಿ ಆಯ್ಕೆಗೊಂಡರು. ಇದರೊಂದಿಗೆ ಎಲ್ಲ ಪ್ರಗತಿಪರ ಹಾಗೂ ರೈತ ಸಂಘಟನೆಗಳ ಪದಾಧಿಕಾರಿಗಳನ್ನು ಒಳಗೊಂಡಂತೆ ಒಂದು ಕಾರ್ಯಕಾರಿ ಸಮಿತಿ ರಚಿಸಲು ತೀರ್ಮಾನಿಸಲಾಯಿತು. ಪ್ರಾರಂಭಿಕ ಹಂತದಲ್ಲಿ ಮೂರು ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

1. ಜುಲೈ 14, ಧರ್ಮಗುರುಗಳ–ಮಠಾಧೀಶರ ಸಮಾವೇಶ–ಸುಮಾರು 50 ಮಠಾಧೀಶರನ್ನು ಆಹ್ವಾನಿಸುವುದು. ಧರ್ಮಗುರುಗಳ ಹಾಗೂ ಮಠಾಧೀಶರ ಒಟ್ಟಾಭಿಪ್ರಾಯವನ್ನು ಸರ್ಕಾರಕ್ಕೆ ಮುಟ್ಟಿಸುವುದು.
2. ಜುಲೈ 18, ಹಳ್ಳಿಗುಡಿ ಗ್ರಾಮಾಂತರ ಗದಗವರೆಗೆ ರೈತರ ಪಾದಯಾತ್ರೆ 'ಭೂಮಿ ರಕ್ಷಣೆಗಾಗಿ ನಮ್ಮ ನಡಿಗೆ' ಹೆಸರಿನಲ್ಲಿ.
3. ಜುಲೈ 25, ಗದಗದಲ್ಲಿ ಭೂ ಸ್ವಾಧೀನ ವಿರೋಧಿ ಸಮಾವೇಶ

ಹರಿದು ಬಂದ ಜನಬೆಂಬಲ:

ಭೂಮಿ ಕಳೆದುಕೊಳ್ಳುತ್ತಿದ್ದ ರೈತರು ಹೋರಾಟಕ್ಕೆ ಸಿದ್ಧರಾಗುತ್ತಿದ್ದಂತೆ, ವಿವಿಧ ರೈತ ಸಂಘಟನೆಗಳು ಮುಖಂಡರು, ರಾಜಕೀಯ ಪಕ್ಷಗಳ ನಾಯಕರುಗಳು ರೈತರು ಬೆಂಬಲಕ್ಕೆ ಮುಂದೆ ಬಂದರು. ಕೊಪ್ಪಳ, ಬಳ್ಳಾರಿ ಹಾಗೂ ದಾವಣಗೆರೆಯಿಂದ ರೈತ ಮುಖಂಡರು ಭೂ ಸ್ವಾಧೀನಪಡಿಸಿಕೊಂಡ ಪ್ರದೇಶಗಳಲ್ಲಿ ರೈತರು ಯಾವ ದುಸ್ಥಿತಿಗೆ ಬಂದಿದ್ದಾರೆ ಎಂಬುದನ್ನು ಉದಾಹರಣೆ ಸಹಿತ ವಿವರಿಸಿದರು.

ಜನತಾದಳ(ಎಸ್) ಪಕ್ಷದ ರಾಜ್ಯಾಧ್ಯಕ್ಷರು ಹಾಗೂ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಹಾಗೂ ಆ ಪಕ್ಷದ ಮುಖಂಡರು ಕಾಂಗ್ರೆಸ್ ಪಕ್ಷದ ಸಿದ್ದರಾಮಯ್ಯ, ಎಚ್.ಕೆ. ಪಾಟೀಲ, ಬಿ.ಆರ್.ಯಾವಗಲ್ ಹಾಗೂ ಇತರರ ದಂಡೆ ಈ ಗ್ರಾಮಗಳಿಗೆ ತೆರಳಿ ಸಭೆ ನಡೆಸಿ 'ನಿಮ್ಮ ಬೆಂಬಲಕ್ಕೆ ನಾವು' ಎನ್ನುವ ಭರವಸೆ ನೀಡಿದರು.

ಮಾಧ್ಯಮದ ಪಾತ್ರ :

ಈ ಹೋರಾಟದಲ್ಲಿ ಮಾಧ್ಯಮದವರ ಪಾತ್ರ ಸಾಕಷ್ಟು ಮಟ್ಟಿಗೆ ಸಕಾರಾತ್ಮಕವಾಗಿತ್ತು. ಈ ಹೋರಾಟವನ್ನು ಕೆಲವು ಸ್ಥಳೀಯ ವಿಷಯವಾಗಿ ಮಾಡದೆ ರಾಷ್ಟ್ರೀಯ ಮಹತ್ವ ನೀಡಲಾಯಿತು. ಕಾಂಗ್ರೆಸಿನ ಯುವ ನೇತಾರ ರಾಹುಲ್ ಗಾಂಧಿಯವರನ್ನು ಕರೆತರಲಾಗುವುದೆಂಬ ಸುದ್ದಿಯೂ ಕೂಡಾ ಅಲ್ಲಲ್ಲಿ ಹರಿದಾಡಿತು. (ವಿವಿಧ ರಾಜಕೀಯ ಪಕ್ಷಗಳು ಚಳುವಳಿಯ ರಾಜಕೀಯ ಲಾಭ ಪಡೆದುಕೊಳ್ಳಲು ಯತ್ನಿಸಿದರು)

ಈ ಎಲ್ಲ ಘಟನಾವಳಿಗಳಿಂದಾಗಿ ಮುಖ್ಯಮಂತ್ರಿ ಯಡಿಯೂರಪ್ಪನವರು ತೀರಾ ಮುಜುಗರಕ್ಕೆ ಒಳಗಾದಂತೆ ತೋರಿತು. ಜನರ ಬೆಂಬಲ ಕಳೆದು ಕೊಳ್ಳುವ ಭೀತಿಯಿಂದ ಧರ್ಮಗುರುಗಳ ಅವಕೃಪೆಗೆ ಒಳಗಾಗುವ ಹೆದರಿಕೆಯಿಂದ ಭೂಮಿ ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆಯಿಂದ ಹಿಂದೆ ಸರಿದರು. ಯಾವುದೇ ಸಂದರ್ಭದಲ್ಲಿ ಗದಗ ರೈತರ ಭೂಮಿಯನ್ನು ಪೋಸ್ಕೊಗೆ ನೀಡುವುದಿಲ್ಲವೆಂದು ಘೋಷಿಸಿದರು.

ಮುಖ್ಯಮಂತ್ರಿ ಭೂಮಿ ವಶಪಡಿಸಿಕೊಳ್ಳುವುದಿಲ್ಲ ಎಂದು ಘೋಷಿಸುತ್ತಿದ್ದಂತೆ ಹಳ್ಳಿಗುಡಿ, ಜಂತ್ಲಿ–ಶಿರೂರ ಹಾಗೂ ಮೇವುಂಡಿ ಗ್ರಾಮಗಳ ರೈತರ ಸಂತಸ ಎಲ್ಲೇ ಮೀರಿತು. ಪರಸ್ಪರ ಸಿಹಿ ಹಂಚಿದರು. ಮೇವುಂಡಿಯಲ್ಲಿ ಮಹಿಳೆಯರು ಹೊಲಗಳಿಗೆ ತೆರಳಿ ಭೂ ತಾಯಿಗೆ ಪೂಜೆ ಮಾಡಿದ್ದು ವಿಶೇಷವಾಗಿತ್ತು. ಭೂಮಿ ಮತ್ತು ರೈತರ ನಡುವಿನ ಭಾವನಾತ್ಮಕ ಸಂಬಂಧದ ದ್ಯೋತಕ ಇದಾಗಿದೆ. ಈಗಂತೂ ರೈತರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.

ಒಡೆವ ತಂತ್ರ

ಹಳ್ಳಿಗುಡಿ ಹಾಗೂ ಜಂತ್ರಿ–ಶಿರೂರ ಗ್ರಾಮಗಳ ಸುಮಾರು 50 ರೈತರು ಮುಖ್ಯಮಂತ್ರಿ ಘೋಷಣೆ ಹೊರಬೀಳುತ್ತಿದ್ದಂತೆ ಬೆಂಗಳೂರಿಗೆ ಹೋಗಿ 'ತಾವು ಪೋಸ್ಕೊಗೆ ಭೂಮಿ ಕೊಡಲು ಸಿದ್ಧರಿದ್ದೇವೆ" ಎಂದು ಒಪ್ಪಿಗೆ ಸೂಚಿಸಿ ಪತ್ರ ನೀಡಿ, ಗೊಂದಲ, ಆತಂಕ ಸೃಷ್ಟಿಸಿದರು. ಮಂತ್ರಿ, ಶಾಸಕರ ಪ್ರಲೋಭನೆಗೆ ಒಳಗಾಗಿ ಈ ರೈತರು ಭೂಮಿ ಕೊಡಲು ತಯಾರು ಎಂದು ಒಡಕು ದನಿ ಹೊರಡಿಸಿದರು. ಈ ಹಿಂದೆ ಕೆಐಎಡಿಬಿಗೂ ಅವರು ತಮ್ಮ ಒಪ್ಪಿಗೆ ಸೂಚಿಸಿದ್ದರು. ತೋಂಟದ ಶ್ರೀಗಳ ಒಪ್ಪಿಗೆ ಇಲ್ಲದೆ ತಾವು ಮುಂದುವರಿಯಲು ಸಾಧ್ಯವಿಲ್ಲ ಎಂಬಂತಹ ಮುಖ್ಯಮಂತ್ರಿ ಹೇಳಿಕೆಯಿಂದ ಪ್ರಚೋದಿತರಾದ ರೈತರು ಗದಗಿನ ತೋಂಟದ ಶ್ರೀಗಳ ಮೇಲೆ ಒತ್ತಡ ತಂದರು. ಮಠದ ಮುಂದೆ ಧರಣಿ ನಡೆಸುವ ಬೆದರಿಕೆಯನ್ನು ಹಾಕಿದರು. ಧರಣಿಯನ್ನು ಆರಂಭ ಮಾಡಿದರು. ಆದರೆ ಈ ಧರಣಿಯಿಂದ ಸರ್ಕಾರದ ತೀರ್ಮಾನ ಬದಲಾಗುವ ಸಾಧ್ಯತೆ ಕಂಡು ಬರದೇ ಹೋದಾಗ ಧರಣಿ ಕೈಬಿಟ್ಟರು. ●

ಕಾಗದದ ಸಂವಿಧಾನ

ದುಡಿಸುವವ ಮಾತ್ರವೇ ಕೋಟ್ಯಾಧಿಪತಿ
ದುಡಿವವಗೆ ಇಲ್ಲಿಲ್ಲ ಗಂಜಿಗೂ ಗತಿ
ಸಮಾನತೆ ಸಂವಿಧಾನ ಕಾಗದದಿ ಉಂಟು
ಬಡವನಿಗೆ ಅದು ನೋಡಿ ಕನ್ನಡಿಯ ಗಂಟು

- ವಿಡಂಬಾರಿ

ಕನ್ನಡ ವಾರಪತ್ರಿಕೆ

'ದೇಶದಲ್ಲಿ ಎಡ ರಾಜಕೀಯ ಪ್ರಸ್ತುತ' ಎಂದ ಮಹಾರಾಷ್ಟ್ರ

ಗ್ರಾಪಂ. ಚುನಾವಣೆ– ಮೂರು ಜಿಲ್ಲೆಗಳಲ್ಲಿ ಸಿಪಿಐ(ಎಂ)ಗೆ ಮಹತ್ವದ ಮುನ್ನಡೆ

ದ ವಿಧಾನಸಭಾ ಚುನಾವಣೆಯಲ್ಲಿ ತೀವ್ರ ಭವಿಸಿದ್ದ ಎಡಪಕ್ಷಗಳಿಗೆ ಒಂದು ಸಂತಸದ ಈ ಸುದ್ದಿ ಬಂದಿರುವುದು ವಾಣಿಜ್ಯ ಜಧಾನಿ ಎನಿಸಿರುವ ಮುಂಬೈನಿಂದ. ರಾಷ್ಟ್ರದ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಐ(ಎಂ) ಗಣನೀಯ ಸ್ಥಾನ ಗಳಿಸಿದೆ. ಈ ಧನೆ ದೇಶದ ಎಡ ಚಳವಳಿಗೆ ಉತ್ಸಾಹ ಡಿಸಿದೆ.

ಜೂನ್ 26ರಂದು ನಡೆದ ಈ ನಾವಣೆಯಲ್ಲಿ ಆದಿವಾಸಿ ಭಾಗಗಳಾದ ಸಿಕ್, ಥಾಣೆ ಮತ್ತು ನಂದರ್‌ಬರ್ ಜಿಲ್ಲೆಗಳ ಗ್ರಾಮ ಪಂಚಾಯತ್‌ಗಳಲ್ಲಿ ಸಿಪಿಐ(ಎಂ) ರೀ ಮುನ್ನಡೆ ಸಾಧಿಸಿದೆ.

ಈ ಪೈಕಿ ನಾಸಿಕ್‌ನಲ್ಲಿ 60 ಗ್ರಾಮ ಚಾಯತ್‌ನಲ್ಲಿ ಕೆಂಪು ಪತಾಕೆ ಎತ್ತರಕ್ಕೆ ರಿದೆ. ಥಾಣೆಯಲ್ಲಿ 42 ಹಾಗೂ ದರ್‌ಬರ್‌ನಲ್ಲಿ ಐದು ಗ್ರಾಮ ಚಾಯತ್‌ಗಳು ಸಿಪಿಐ(ಎಂ)ನ ತೆಕ್ಕೆಗೆ ಸಿಕ್ಕಿವೆ. ಈ ಹಿಂದೆ ಪ್ರತಿನಿಧಿಸಿದ್ದ ಎಲ್ಲ ಸ್ಥಾನಗಳನ್ನೂ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಲ್ಲದೆ, 30ಕ್ಕೂ ಹೆಚ್ಚು ಸ್ಥಾನಗಳಲ್ಲಿ ಜಯಭೇರಿ ರಿಸಿದೆ. ಕಾಂಗ್ರೆಸ್, ಎನ್‌ಸಿಪಿ, ಬಿಜೆಪಿ, ಸೇನಾ ದಂಥ ಘಟಾನುಘಟಿ ಪಕ್ಷಗಳನ್ನು ದಿಕ್ಕಿ ಸಿಪಿಐ(ಎಂ) ಈ ಸಾಧನೆ ಮಾಡಿದೆ ಬುದು ಗಮನಾರ್ಹ ಅಂಶ. ನಾಸಿಕ್ ಮತ್ತು ಣೆಯ ಹಲವು ಕ್ಷೇತ್ರಗಳಲ್ಲಿ ಈ ಎಲ್ಲ ಪಕ್ಷಗಳು ದಾಗಿ ಸಾಮಾನ್ಯ ಅಭ್ಯರ್ಥಿಗಳ ತಂಡವನ್ನು ಕ್ಕಿಳಿಸಿದ್ದರೂ ಎಡಪಕ್ಷಕ್ಕೆ ಜನರ ಒಲವು ಮೆಯೇನಾಗಲಿಲ್ಲ.

ನಾಸಿಕ್ ಜಿಲ್ಲೆಯ ಸುರ್ಗನ, ಕುಲ್ವಾನ್ ಮತ್ತು ಂಬಕೇಶ್ವರ್, ಥಾಣೆ ಜಿಲ್ಲೆಯ ದಹನು, ತಲಸಾರಿ, ಜವ್ಹಾರ್, ವಿಕ್ರಂಗಢ ಹಾಗೂ ವಾಡ, ನಂದರ್‌ಬರ್ ಜಿಲ್ಲೆಯ ಶಹದಾ ತಹಶೀಲ್‌ಗಳಲ್ಲಿ ಸಿಪಿಐ(ಎಂ) ತನ್ನ ಸಾಧನೆಯನ್ನು ಕೇಂದ್ರೀಕರಿಸಿದೆ. ಇನ್ನೂ ರೋಚಕ ಅಂಶ ಎಂದರೆ, ಪಕ್ಷ ವಿರೋಧಿ ಚಟುವಟಿಕೆಯ ಕಾರಣಕ್ಕೆ ಈ ಪ್ರದೇಶದ ಹಲವು ನಾಯಕರನ್ನು ಸಿಪಿಐ(ಎಂ) ಉಚ್ಚಾಟನೆ ಮಾಡಿತ್ತು. ಈ ಚುನಾವಣೆಯಲ್ಲಿ ಅವರೆಲ್ಲರೂ ಜನರಿಂದ ಸಂಪೂರ್ಣ ದೂರವಾಗಿದ್ದಾರೆ ಎಂಬುದು ದೃಢಪಟ್ಟಿದೆ. ಈ ಎಲ್ಲ ನಾಯಕರ ಗ್ರಾಮಗಳಲ್ಲೂ ಪಕ್ಷ ತನ್ನ ಯಶಸ್ಸನ್ನು ಸಾಧಿಸಿದೆ.

ಪಶ್ಚಿಮ ಬಂಗಾಳ ಮತ್ತು ಕೇರಳ ವಿಧಾನಸಭಾ ಚುನಾವಣೆಯ ಹಿನ್ನಡೆಯ ಸಂದರ್ಭದಲ್ಲೇ ಈ ಚುನಾವಣಾ ಯಶಸ್ಸು ಗಳಿಸಿರುವುದು ಮಹತ್ವ ಪಡೆದುಕೊಂಡಿದೆ. ದೇಶದಲ್ಲಿ ಎಡಪಕ್ಷಗಳು ಮಹತ್ವ ಕಳೆದುಕೊಂಡಿವೆ ಎಂಬ ಮಾಧ್ಯಮಗಳು ಮತ್ತು ಕಾರ್ಪೊರೇಟ್ ಸಂಸ್ಥೆಗಳು ಮತ್ತು ರಾಜಕೀಯ ವಲಯದ ಎಲ್ಲ ಅಪಪ್ರಚಾರಕ್ಕೆ ಇದು ಉತ್ತರ ನೀಡಿದೆ.

ಮುಂದಿನ ಮಾರ್ಚ್‌ನಲ್ಲಿ ನಡೆಯಲಿರುವ ಜಿಲ್ಲಾ ಹಾಗೂ ಪಂಚಾಯತ್ ಸಮಿತಿಗಳ ಚುನಾವಣೆಗೆ ಇದು ಮೇಲ್ಪಂಕ್ತಿ ಹಾಕಿಕೊಟ್ಟಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ನಾಸಿಕ್ ಜಿಲ್ಲೆ

ಈ ಜಿಲ್ಲೆಯಲ್ಲಿ ಪಕ್ಷ 60 ಗ್ರಾಮ ಪಂಚಾಯತ್‌ಗಳಲ್ಲಿ ಬಹುಮತ ಸಾಧಿಸಿದ್ದು, ಇಲ್ಲಿ 500ಕ್ಕೂ ಹೆಚ್ಚು ಸ್ಥಾನಗಳಲ್ಲಿ ಪಕ್ಷದ ಅಭ್ಯರ್ಥಿಗಳು ಗೆದ್ದಿದ್ದಾರೆ. ಪ್ರತಿಪಕ್ಷಗಳ ಆಡಳಿತವಿದ್ದ 15 ಗ್ರಾಮ ಪಂಚಾಯತ್‌ಗಳು ಈ ಬಾರಿ ಪಕ್ಷದ ಹಿಡಿತಕ್ಕೆ ಬಂದಿದೆ. ಸುರ್ಗನ ಪ್ರದೇಶದ 58 ಗ್ರಾಮ ಪಂಚಾಯತ್‌ಗಳ ಪೈಕಿ 36 ಗ್ರಾಮ ಪಂಚಾಯತ್‌ಗಳಲ್ಲಿ ಸಿಪಿಐ(ಎಂ) ಸ್ಪಷ್ಟ ಬಹುಮತ ಸಾಧಿಸಿದೆ. 532 ಸ್ಥಾನಗಳ ಪೈಕಿ 294 ಸ್ಥಾನಗಳು ಸಿಪಿಐ(ಎಂ) ಪಕ್ಷದ ಪಾಲಾಗಿದೆ. ಉಳಿದೆಲ್ಲ ಪಕ್ಷಗಳು ಒಟ್ಟಾಗಿ 22 ಗ್ರಾಮ ಪಂಚಾಯತ್‌ಗಳು ಮತ್ತು 238 ಸ್ಥಾನಗಳು ಗಳಿಸಲಷ್ಟೇ ಸಾಧ್ಯವಾಗಿದೆ. ಸುರ್ಗನದಲ್ಲಿ ಈ ಹಿಂದೆ ಆಡಳಿತ ದಲ್ಲಿದ್ದ ಎಲ್ಲ 28 ಗ್ರಾಮ ಪಂಚಾಯತ್‌ಗಳಲ್ಲೂ ಪಕ್ಷ



ಅಧಿಕಾರವನ್ನು ಉಳಿಸಿಕೊಂಡಿದೆ. ಮಾತ್ರವಲ್ಲ, ಎಂಟು ಗ್ರಾ.ಪಂ.ಗಳ ಅಧಿಕಾರವನ್ನು ಇತರರಿಂದ ಕಸಿದುಕೊಂಡಿದೆ. ತ್ರ್ಯಂಬಕೇಶ್ವರದಲ್ಲಿ 11 ಗ್ರಾಮ ಪಂಚಾಯತ್‌ಗಳಲ್ಲಿ ಪಕ್ಷ ಬಹುಮತ ಸಾಧಿಸಿದೆ. ಕಳೆದ ಬಾರಿಗಿಂತ ಮೂರು ಹೆಚ್ಚಿನ ಪಂಚಾಯತ್‌ಗಳಲ್ಲಿ ಪಕ್ಷ ಅಧಿಕಾರಕ್ಕೆ ಬಂದಿದೆ. ಇಲ್ಲಿ 100ಕ್ಕೂ ಹೆಚ್ಚು ಸ್ಥಾನಗಳನ್ನು ಪಕ್ಷ ಗೆದ್ದಿದೆ. ಇನ್ನು ಕಲ್ವಾನ್‌ನಲ್ಲಿ 10 ಗ್ರಾಮ ಪಂಚಾಯತ್‌ಗಳಲ್ಲಿ ಅಧಿಕಾರ ಗಳಿಸಿದ್ದು, ಪೇತ್ ಮತ್ತು ದಿಂಡೋರಿ ತಹಶೀಲ್‌ಗಳಲ್ಲೂ ಕೆಲವು ಸ್ಥಾನಗಳನ್ನು ಗಳಿಸಿದೆ.

ಥಾಣೆ ಜಿಲ್ಲೆ

ಇಲ್ಲಿ ಪಕ್ಷ 42 ಗ್ರಾಮ ಪಂಚಾಯತ್‌ಗಳಲ್ಲಿ ಅಧಿಕಾರಕ್ಕೆ ಬಂದಿದ್ದು, 431 ಸ್ಥಾನಗಳನ್ನು ಗೆದ್ದುಕೊಂಡಿದೆ. [illegible] 19 ಗ್ರಾ.ಪಂ.ಗಳ [illegible]

[illegible] ಅಧಿಕಾರದಲ್ಲಿದ್ದ 10 ಗ್ರಾ.ಪಂ.ಗಳ ಪೈಕಿ 9ರಲ್ಲಿ ಭರ್ಜರಿ ಬಹುಮತದೊಂದಿಗೆ ಅಧಿಕಾರ ಉಳಿಸಿಕೊಂಡಿದೆ. ಒಟ್ಟು 107 ಸ್ಥಾನಗಳಲ್ಲಿ ಸಿಪಿಐ(ಎಂ) ಗೆದ್ದಿದೆ. ಬಿಜೆಪಿ 25 ಹಾಗೂ ಎನ್‌ಸಿಪಿ ಕೇವಲ ಎಂಟು ಸ್ಥಾನಗಳಲ್ಲಷ್ಟೇ ಗೆದ್ದಿವೆ.

ದಹನು ತಹಶೀಲ್‌ನಲ್ಲಿ ಸಿಪಿಐ(ಎಂ) ಪಕ್ಷ 105 ಸ್ಥಾನಗಳನ್ನು ಗೆದ್ದುಕೊಂಡಿದೆ. ಹಿಂದೆ ಅಧಿಕಾರದಲ್ಲಿದ್ದ ಆರು ಗ್ರಾ.ಪಂ.ಗಳ ಪೈಕಿ ಐದರಲ್ಲಿ ಬಹುಮತ ಲಭಿಸಿದೆ. ಜೊತೆಗೆ ಎನ್‌ಸಿಪಿ ಅಧಿಕಾರದಲ್ಲಿದ್ದ ಆರು ಗ್ರಾ.ಪಂ.ಗಳಲ್ಲಿ ಪಕ್ಷ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿದೆ.

ಜವ್ಹಾರ್‌ನಲ್ಲಿ ಒಟ್ಟು 60 ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳು ಎದುರಾಳಿಯನ್ನು ಮಣ್ಣುಮುಕ್ಕಿಸಿದ್ದಾರೆ. ಐದರಲ್ಲಿ ನಾಲ್ಕು ಗ್ರಾ.ಪಂ.ಗಳ ಅಧಿಕಾರವನ್ನು ಉಳಿಸಿ ಕೊಂಡಿದೆ. ಇದಲ್ಲದೆ ಇತರರ ಅಧಿಕಾರದಲ್ಲಿದ್ದ ಮತ್ತೆ ಮೂರರಲ್ಲಿ ತನ್ನ ಪ್ರಾಬಲ್ಯ ಸ್ಥಾಪಿಸಿದೆ.

ವಿಕ್ರಂಗಢದಲ್ಲಿ 64 ಸ್ಥಾನ ಗೆದ್ದಿರುವ ಸಿಪಿಐ(ಎಂ), ಹಿಂದೆ ಅಧಿಕಾರದಲ್ಲಿದ್ದ ಆರರ ಪೈಕಿ ಐದರಲ್ಲಿ ಅಧಿಕಾರ ಉಳಿಸಿ ಕೊಂಡಿದೆ. ಜೊತೆಗೆ ನಾಲ್ಕು ಇತರ ಗ್ರಾ.ಪಂ. ಗಳಲ್ಲಿ ಸ್ಪಷ್ಟ ಬಹುಮತವನ್ನು ಗಳಿಸಿಕೊಂಡಿದೆ.

ವಾಡದಲ್ಲಿ 60 ಸ್ಥಾನ ಸಿಪಿಐ(ಎಂ)ನ ಪಾಲಾಗಿದೆ. ಅಧಿಕಾರದಲ್ಲಿದ್ದ ಮೂರರ ಪೈಕಿ ಒಂದು ಗ್ರಾ.ಪಂ.ನಲ್ಲಿ ಪ್ರಾಬಲ್ಯ ಉಳಿಸಿಕೊಂಡಿದೆ. ಇತರ ಆರು ಗ್ರಾ.ಪಂ.ಗಳಲ್ಲಿ ಕೆಂಪು ಧ್ವಜವನ್ನು ಹಾರಿಸಿದೆ.

ಇನ್ನು ಪಕ್ಷ ಅಷ್ಟೇನು ಪ್ರಾಬಲ್ಯ ಹೊಂದಿಲ್ಲದ ಶಹಪುರ, ಪಲ್ಘರ್ ಮತ್ತು ಮೊಖಾಡಗಳಲ್ಲಿ ಒಟ್ಟು 35 ಸ್ಥಾನಗಳನ್ನು ಸಿಪಿಐ(ಎಂ) ತನ್ನದಾಗಿಸಿಕೊಂಡಿದೆ.

ನಂದರ್‌ಬರ್ ಜಿಲ್ಲೆ

ಇಲ್ಲಿ ಸಿಪಿಐ(ಎಂ) ಪಕ್ಷ ಐದು ಗ್ರಾ. ಪಂ.ಗಳಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿದೆ. ಇದರಲ್ಲಿ ನಾಲ್ಕು ಶಹದಾ ಮತ್ತು ಒಂದು ತಲೊದ ತಹಶೀಲ್‌ಗೆ ಸೇರಿದ್ದು, ಜೊತೆಗೆ ಗಣನೀಯ ಸಂಖ್ಯೆಯಲ್ಲಿ ಪಕ್ಷದ ಅಭ್ಯರ್ಥಿಗಳು ಜಯಭೇರಿ ಬಾರಿಸಿದ್ದಾರೆ. ಜೊತೆಗೆ ಅಕ್ಕಲ್ಕುವ ತಹಶೀಲ್‌ನಲ್ಲೂ ಪಕ್ಷದ ಸಾಧನೆ ಉತ್ತಮವಾಗಿದೆ.

ಇದರೊಂದಿಗೆ, ಜೂನ್ 12ರಂದು ನಡೆದ ಎಪಿಎಂಸಿ ಚುನಾವಣೆಯಲ್ಲೂ ಸಿಪಿಐ(ಎಂ) ಪಕ್ಷ ಗಮನಾರ್ಹ ಸಾಧನೆ ಮಾಡಿದೆ. ನಾಸಿಕ್‌ನ ಸುರ್ಗನ ಪ್ರಾಂತ್ಯದಲ್ಲಿ 16 ಸ್ಥಾನಗಳ ಪೈಕಿ 15ರಲ್ಲಿ ಪಕ್ಷದ ಅಭ್ಯರ್ಥಿಗಳು ಜಯಭೇರಿ ಬಾರಿಸಿದ್ದಾರೆ.

ಜೂನ್ 26ರಂದು ನಡೆದ ತಲೆಹೊರೆ ಕಾರ್ಮಿಕರ ಹಮಾಲ್ ಮಪಡಿ ಚುನಾವಣೆಯಲ್ಲೂ ಪಕ್ಷ ಎದುರಾಳಿಗಳು ಹಾಗೂ ಪಕ್ಷ ವಿರೋಧಿಗಳನ್ನು ಮಣ್ಣು ಮುಕ್ಕಿಸಿ ಮಹತ್ವದ ಜಯವನ್ನು ಗಳಿಸಿದೆ.

● ಸಿಮಿಸಿ

ಒರಿಸ್ಸಾದಲ್ಲಿ ಕಾನೂನುಭಂಗ ಚಳವಳಿ

ರಾಜ್ಯದ ಜನ ಎದುರಿಸುವ ಜ್ವಲಂತ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಿಪಿಐ(ಎಂ) ನಡೆಸುತ್ತಿರುವ ಹೋರಾಟ ಮಹತ್ವದ ಘಟ್ಟ ತಲುಪಿದೆ. ಜೂನ್ ಮೊದಲ ವಾರದಿಂದ ಸಿಪಿಐ(ಎಂ) ದೊಡ್ಡ ಚಳವಳಿಯನ್ನೇ ನಡೆಸುತ್ತಿದೆ.

ಕನಿಷ್ಟ ವೇತನವನ್ನು 200 ರೂ.ಗೆ ಹೆಚ್ಚಿಸಬೇಕು, ಭೂಹೀನರಿಗೆ ಭೂಮಿ ಮತ್ತು ಅದರ ಹಕ್ಕುಪತ್ರಗಳನ್ನು ವಿತರಿಸಬೇಕು, ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ಜೀವನಾವಶ್ಯಕ ವಸ್ತುಗಳ ಪೂರೈಕೆ, ಯುವಜನರಿಗೆ ಉದ್ಯೋಗ ಕಲ್ಪಿಸುವ ಮಾಸ್ಟರ್ ಪ್ಲಾನ್ ರೂಪಿಸಲು, ವಿಧವೆಯರು, ವಯೋವೃದ್ಧರಿಗೆ ಮಾಸಾಶನವನ್ನು 1000 ರೂ.ಗೆ ಹೆಚ್ಚಿಸುವುದು ಮುಂತಾದ ಬೇಡಿಕೆಗಳನ್ನು ಇಟ್ಟುಕೊಂಡು ಈ ಹೋರಾಟ ನಡೆಯುತ್ತಿದೆ.

ಹೋರಾಟದ ಭಾಗವಾಗಿ ಭುವನೇಶ್ವರದಲ್ಲಿ ನಡೆದ ಜೈಲ್‌ಭರೋ ಚಳವಳಿಯಲ್ಲಿ ಪಕ್ಷದ 257 ಪ್ರಮುಖ ಕಾರ್ಯಕರ್ತರು, ನಾಯಕರನ್ನು ಪೊಲೀಸರು ಬಂಧಿಸಿದರು. ಇದರಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಜನಾರ್ದನ ಪಟಿ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಗನ್ನಾಥ ಮಿಶ್ರಾ, ಅಲಿಕಿಸೋರ್ ಪಟ್ನಾಯಕ್, ರಾಜ್ಯ ಸಮಿತಿ ಸದಸ್ಯರಾದ ಕೈಲಾಶ್ ಸದಾಂಗಿ, ರಾಜೇಂದ್ರ, ಪಾಂಡ ಮೊದಲಾದವರು ಪ್ರಮುಖರು.

ಈ ಹೋರಾಟದಲ್ಲಿ 20ಕ್ಕೂ ಹೆಚ್ಚು ಮಹಿಳಾ ಕಾರ್ಯಕರ್ತರು ಬಂಧನಕ್ಕೊಳಗಾದರು. ಇದೇ ಚಳವಳಿಯ ಭಾಗವಾಗಿ ಪುರಿ ಮತ್ತು ಜಲೇಶ್ವರ್‌ನಲ್ಲೂ ಹಲವು ಕಾರ್ಯಕರ್ತರು ಬಂಧನಕ್ಕೊಳಗಾದರು. ಈ ಕಾರ್ಯಕರ್ತರನ್ನು ನ್ಯಾಯಾಧೀಶರೆದುರು ಹಾಜರು ಪಡಿಸಲು ಪೊಲೀಸರು ಮುಂದಾಗದಿದ್ದಾಗ ಅಲ್ಲೂ ಮತ್ತೆ ಹೋರಾಟ ಮುಂದುವರಿಸಬೇಕಾಯಿತು.

ರಾಜ್ಯಾದ್ಯಂತ ಸುಮಾರು 15 ಸಾವಿರಕ್ಕೂ ಹೆಚ್ಚು ಮಂದಿ ಈ ಕಾನೂನುಭಂಗ ಚಳವಳಿಯಲ್ಲಿ ಭಾಗವಹಿಸಿದ್ದಾರೆ.

ಇದೇ ವೇಳೆ, ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಪಶ್ಚಿಮ ಬಂಗಾಳ ಘಟಕದಲ್ಲಿ ಪಕ್ಷದ ಮೇಲಿನ ದಾಳಿ ಖಂಡಿಸಿ ಪ್ರತಿಭಟನೆಗಳು ನಡೆದವು. ●



ಬಿಜೆಪಿ ದರ್ಬಾರ್

ಸಂತೋಷ ಹೆಗಡೆ ವಶೀಕರಣ ಪ್ರಯೋಗ !! ಭಲರೇ ಯಡಿಯೂರಪ್ಪ

■ ಆರ್.ರಾಮಕೃಷ್ಣ

ಕರ್ನಾಟಕ ರಾಜ್ಯದಲ್ಲಿ ನಡೆದಿರುವ ಘೋರ ಗಣಿ ಲೂಟಿ, ಅಕ್ರಮ, ಹಗರಣಗಳ ಬಗೆಗೆ ರಾಜ್ಯ ಲೋಕಾಯುಕ್ತರ ತನಿಖೆ ನಡೆದು ಇನ್ನೇನು ವರದಿ ಸಲ್ಲಿಕೆಯಾಗಲಿದೆ. ವರದಿಯ ಕೆಲವೊಂದು ಅಂಶಗಳು ಈಗಾಗಲೇ ಮಾಧ್ಯಮಗಳಲ್ಲಿ ಬಯಲಾಗಿದೆ. ಬಯಲಾಗಿರುವ ಅಂಶಗಳು ಅಧಿಕೃತ ವರದಿಯ ಭಾಗ ಎಂದು ಲೋಕಾಯುಕ್ತ ಸಂತೋಷ ಹೆಗಡೆಯವರು ಸ್ಪಷ್ಟಪಡಿಸಿದ್ದಾರೆ. ಗಣಿ ಅಕ್ರಮಗಳಲ್ಲಿ ಕಾಂಗ್ರೆಸ್ ಶಾಸಕ ಅನಿಲ್‌ಲಾಡ್ ಜೆಡಿ(ಎಸ್) ಮುಖಂಡ, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಹೆಸರುಗಳು ಪ್ರಸ್ತಾಪವಾಗಿವೆ.

ಜೊತೆಗೆ ಕರ್ನಾಟಕ ರಾಜ್ಯ ಬಿಜೆಪಿ ಸರ್ಕಾರದ ಘನ ಮುಖ್ಯಮಂತ್ರಿ ಡಾ। ಬಿ.ಎಸ್. ಯಡಿಯೂರಪ್ಪ, ಅವರ ಸರ್ಕಾರದ ಮುಕುಟ ಮಣಿಗಳಾದ ಜನಾರ್ಧನ ರೆಡ್ಡಿ, ಕರುಣಾಕರ ರೆಡ್ಡಿ, ಬಿ.ಶ್ರೀರಾಮುಲು ಅವರುಗಳ ಪವಿತ್ರ ನಾಮವಳಿಗಳು ತನಿಖಾ ವರದಿಯಲ್ಲಿ ಯಾವುದೇ ಅನುಮಾನಕ್ಕೆ ಎಡೆ ಇಲ್ಲದಂತೆ ಸ್ಪಷ್ಟವಾಗಿ ನಮೂದಾಗಿವೆ. ಯಡಿಯೂರಪ್ಪನವರು ಯಾರಿಗೇನು ಕಮ್ಮಿಯೂ ಅಲ್ಲ. ಅವರು ಒಬ್ಬಂಟಿಯೂ ಅಲ್ಲ. ಇದೊಂಥರ 'ಆಲಿಬಾಬ' ಕೂಟ ಇದ್ದಂತೆ. ಈ ಕೂಟವನ್ನು ಹಾಗೂ ಈ ಕೂಟದ ತಾಳಕ್ಕೆ ತಕ್ಕಂತೆ ಕುಣಿಯುವ ಅಧಿಕಾರಿ ವರ್ಗದ ಹಿಂಡಿಗೆ ಲೋಕಾಯುಕ್ತರು ಬಲೆ ಬೀಸಿರುವಂತೆ ತೋರುತ್ತಿದೆ. ಲೋಕಾಯುಕ್ತ ವರದಿಯ ಬಗೆಗೆ ಮತ್ತೊಂದು ಲೇಖನ ಗಮನಿಸಿ.

ಲೋಕಾಯುಕ್ತರೇನೋ ಈ ಹಲವಾರು ತಿಮಿಂಗಲಗಳಿಗೆ ತಮ್ಮ ಗಾಳ ಹಾಕಿ, ಬಲೆ ಬೀಸಿದ್ದಾರೆ.

ಆದರೆ ಸ್ವತಃ ಲೋಕಾಯುಕ್ತ ಸಂತೋಷ ಹೆಗಡೆಯವರಿಗೆ ಸಮ್ಮೋಹನಾಸ್ತ್ರ ಬೀಸಿ ವಶೀಕರಣ ಮಾಡಿಕೊಳ್ಳಲು ಯತ್ನಿಸಿದ ಈ ಬಿಜೆಪಿ ಕೂಟದ ಭಾನಾಗಡಿಯ ರೋಚಕ ಕತೆಯೊಂದು ಬಟಾ ಬಯಲಾಗಿದೆ. ಸ್ವತಃ ಹೆಗಡೆಯವರೇ ಹೊರಗೆಡಹಿದ ಈ ಕತೆಯ ವಿವರ ನೋಡಿ.

ಉನ್ನತ ಶಿಕ್ಷಣ ಸಚಿವರಾದ ಶ್ರೀಮನ್ ವಿ.ಎಸ್.ಆಚಾರ್ಯರು, ಕರ್ನಾಟಕ ರಾಜ್ಯದ ದೆಹಲಿ ಪ್ರತಿನಿಧಿ ಸನ್ಮಾನ್ಯ ಶ್ರೀ ವಿ.ದನಂಜಯ ಕುಮಾರ್, ರಾಜ್ಯದ ಮೂರನೇ ಹಣಕಾಸು ಆಯೋಗದ ಶಿಫಾರಸ್ಸುಗಳ ಜಾರಿ ಕಾರ್ಯಪಡೆ ಅಧ್ಯಕ್ಷ ಶ್ರೀ ಎ.ಜಿ. ಕೊಡ್ಗಿಯವರು ಜೂನ್ 15 ರಂದು ಖುದ್ದು ಸಂತೋಷ ಹೆಗಡೆಯವರನ್ನು ಭೇಟಿ ಮಾಡಿ ಲೋಕಾಯುಕ್ತ ವರದಿಯಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನವರ ಹೆಸರನ್ನು ದಯಮಾಡಿ ಸೇರಿಸಬೇಡಿ ಎಂದು ವಿನಮ್ರ ಮನವಿ ಮಾಡಿದರಂತೆ.

ಖ್ಯಾತ ಕ್ರಿಕೆಟ್ಟಿಗ ಜಿ.ಆರ್. ವಿಶ್ವನಾಥ್‌ರವರು ತಾವು ಔಟ್ ಅಗಿರುವುದು ತಮಗೆ ಅರ್ಥವಾಗಿಬಿಟ್ಟರೂ ಸಾಕು, ಅಂಪೈರ್ ತೀರ್ಪು ಕೊಡುವ ಮುಂಚೆಯೇ ತಾವೇ ವಾಪಸ್ಸಾಗಿ ಬಿಡುತ್ತಿದ್ದರಂತೆ. ಕ್ಯಾಚ್ ಹಿಡಿದಿರುವ ಬಾಲು ಬ್ಯಾಟ್‌ಗೆ ಸವರಿಕೊಂಡು ಹೋಗಿದೆಯೋ ಇಲ್ಲವೋ ಎಂಬುದು ಆಟಗಾರನಿಗಿಂತ ಚೆನ್ನಾಗಿ ಯಾರಿಗೆ ಗೊತ್ತಿರಲು ಸಾಧ್ಯ ?

ಇದು ಬಾಲು ಬ್ಯಾಟಿಗೆ ಸವರಿಕೊಂಡು ಹೋಗಿದೆಯೋ ಇಲ್ಲವೋ ಅಂಬೋ ಪ್ರಕರಣ ಅಲ್ಲವೇ ಅಲ್ಲ. ಅಕ್ರಮ, ಭ್ರಷ್ಟಾಚಾರವೆಂಬ ಹೊಲಸು ಗುಂಡಿಯಲ್ಲಿ ಮುಳುಗಿ ಮುಳುಗಿ ಎದ್ದಿರುವ ಕತೆ. ತಾವು ಎಷ್ಟು ಬಾರಿ ಗುಂಡಿಯಲ್ಲಿ ಮುಳುಗಿದ್ದೇವೆ. ಎಷ್ಟು ಹೊಲಸು ತಿಂದು, ನುಂಗಿ ನೀರು ಕುಡಿದಿದ್ದೇವೆ ಎಂಬುದು ಈಗಲೂ ಅದೇ ಕೊಳಕು ಗುಂಡಿಯಲ್ಲೇ ಮುಳುಗಿ ಈಜಾಡುತ್ತಿರುವವರಿಗೆ ಗೊತ್ತಿರುವುದಿಲ್ಲವೇ ? ಹಾಗಾಗಿ ಈ 'ಸೌಹಾರ್ದ ಭೇಟಿ' ನಡೆಸಲಾಗಿದೆ.

ಮುಖ್ಯಮಂತ್ರಿಗಳೇ ತಾವೇ ನೇರವಾಗಿ ಹೋಗಲಾಗದು. ಹಿರಿಯ ಸಚಿವರು, ನಂಬಿಕಸ್ಥರು ಹೋಗಿ ಮಾತಾಡಿ ವ್ಯವಹಾರ ಕುದುರಿದರೆ... ಆಮೇಲೆ ಮುಂದಿನ ಮಾತು. ಹೆಗಡೆಯವರನ್ನೂ ಈಜಾಡಲು ನೀರಿಗೆ ಇಳಿಯಿರಿ ಎನ್ನಬಹುದಿತ್ತು. ಬಹುಶಃ ಈ ಈಜಾಟದ ಆನಂದ, ರುಚಿ ಒಲ್ಲದ ಲೋಕಾಯುಕ್ತರು ಆ ಬಗ್ಗೆ ಬಹಿರಂಗ ಡಂಗೂರ ಸಾರುತ್ತಿದ್ದಾರೆ. ಸ್ವಲ್ಪ ಎಡವಟ್ಟಾಯಿತು. ಇರಲಿ. ದನಂಜಯ ಕುಮಾರ್ ತಾವು ಹೆಗಡೆಯವರನ್ನು ಭೇಟಿ ಮಾಡಿದ್ದು ನಿಜ. ಆದರೆ ಬೇರೊಂದು ಪ್ರಕರಣದ ಬಗೆಗೆ ಸ್ಪಷ್ಟೀಕರಣ ನೀಡಲು ಅಂದಿದ್ದಾರೆ.

★

ಜನ ನಡು ನೀರಲ್ಲಿ ಮುಖ್ಯಮಂತ್ರಿಗಳು ಮಾರಿಷಸ್‌ನ ಆನಂದದ ಕಡಲಲ್ಲಿ

ರಾಜ್ಯದಲ್ಲಿ ಮುಂಗಾರು ಮಳೆ ತೀವ್ರವಾಗಿದೆ. ಸೇತುವೆ ನಾಶ, ಗುಡ್ಡ ಕುಸಿತ, ಮನೆ ಕುಸಿತದ ವರದಿಗಳು ನಿರಂತರವಾಗಿ ಬರುತ್ತಿವೆ. ಅಣೆಕಟ್ಟೆಗಳು ತುಂಬಿ ಭರ್ತಿಯಾಗಿ ನೀರು ಹೊರ ಬಿಟ್ಟು ಹಲವೆಡೆ ಪ್ರವಾಹ ಪರಿಸ್ಥಿತಿ ತಲೆದೋರುತ್ತಿದೆ. ಬೆಳೆ ನಾಶದ ವರದಿಗಳು ಬರುತ್ತಿವೆ. ಮುಂಗಾರು ಮಳೆ ಇಲ್ಲಿಗೆ ನಿಲ್ಲುವುದಲ್ಲ. ಇಂತಹ ಸನ್ನಿವೇಶದಲ್ಲಿ ರಾಜ್ಯ ಸರ್ಕಾರ ಎಂತಹುದೇ ಅನಾಹುತಗಳನ್ನು ಎದುರಿಸಲು ಸಜ್ಜಾಗಿರಬೇಕು. ಯಾವುದೇ ಸನ್ನಿವೇಶ ಬಂದರೂ ಜನ ಜಾನುವಾರುಗಳ ಪ್ರಾಣ, ಆಸ್ತಿ, ಪಾಸ್ತಿ ರಕ್ಷಣೆಗೆ ಸನ್ನದ್ಧವಾಗಿರಬೇಕು. ಇವೆಲ್ಲಾ ಆಗಬೇಕಾದರೆ ಆಡಳಿತ ಚುಕ್ಕಾಣಿ ಹಿಡಿದ ಸಚಿವರು, ಅವರ ತಂಡದ ನಾಯಕರಾದ ಮುಖ್ಯಮಂತ್ರಿಗಳು ಈ ಬಗೆಗೆ ನಿಗಾ ಇಟ್ಟು ಸೂಕ್ತ ಮೇಲುಸ್ತುವಾರಿ ವಹಿಸಬೇಕು.

ಸುಮಾರು ಎರಡು ವರ್ಷಗಳ ಹಿಂದೆ ರಾಜ್ಯದಲ್ಲಿ ಪ್ರವಾಹ ಬಂದಾಗ ಬಿಜೆಪಿ ಸರ್ಕಾರದ ಸಚಿವ ಗಣ ಮೈಸೂರಿನ ಸುತ್ತೂರಿನಲ್ಲಿ ಆರೆಸ್ಸೆಸ್ ಭೈಠಕ್ ನಲ್ಲಿ ಕೈ ಕಾಲು ತಿರುಗಿಸುತ್ತಾ ಕಸರತ್ತು ನಡೆಸುತ್ತಿತ್ತು. ನೂರಾರು ಜನ, ಜಾನುವಾರುಗಳು ಪ್ರವಾಹದಲ್ಲಿ ಕೊಚ್ಚಿ ಹೋಗಿ ಸತ್ತು ಹೆಣವಾದರೂ ಸಚಿವ ಗಣಕ್ಕೆ ಭೈಠಕ್‌ನ ಮಂಪರು ಇಳಿದಿರಲಿಲ್ಲ.

ಈಗ ಏನು ಪರಿಸ್ಥಿತಿ ಬಹಳ ಭಿನ್ನವಾಗಿಲ್ಲ ಬಿಡಿ. ಸಚಿವ ಸಂಪುಟ, ಅಧಿಕಾರಿ ವರ್ಗವನ್ನು ನಿರ್ದೇಶಿಸಿ ನೇತೃತ್ವವಹಿಸ ಬೇಕಾದ ಯಡಿಯೂರಪ್ಪನವರು ಕರ್ನಾಟಕದಲ್ಲಿ ಇಲ್ಲವೇ ಇಲ್ಲ. ಕರ್ನಾಟಕದಲ್ಲೇಕೆ ಭಾರತದಲ್ಲೂ ಇಲ್ಲ. ಎಲ್ಲಿದ್ದಾರೆ ಅವರು?

ಅವರು ತಮ್ಮ ಕುಟುಂಬ ಸಮೇತರಾಗಿ ಮಾರಿಷಸ್ ದ್ವೀಪದಲ್ಲಿದ್ದಾರೆ. ಏನು ಘನ ಕಾರ್ಯ ಅಂತೀರಾ. ರಾಜ್ಯದ ಜನತೆಗೆ ಈಗ ಪ್ರವಾಹದ ನೀರಲ್ಲಿ ಮುಳುಗುವ ಯೋಗವಾದರೆ ಯಡಿಯೂರಪ್ಪನವರಿಗೆ ಪ್ರವಾಸ ಯೋಗ, ಮನರಂಜನಾ ಪಿಕ್‌ನಿಕ್ ಯೋಗ.

ಇನ್ನೇನು ಬಿಡುಗಡೆಯಾಗಲಿರುವ ಗಣಿ ಹಗರಣಗಳ ಲೋಕಾಯುಕ್ತ ತನಿಖಾ ವರದಿಗೆ ಹೆದರಿ ಯಡಿಯೂರಪ್ಪ ಅಲ್ಲಿಗೆ ಹೋಗಿದ್ದಾರೆ ಅನ್ನುವವರಿದ್ದಾರೆ. ಅಯ್ಯೋ ಲೋಕಾಯುಕ್ತರಲ್ಲ ಅವರಪ್ಪನಂತಹ ಸಂಸ್ಥೆ ತನಿಖೆ ಮಾಡಿ ವರದಿ ಮುಂದಿಡಲಿ, ಅದಕ್ಕೆಲ್ಲಾ ಈ ಯಡಿಯೂರಪ್ಪ ಜಗ್ಗುವವರಲ್ಲ. ಅವರದ್ದು ಎಂಥಾ ಎಮ್ಮೆ ಚರ್ಮ...ಕ್ಷಮಿಸಿ ಎಂಥಾ ಘೇಂಡಾಮೃಗದಂತಹ ಚರ್ಮ ಅಂತ ಪಾಪ ಅವರಿಗೆ ಗೊತ್ತಿಲ್ಲ ಅನಿಸುತ್ತೆ.

ಲೋಕಾಯುಕ್ತರದ್ದು ಏನು ಇದೇ ಮೊದಲ ವರದಿಯಾ ? ಅವರು ತಮ್ಮ ತನಿಖೆಯ ಮಧ್ಯಂತರ ವರದಿಯನ್ನು ಕೊಟ್ಟದ್ದರಲ್ಲ. ನಮ್ಮ ಯಡಿಯೂರಪ್ಪನವರು ಕೂದಲು ಎಳೆಯಷ್ಟಾದರೂ ಏನಾದರೂ ಕ್ರಮವಹಿಸಿದ್ದಾರ ಆರೋಪಿಗಳ ಮೇಲೆ. ಛೇ ಛೇ ಅವರ ಸಾಮರ್ಥ್ಯವನ್ನು ಹಾಗೆಲ್ಲಾ ಕಡಿಮೆ ಅಂದಾಜು ಮಾಡಬಾರದು. ಏನಂತೀರಿ ?

★

ತನಿಖೆಯನ್ನೂ ಮಾಡಲ್ಲ ತನಿಖೆಗೂ ಒಳಗಾಗಲ್ಲ – ಯಡಿಯೂರಪ್ಪ ಆಡಳಿತದ ಅಮೋಘ ಶೈಲಿ

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಮತ್ತು ದೇವೇಗೌಡರ ಕುಟುಂಬ 1500 ಕೋಟಿ ರೂಪಾಯಿಗಳ ಅಕ್ರಮ ಆಸ್ತಿ ಸಂಪಾದನೆ ಮಾಡಿಕೊಂಡಿದೆ ಅಂತ ಇತ್ತೀಚೆಗೆ ರಾಜ್ಯ ಬಿಜೆಪಿ ಒಂದು ಆರೋಪಗಳ ಕಿರು ಹೊತ್ತಗೆಯನ್ನೇ ಬಿಡುಗಡೆ ಮಾಡಿತು. ಕುಮಾರ ಸ್ವಾಮಿಯವರು ಆರೋಪಗಳ ಬಗೆಗೆ ತನಿಖೆ ಮಾಡಿ ಅಂತ ಉಪವಾಸ ಆರಂಭಿಸಿದರು. ಏನೇನೋ ಒತ್ತಡ ತಂದು ಕುಮಾರಸ್ವಾಮಿ ಯವರನ್ನು ಉಪವಾಸದಿಂದ ಎಬ್ಬಿಸಲಾಯಿತು. ಸರ್ಕಾರ ಈ ಆರೋಪಗಳ ಬಗೆಗೆ ತನಿಖೆ ಮಾಡುವುದಿಲ್ಲ ಅಂತಲೂ ಸ್ಪಷ್ಟವಾಗಿ ಹೇಳಿದೆ. ಇದು ಬಿಜೆಪಿ ಸರ್ಕಾರದ ಒಂದು ಥರದ ವರಸೆ. ಅಕ್ರಮ, ಭ್ರಷ್ಟಾಚಾರದ ಆರೋಪ ಹಗರಣಗಳ ಸಂಬಂಧ ಬಿಜೆಪಿ ಸರ್ಕಾರದ ಇನ್ನೂ ಒಂದು ಥರದ ವರಸೆ ಇದೆ.

ಯಡಿಯೂರಪ್ಪನವರ ಮೇಲೆ ಜಮೀನು ಡೀನೋಟಿಫೈ ಮಾಡಿ ತಮ್ಮ ಮಕ್ಕಳು ಅಳಿಯ ಕೋಟ್ಯಾಂತರ ರೂಪಾಯಿಗಳ ಬೆಲೆಯ ಭೂಮಿ ಲಪಟಾಯಿಸಿದ ಹಗರಣದಲ್ಲಿ ಭಾಗಿಯಾಗಿದ್ ದಾರೆಂಬ ಗಂಭಿರ ಆರೋಪ ಇರುವುದು ಈಗ ಲೋಕವಿಖ್ಯಾತ ವಿಚಾರವಲ್ಲವೇ? ಯಾರಾದರೂ ಜವಾಬ್ದಾರಿ ಸ್ಥಾನದಲ್ಲಿರುವವರು ತಮ್ಮ ಮೇಲೆ ಇಂತಹ ಗಂಭೀರ ಆರೋಪ ಬಂದಾಗ ಏನು ಮಾಡಬೇಕು. ಯಾವ ಅಳುಕು ಇಲ್ಲವಾದರೆ 'ನಾನು ತನಿಖೆಗೆ ಸಿದ್ಧ' ಎನ್ನಬೇಕು. ತನಿಖೆಗೆ ತಮ್ಮನ್ನು ಒಪ್ಪಿಸಿಕೊಂಡು ನಿರ್ದೋಷಿ ಅಂತ ಸಾಬೀತು ಮಾಡಿ ಆರೋಪದಿಂದ ಹೊರಬರ ಬೇಕು.

ಈಗ ಯಡಿಯೂರಪ್ಪನವರು ಏನು ಮಾಡುತ್ತಿದ್ದಾರೆ ನೋಡಿ. ತಮ್ಮ ಮೇಲಿನ ಆರೋಪಗಳ ತನಿಖೆ ಅವಕಾಶ ಕೊಡಬೇಡಿ ತನಿಖೆ ತಡೆಯಿರಿ, ತನಿಖೆ ತಡೆಯಿರಿ... ಅಂತ ತಮ್ಮ ವಕೀಲರ ಮೂಲಕ ವರಾತ ಮಾಡುತ್ತಿದ್ದಾರೆ. 'ಯಾವ ತನಿಖೆ ಬೇಕಾದರೂ ಮಾಡಿ, ನಾನು ಸಿದ್ಧ, ನಾನು ನಿರ್ದೋಷಿ' ಅಂತ ಯಾಕೆ ಅವರು ಘೋಷಿಸುವುದಿಲ್ಲ.

ಅದೇ, ಅದೇ ಯಡಿಯೂರಪ್ಪನವರ ವಿಶೇಷ. ಕೆಲವರು ತೋರಿಕೆಗಾದರೂ ತನಿಖೆಗೆ ಸಿದ್ಧ ಎಂದು ಘೋಷಿಸುತ್ತಾರೆ. ತನಿಖೆಯಲ್ಲಿ ತಪ್ಪಿಸಿಕೊಳ್ಳುವ ತಂತ್ರ ಹುಡುಕುತ್ತಾರೆ. ಯಡಿಯೂರಪ್ಪನವರು ಅದಕ್ಕೂ ತಯಾರಿಲ್ಲ. ಯಾಕೆಂದರೆ ತನಿಖೆ ಅಂತ ಒಂದು ನಡೆದರೆ ಯಡಿಯೂರಪ್ಪನವರನ್ನು ಕಾಪಾಡಬೇಕು ಅಂತ ಅಂದುಕೊಂಡು ತನಿಖೆ ಮಾಡಿದರೂ ಕೂಡ ತನಿಖೆ ಮಾಡುವವರು ಅವರನ್ನು ಕಾಪಾಡಲು ಸಾಧ್ಯವಿಲ್ಲ. ಆ ಪರಿಯಾಗಿ ಯಡಿಯೂರಪ್ಪ ನುಂಗಿ ಜೀರ್ಣಿಸಿಕೊಳ್ಳಲಾರದೇ ಒದ್ದಾಡು ತ್ತಿದ್ದಾರೆ. ಪಾಪ ತನಿಖೆ ಮಾಡಬೇಡಿ ಅಂತ ವರಾತ ಮಾಡದೇ ಇನ್ನೇನು ಮಾಡುತ್ತಾರೆ.

ಕನ್ನಡ ವಾರಪತ್ರಿಕೆ

ವ ಸರ್ವೋಚ್ಚ ನ್ಯಾಯಾಲಯದಿಂದ ನಿಷ್ಕ್ರಿಯ ಸರಕಾರ ಎಂದು ಮತ್ತೆ-ಮತ್ತೆ ಚಾಟಿಯೇಟು ತಿನ್ನುತ್ತಿರುವ ಯುಪಿಎ-2 ಆ ನಿಷ್ಕ್ರಿಯತೆಯನ್ನು ಹೋಗಲಾಡಿಸುವ ನಿಲ್ಲುವ ಬದಲು ಹೇಗಾದರೂ ಈ ಚಾಟಿ ಏಟುಗಳನ್ನು ನಿಲ್ಲಿಸುವ ಪ್ರಯತ್ನವೇ ಮೇಲು ಎಂದು ಈ ವಾರ ಭಾವಿಸಿದಂತಿದೆ.

ತೆಲಂಗಾಣದ ಬಗ್ಗೆ ನಿಷ್ಕ್ರಿಯತೆ ಮುಂದುವರೆದಿದೆ. ಸ್ವತಃ ಕಾಂಗ್ರೆಸಿನ ಸಂಸದರೇ ಅದರ ಪರವಾಗಿಯೂ ಮತ್ತು ವಿರುದ್ಧವಾಗಿಯೂ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿದ್ದಾರೆ.

ಪಶ್ಚಿಮ ಬಂಗಾಲದಲ್ಲಿ ಮಮತಾ ಸರಕಾರದ 'ಘೋರ್ಖಾಲ್ಯಾಂಡ್' ಒಪ್ಪಂದದಲ್ಲಿ ಯುಪಿಎ-2 ಸರಕಾರವೂ ಭಾಗಿಯಾಗಿದೆ. ಆದರೆ ಅದರಲ್ಲಿನ ಅಂಶಗಳೇನು ಎಂದು ಇನ್ನೂ ಬಹಿರಂಗಪಡಿಸಿಲ್ಲ. ಈ ಮೂಲಕ ಪ್ರತ್ಯೇಕ 'ಘೋರ್ಖಾಲ್ಯಾಂಡ್'ಗೆ ಹಾದಿ ಮಾಡಿಕೊಡಲಾಗಿದೆ ಎಂದು ಉತ್ತರ ಬಂಗಾಲದ ಬುಡಕಟ್ಟು ಜನಗಳು ಸಿಟ್ಟಿಗೆದ್ದಿದ್ದಾರೆ, ಈ ಪ್ರದೇಶದಲ್ಲಿ ಇದರಿಂದ ಶಾಂತಿಯಂತೂ ನೆಲೆಸದು ಎಂಬುದು ಇತರರ ಭಾವನೆ.

'ಆಮ್ ಆದ್ಮಿ'ಗಾಗಿ ಎಂದು ಡಂಗುರ ಸಾರುವ ಇನ್ನೊಂದು, ಆಹಾರ ಭದ್ರತಾ ಕಾನೂನು ಬರಲಿದ್ದು ಅದು ಜನಸಾಮಾನ್ಯರನ್ನು ವಂಚಿಸುವ ಇನ್ನೊಂದು ಸಾಧನವಾಗುತ್ತಿರುವಂತೆಯೇ, ಜನಸಾಮಾನ್ಯರಿಗೆ ತುಸುವಾದರೂ ಪರಿಹಾರ ನೀಡಿರುವ ರೇಗಾ ಕಾನೂನನ್ನೂ ನಿಷ್ಕ್ರಿಯಗೊಳಿಸುವ ಪ್ರಯತ್ನ ಸಾಗಿದೆ.

ಈ ನಡುವೆ ಪರಮಾಣು ವ್ಯವಹಾರದಲ್ಲಿ ಪೇಚಿಗೆ ಸಿಲುಕಿರುವ ಸಂದರ್ಭದಲ್ಲಿ ಯುಪಿಎ-2 ಹೆಚ್ಚಿನ ಅಮೆರಿಕನ್ ಒತ್ತಡಕ್ಕೂ ತಲೆಬಾಗಬಹುದೇನೋ ಎಂಬ ಸಂದೇಹ ಮುಂದುವರೆದಿದೆ.



ವೇದರಾಜ ಎನ್.ಕೆ.

ಚಾಟಿಯೇಟುಗಳಿಂದ ತಲ್ಲಣಗೊಳ್ಳಬೇಕೇಕೆ?- ಯುಪಿಎ 2 ಪ್ರಶ್ನೆ

ಹಣ ತನಿಖೆಯಲ್ಲಿ ಯುಪಿಎ-2 ಸರಕಾರ ...ಏಟು ಹಾಕುತ್ತಿದೆ ಎಂದು ದೇಶದ ...ರ್ವೋಚ್ಚ ನ್ಯಾಯಾಲಯ ತಾನೇ ಸ್ವತಃ ಒಂದು ...ಷ ತನಿಖಾ ತಂಡ(ಎಸ್‌ಐಟಿ)ವನ್ನು ...ರುವುದರಿಂದ ಸರಕಾರ ಕುಪಿತಗೊಂಡಿದೆ. ...ಆದೇಶದ ಮರುಪರಿಶೀಲನೆ ನಡೆಸಬೇಕು ...ು ಕಳೆದ ಶುಕ್ರವಾರ ಯುಪಿಎ-2 ಸರಕಾರ ...ಸಲ್ಲಿಸಿದೆ. ಈ ಆದೇಶದ ಮೂಲಕ ಸುಪ್ರಿಂ ...ರ್ಟ್ ಕಾರ್ಯಾಂಗದ ಪಾತ್ರವನ್ನು ಸಂಪೂರ್ಣವಾಗಿ ಅಳಿಸಿ ಹಾಕಿದೆ ಎಂಬುದು ಅದರ ತರ್ಕ. ಇತ್ತೀಚೆಗೆ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟಂತೆ ಯುಪಿಎ-2 ಸರಕಾರವನ್ನು ಸುಪ್ರಿಂ ಕೋರ್ಟ್ ಹಲವು ಬಾರಿ ತರಾಟೆಗೆ ತಗೊಂಡಿದ್ದು, ಅದು ತನ್ನ ಮಿತಿ ಮೀರಿ ಹೋಗುತ್ತಿದೆ ಎಂದು ಮೊದಲ ಬಾರಿಗೆ ಯುಪಿಎ-2 ಸರಕಾರ ಈ ಮೂಲಕ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದಂತಾಗಿದೆ. ಆರ್ಥಿಕ ಧೋರಣೆಗಳು ಕಾರ್ಯಾಂಗಕ್ಕೆ ಸೇರಿದ್ದು. ಅದರಲ್ಲಿ ನ್ಯಾಯಾಂಗದ ಹಸ್ತಕ್ಷೇಪ ಸಲ್ಲದು ಎಂದು ಈ ಮರು ಪರಿಶೀಲನೆ ಅರ್ಜಿಯನ್ನು ಅದು ಸಲ್ಲಿಸಿದೆ. ಪ್ರಭುತ್ವದ ಮೂರು ಅಂಗಗಳು ತಂತಮ್ಮ ಸಂವಿಧಾನಿಕ ಪರಿಮಿತಿಯೊಳಗೆ ಕೆಲಸ ಮಾಡದಿದ್ದರೆ 'ವಿಕೃತಿಗಳು' ಉಂಟಾಗುತ್ತವೆ ಎಂದು ಹಿರಿಯ ಯುಪಿಎ-2 ಮಂತ್ರಿ ಪ್ರಣಬ್ ಮುಖರ್ಜಿ ಹೇಳಿದ್ದಾರೆ. ಕಾರ್ಯಾಂಗ ತನ್ನ ಸಂವಿಧಾನಿಕ ಹೊಣೆಗಳನ್ನು ನಿಭಾಯಿಸದಿದ್ದರೆ ನಾಗರಿಕರು ಯಾರ ಮೊರೆ ಹೋಗಬೇಕು ಎಂದು ಮಾತ್ರ ಹೇಳಿಲ್ಲ.

ವಿಶೇಷವೆಂದರೆ ಇದರ ಹಿಂದಿನ ದಿನವಷ್ಟೇ, ಮೂರು ವರ್ಷಗಳ ಹಿಂದಿನ 'ನೋಟಿಗಾಗಿ ವೋಟು' ಪ್ರಕರಣದ ತನಿಖೆಯ ನಿಧಾನ ಗತಿಯ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಅತೃಪ್ತಿ ವ್ಯಕ್ತಪಡಿಸಿತ್ತು ಎಂಬುದನ್ನು ಇಲ್ಲಿ ಗಮನಿಸಬಹುದು. ಇದರ ಪರಿಣಾಮವೋ ಎನ್ನುವಂತೆ ಎರಡು ದಿನಗಳ ನಂತರ ಬಿಜೆಪಿ ಸಂಸದರಿಗೆ 1 ಕೋಟಿ ರೂ. ಕೊಡಲು ಬಂದಿದ್ದನೆನ್ನಲಾದ ಸಂಜೀವ ಸಕ್ಸೇನ ಎಂಬಾತನನ್ನು ದಿಲ್ಲಿ ಪೋಲೀಸರು ಬಂಧಿಸಿದ್ದಾರೆ. ಈತ ಆಗ ಸಮಾಜವಾದಿ ಪಕ್ಷದ ಮುಖಂಡರಾಗಿದ್ದ ಅಮರ್ ಸಿಂಗ್‌ರವರ ಶಿಷ್ಯನಂತೆ. ಅಮರ್ ಸಿಂಗ್ ಕಾಂಗ್ರೆಸಿನವರಿಗಾಗಿ ನಡೆಸಿದ್ದ ಹಗರಣ ಇದು ಎನ್ನಲಾಗಿದೆ.

ಭಾರತ-ಅಮೆರಿಕಾ ಪರಮಾಣು ವ್ಯವಹಾರದಲ್ಲಿ ಎಡಪಕ್ಷಗಳು ಯುಪಿಎ-1 ಸರಕಾರಕ್ಕೆ

ಪುಟ 15 ಕ್ಕೆ

ನಾಟಿಯ ಕಾಲದಲ್ಲಿ ರೇಗಾ ಅಮಾನತಿನಲ್ಲಿರಬೇಕಂತೆ! ಕೂಲಿಕಾರರ ವಲಸೆ ತಡೆದಿದೆ ಎಂಬ ವಿಚಿತ್ರ ಅಳಲು!

ಯುಪಿಎ-2 ಸರಕಾರದ ಇನ್ನೊಂದು ...ನಿಷ್ಕ್ರಿಯಿತ ಕಾನೂನಿನ ಸ್ಥಿತಿಯನ್ನು ನೋಡಿ. ...ಆರಂಭದಲ್ಲಿ ರೇಗಾ ಎಂದು ಹೆಸರಾಗಿದ್ದ ...ಈಗ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಗ್ಯಾರಂಟಿ ಕಾನೂನು ...ಎಂದಾಗಿರುವುದರ ಜಾರಿಯನ್ನು ಬೇಸಾಯ ಚಟುವಟಿಕೆಗಳು ನಡೆಯುತ್ತಿರುವ ಅವಧಿಯಲ್ಲಿ ಅಮಾನತಿನಲ್ಲಿಡಬೇಕು ಎಂದು ಯುಪಿಎ-2 ಸರಕಾರದ ಕೃಷಿ ಇಲಾಖೆಯ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ ಎಂದು ವರದಿಯಾಗಿದೆ. ಈ ರೇಗಾದ ಜಾರಿಯಿಂದಾಗಿ ಬೇಸಾಯ ಚಟುವಟಿಕೆಗಳಿಗೆ ಕೂಲಿಕಾರರ ಕೊರತೆಯಾಗಿದೆ ಎಂಬುದು ಇದಕ್ಕೆ ಕೊಡುತ್ತಿರುವ ಕಾರಣ ಅಥವ ನೆಪ. ರೇಗಾದ ಜಾರಿ ಕೂಲಿಕಾರರ ವಲಸೆಯನ್ನು ತಡೆದಿದೆ ಎಂಬುದು ಸ್ವತಃ ಯುಪಿಎ-2 ಸರಕಾರದ ಕೃಷಿ ಇಲಾಖೆಯ ಅಳಲು!

ಇದೆಂತಹಾ ಕ್ರೂರ ನಿಲುವು! ಹಣದುಬ್ಬರ 9.4%, ಆಹಾರ ವಸ್ತುಗಳ ಬೆಲೆ ಕಳೆದ ವರ್ಷಕ್ಕಿಂತ ಇಮ್ಮಡಿಯಾಗಿರುವಾಗ, ಕಳೆದ ಒಂದು ದಶಕದಲ್ಲಿ ವರ್ಷದಲ್ಲಿ ಕೂಲಿ ಸಿಗುವ ದಿನಗಳಲ್ಲಿ ಕೂಡ 10 ದಿನಗಳ ಕಡಿತ ವಾಗಿರುವಾಗ ರೇಗಾದಡಿ ಸರಕಾರವೇ ಕಾನೂನು ಪ್ರಕಾರ ಭರವಸೆ ನೀಡಿರುವ ತುಸು ಹೆಚ್ಚಿನ ಕೂಲಿ ಕೂಡ ಕೊಟ್ಟಂತರ ಕೃಷಿ ಕೂಲಿಕಾರರಿಗೆ ಯಾವುದೇ ಪರಿಹಾರ ನೀಡದಂತಹ ಸ್ಥಿತಿಯಿದೆ ಎಂದು ಈ ಸೂಚನೆಯನ್ನು ಪ್ರತಿಭಟಿಸಿರುವ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಯುಪಿಎ-2 ಸರಕಾರವನ್ನು ನೆನಪಿಸಿದೆ. ಕೃಷಿ ಕೂಲಿಕಾರರ ಪರಿಸ್ಥಿತಿ ರೈತರ ಪರಿಸ್ಥಿತಿಗಿಂತಲೂ ಹೀನವಾಗಿದೆ.



ಇನ್ನು ರೇಗಾದಿಂದಾಗಿ ಕೂಲಿಕಾರರ ವಲಸೆಗೆ ತಡೆ ಬಿದ್ದಿದೆ ಎಂಬ ಅಳಲಂತೂ ನಮ್ಮ ಆಳರಸರ ಅಮಾನವೀಯತೆಗೆ ಹಿಡಿದ ಕನ್ನಡಿ. ಕಳೆದ ಒಂದು ದಶಕದಲ್ಲಿ 2763 ರೈಲು ಅಪಘಾತಗಳಲ್ಲಿ 2651 ಜನ ಸತ್ತಿದ್ದಾರೆ, 5464 ಮಂದಿ ಗಾಯಗೊಂಡಿದ್ದಾರೆ. ರಸ್ತೆ ಅಪಘಾತಗಳಲ್ಲಿ 1 ಲಕ್ಷಕ್ಕೂ ಹೆಚ್ಚು ಮಂದಿ ಸತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು ಉದ್ಯೋಗ ಅರಸಿ ವಲಸೆ ಹೊರಟಿದ್ದ ಕೂಲಿಕಾರರು. ಕೂಲಿಕಾರರು ತಮ್ಮ ಜೀವಗಳಿಗೆ ಇಷ್ಟೊಂದು ಬೆದರಿಕೆ ಇಟ್ಟುಕೊಂಡೂ ವಲಸೆ ಹೋಗಬೇಕು ಎಂದು ಬಯಸುವ ಆಳರಸರ ಬಗ್ಗೆ ಏನನ್ನಬೇಕು?

ಕೃಷಿಯಲ್ಲಿನ ಬಿಕ್ಕಟ್ಟು ಶ್ರಮಶಕ್ತಿಯ ಅಭಾವದಿಂದಲ್ಲ. ಹೆಚ್ಚೆಚ್ಚು ಕೃಷಿ ಚಟುಚಟಿಕೆಗಳ ಯಾಂತ್ರೀಕರಣಕ್ಕೆ ಪ್ರೋತ್ಸಾಹದ ವಾತಾವರಣದಲ್ಲಿ ಡೀಸೆಲ್ ಬೆಲೆಯೇರಿಕೆ, ಜತೆಗೆ ರಸಗೊಬ್ಬರದ ಬೆಲೆಯೇರಿಕೆ, ವಿದ್ಯುತ್ ದರ ಏರಿಕೆ ಕೃಷಿ ಚಟುವಟಿಕೆಗಳಿಗೆ ಅಡ್ಡಿ ತರುತ್ತಿವೆ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಹೇಳಿದೆ. 1990ರ ದಶಕದಲ್ಲಿ ಭೂಹೀನ ಕೃಷಿಕರ ಪ್ರಮಾಣ 22% ಇತ್ತು. ಅದೀಗ 41% ಆಗಿದೆ. ಈಗ ಅವರಿಗೆ ರೇಗಾದಡಿಯೂ ಕೆಲಸ ನಿರಾಕರಿಸಿದರೆ ಅವರು ಬರಿ ಹೊಟ್ಟೆಯಲ್ಲಿರಬೇಕು, ಭಿಕ್ಷಾಪಾತ್ರೆ ಹಿಡಿಯಬೇಕು ಇಲ್ಲವೇ ಕ್ರಿಮಿನಲ್‌ಗಳಾಗಬೇಕು. ಯುಪಿಎ-2 ಸರಕಾರದ ಕೃಷಿ ಇಲಾಖೆ ಇದಕ್ಕೇ ಕರೆ ನೀಡಿರುವಂತಿದೆ ಎಂದು ಆಕ್ರೋಶ ವ್ಯಕ್ತಪಡಿಸಿರುವ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಇಂತಹ ಯಾವುದೇ ಕ್ರಮವನ್ನು ಸಹಿಸುವುದಿಲ್ಲ ಎಂದು ಎಚ್ಚರಿಸಿದೆ. ರೇಗಾ ಅವನತಿ ಹೊಂದುತ್ತಿರುವ ಗ್ರಾಮೀಣ ಆರ್ಥಿಕಕ್ಕೆ ತುಸುವಾದರೂ ಜೀವ ತುಂಬಿದೆ, ರೈತರು ಬದುಕಿರಲು, ಉತ್ಪಾದನೆಯಲ್ಲಿ ತೊಡಗಿರಲು ಅವಕಾಶ ಮಾಡಿಕೊಟ್ಟಿದೆ. ಇದರ ಸರಿಯಾದ ಜಾರಿಗೆ ಮತ್ತು ಅದನ್ನು ಯಾವುದೇ ರೀತಿಯಲ್ಲಿ ಮೊಟಕು ಮಾಡುವುದರ ವಿರುದ್ಧ ಸಮರಧೀರ ಹೋರಾಟ ನಡೆಸಲಾಗುವುದು ಎಂದು ಅದು ಘೋಷಿಸಿದೆ.

ಲೋಕಾಯುಕ್ತರ ವರದಿ ಸೋರಿಕೆ! ......

ಪುಟ 3 ರಿಂದ

ಎಂಬ ಮಾತುಗಳನ್ನಾಡುತ್ತಲೇ ನ್ಯಾ.ಹೆಗಡೆಯವರು ಗದ್ಗತಿತರಾಗಿ ಕಣ್ಣೀರು ಸುರಿಸಿದ್ದು, ಇಂತಹ ವರದಿಯೊಂದು ಬರಲಿದೆಯೆಂದು ತಿಳಿದೇ, ಸರ್ಕಾರ ಲೋಕಾಯುಕ್ತವನ್ನು ದುರ್ಬಲಗೊಳಿಸುವ ಹಲವು ಪ್ರಯತ್ನಗಳನ್ನು ಹಿಂದಿನಿಂದಲೇ ಮಾಡುತ್ತಾ ಬಂದಿದೆ. ಬಿಜೆಪಿ ಮುಖ್ಯಮಂತ್ರಿ ಸರ್ಕಾರ, ನಾಯಕರು ಒಬ್ಬರಾದ ಮೇಲೊಬ್ಬರಂತೆ ಲೋಕಾಯುಕ್ತ ದಂತಹ ಸಂವಿಧಾನಾತ್ಮಕ ಸಂಸ್ಥೆಯ ಮೇಲೆ ಎಲ್ಲಾ ಬಗೆಯ ದಾಳಿಗಳನ್ನು ನಡೆಸಿ ಅನಾಗರೀಕತೆಯನ್ನು ತೋರಿಸುತ್ತಲೇ ಬಂದಿದ್ದಾರೆ.

ಲೋಕಾಯುಕ್ತರು 'ಸಂಧಾನಕ್ಕೆ' ಬರುವಂತೆ ಮಾಡಲು ಮಾಜಿ ಕೇಂದ್ರ ಮಂತ್ರಿ ಧನಂಜಯಕುಮಾರ್, ಹಾಲಿ ರಾಜ್ಯ ಸಚಿವ ವಿ.ಎಸ್.ಆಚಾರ್ಯ, ಮೂರನೇ ಹಣಕಾಸು ಆಯೋಗದ ಅಧ್ಯಕ್ಷ ಕೊಡ್ಗಿಯವರು ಬಂದಿದ್ದು, ಮುಖ್ಯಮಂತ್ರಿ ಯಡಿಯೂರಪ್ಪನವರ ಹೆಸರನ್ನು ವರದಿಯಿಂದ ಕೈ ಬಿಡುವಂತೆ ಒತ್ತಡ ಹೇರಿದಂತಹ ಸ್ಫೋಟಕ ಅಂಶಗಳನ್ನು ಲೋಕಾಯುಕ್ತರೇ ಬಹಿರಂಗ ಪಡಿಸಿದ್ದಾರೆ! (ಹಿಂದೆ ಕುಮಾರಸ್ವಾಮಿಗೂ ಇಂತಹದ್ದೇ ಆಮಿಷ ಬಿಜೆಪಿ ಖಜಾಂಚಿ ಲೇಹರ್‌ಸಿಂಗ್ ಒಡ್ಡಿದ್ದು, ಭಾರೀ ವಿವಾದವಾದದ್ದು, ಇನ್ನೂ ನೆನಪಿನಲ್ಲಿ ಹಸಿರಾಗಿದೆ) ಈ ನಡುವೆ ತನಿಖೆ- ಮತ್ತು ಕ್ರಮಗಳು ಪರಿಣಾಮ ತಗ್ಗಿಸುವ ಕುತಂತ್ರದ ಭಾಗವಾಗಿ ದಕ್ಷ ಅಧಿಕಾರಿಯಾಗಿದ್ದ ರೂಪ್‌ಕುಮಾರ್ ದತ್ತಾರವರನ್ನು 'ಕಾನೂನು-ಸುವ್ಯವಸ್ಥೆ' ವಿಭಾಗಕ್ಕೆ ವರ್ಗಾವಣೆ ಮಾಡಿದ್ದು ಆಯ್ತು. ನ್ಯಾ.ಸಂತೋಷಹೆಗಡೆ ರಾಜೀನಾಮೆ ಕೊಟ್ಟು ಹೋಗುವಂತೆ ಪ್ರಯತ್ನಗಳು ಆದವು. ಈಗ ಹೇಗೋ ಈ ತಿಂಗಳು ನಿವೃತ್ತಿಯಾಗಲಿದ್ದು, ಮುಂಬರಲಿರುವ ಲೋಕಾಯುಕ್ತರು ಹೇಗಿರಬೇಕು, ಯಾರಿರಬೇಕೆಂದು ಯೋಜನೆಯೂ ಆಗಿದೆ. ಇದರ ಜೊತೆಗೆ ಕಾಂಗ್ರೆಸ್ ಪಕ್ಷ ರಾಷ್ಟ್ರೀಯ ಪ್ರಧಾನಕಾರ್ಯದರ್ಶಿ ಬಿ.ಕೆ.ಹರಿಪ್ರಸಾದ್ ಲೋಕಾಯುಕ್ತರ ಮೇಲೆ ಎಲ್ಲಾ ಸೌಜನ್ಯ ಮೀರಿ ನಿರಂತರ ದಾಳಿ ಮಾಡಿದ್ದು ಉದ್ಧಟನತನ ತೋರಿಸಿದ್ದಾರೆ. ಅಂದರೆ ಅವರ ಪಕ್ಷದ ನಾಯಕ ಮಣಿಗಳು, ಮುಖ್ಯಮಂತ್ರಿಗಳು ಈ ಅಕ್ರಮಗಳಲ್ಲಿ ತೊಡಗಿರುವ ವರದಿ ಬರುವ ಊಹೆಯಿಂದಲೇ ಮಾಡಿದ್ದಾರೆ. ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಇಡೀ ಕಾಂಗ್ರೆಸ್ ಪಕ್ಷ-ಅದರ ಸರ್ಕಾರಗಳು ಮುಳುಗಿರುವಾಗ ಇನ್ನೇನು ಮಾಡಲಾದೀತು?

ಬಹುಮುಖ್ಯ ಪ್ರಶ್ನೆ

ಈ ಬಹಿರಂಗಗೊಳ್ಳುವಿಕೆ ಸಮಗ್ರ ವರದಿಯ ಮೂಲ ಮುಖ್ಯಾಂಶಗಳನ್ನು ದುರ್ಬಲ ಗೊಳಿಸಬೇಕಿಲ್ಲ. 9000 ಪುಟಗಳ ವರದಿ ಇದಕ್ಕಿಂತಲೂ ಹತ್ತಾರು ಪಟ್ಟು ಹಗರಣಗಳ ಸರಮಾಲೆಯನ್ನೇ ತೆರದಿಡಲಿದೆ. ಈಗ ಆಗಬೇಕಾದದ್ದು ಅದನ್ನು ಆಧರಿಸಿ ಕ್ರಮ ಜರುಗಿಸುವುದು. ಅಂದರೆ ಈ ಕೂಡಲೇ ಮುಖ್ಯಮಂತ್ರಿ, ಸಂಪುಟವೇ ರಾಜೀನಾಮೆ ಕೊಡುವುದು. ಅಂದಾಗ ಮಾತ್ರವೇ ವಿಚಾರಣೆ ಕ್ರಮಗಳು ನಡೆಯಲು ಸಾಧ್ಯವಾದೀತು. ಅದರ ಜೊತೆಗೆ ಇದರಲ್ಲಿ ಭಾಗಿಯಾಗಿರುವ ಯಾರೇ ಆಗಲಿ, ಯಾವ ಪಕ್ಷಕ್ಕೆ ಸೇರಿರಲಿ ತನಿಖೆ, ಕ್ರಮ ಆಗಲೇಬೇಕು.

ಇಂತಹ ಅತ್ಯಂತ ಮಹತ್ವದ ವರದಿ ನೀಡುವಾಗ, ಉಂಟಾಗಬಹುದಾದ ಕೋಲಾಹಲ, ಈ ಗಂಭೀರ ರಾಜಕೀಯ ಬೆಳವಣಿಗೆಗಳು ನಡೆಯುವುದೆಂದು ಗೊತ್ತಿದ್ದು ಮುಖ್ಯಮಂತ್ರಿ ಯಡಿಯೂರಪ್ಪನವರು ಸಕುಟುಂಬ ಪರಿವಾರ ಸಮೇತರಾಗಿ ಮಾರಿಷಸ್ ಮುಂತಾದ ದೇಶಗಳಿಗೆ ಪ್ರವಾಸಕ್ಕೆ ಹೊರಟಿರುವುದು ಹೊಣೆಗೇಡಿತನವಾಗಿದೆ. ಯಡಿಯೂರಪ್ಪನವರಿಗೆ ಸತ್ಯದೊಂದಿಗೆ ಮುಖಾಮುಖಿಯಾಗುವ ಸಂವೇದನೆ, ನೈತಿಕತೆಯನ್ನೇ ಕಳೆದುಕೊಂಡಿದ್ದಾರೆ. ಏನಿದ್ದರೂ



ರಾಜ್ಯವನ್ನು ಲೂಟಿ ಮಾಡುವುದು ಮಾತ್ರವೇ ಅಧಿಕಾರದ ಉದ್ದೇಶ. ಮುಖ್ಯಮಂತ್ರಿಗಳು ಈಗ ಮಾಡಿರುವುದು ಅಂತಹ ಭಂಡತನದ ಪಲಾಯನವನ್ನೇ, ಆಣೆ ಪ್ರಮಾಣದ ಪ್ರಸಂಗದಲ್ಲಿ, ದೇವೇಗೌಡರ ಕುಟುಂಬದ ಆಸ್ತಿ ಗಳಿಕೆಯ ಆರೋಪದಲ್ಲಿ ಮಾಡಿದ್ದು ಅದನ್ನೇ, ಈಗಲೂ ಪಲಾಯನವಾದವೇ, ನಂತರ ಭಂಡ ಸಮರ್ಥನೆ.

ವರದಿಯ ಅಂಶಗಳನ್ನು ಹಿಡಿದು ಬಿಜೆಪಿಯೊಳಗಿನ ಭಿನ್ನಮತೀಯ ಚಟುವಟಿಕೆ ಗಳು ಬಹಿರಂಗದಲ್ಲಿ ತೀವ್ರಗೊಳ್ಳಬಹುದು. ಅದೇ ಸಂದರ್ಭದಲ್ಲಿ ಬಿಜೆಪಿಯಿಂದ ಇನ್ನೊಬ್ಬ ಮುಖ್ಯಮಂತ್ರಿಯನ್ನು ನೇಮಿಸಲೂಬಹುದು. ಆದರೆ ಅದರರ್ಥ ಭ್ರಷ್ಟಾಚಾರ, ಹಗರಣಗಳು ನಿಲ್ಲುತ್ತವೆ ಎಂದರ್ಥವಲ್ಲ. ಇದು ಮುಖ ಉಳಿಸಿಕೊಳ್ಳುವ, ಜನರಲ್ಲಿ ಭ್ರಮೆ ಸೃಷ್ಟಿಸಿ ಅದೇ ಲೂಟಿಯನ್ನು ಮುಂದುವರಿಸುವ ತಂತ್ರ ಮಾತ್ರ ಆದ್ದರಿಂದಲೇ ಈ ಅಕ್ರಮ ಸರ್ಕಾರ ರಾಜೀನಾಮೆ ನೀಡಿ ತೊಲಗ ಬೇಕು. ಹೊಸ ಜನಾದೇಶದಿಂದ ಸರ್ಕಾರ ರಚನೆಯಾಗಬೇಕು. ●

ಕುಂಡಲಿನಿ ಮಂತ್ರ ಮತ್ತು ಡ್ಯಾನ್ಸ್

ಯಣ್ಣ, ಟೀವಿಲಿ ಒಂದ್ ಡ್ಯಾನ್ಸ್ ಬಂದಿತ್ತು ನೋಡ್ದ?

ಅಯ್ಯೋ ದಿನಾ ಟೀವಿಲಿ ಬರೀ ಡ್ಯಾನ್ಸೇ ಬತ್ತಾ ಇರ್ತದಪ್ಪ, ಅದ್ಯೆಲ್ಲಾನೂ ನೋಡ್ಕಂದ ಕೂತ್ಕಂಡ್ರೆ ನಾವು ಉದ್ದಾರಾಗಕಾದತೆ? ಡ್ಯಾನ್ಸ್ ಮಾಡರ್ಗೆ ದುಡ್ ಕೊಡ್ತರೆ. ನಮಿಗೇನ ಬಂದತು?

ಅದ್ ಸರಿ ಕಣಣ್ಣ, ಅದ್ರೆ ಇದೇ ಒಂತರ ಡ್ಯಾನ್ಸು, ಅವುನ್ಯಾರೋ ಸ್ವಾಮಿ ಕುರ್ಚಿ ಮ್ಯಾ ಕೂತ್ಕಂಡು ಜನವ ನ್ಯಲುದ್ ಮ್ಯಾಲೆ ಕುಣುಸ್ತಾ ಇದ್ದ, ಅದ್ರ ಬಗ್ಗೆ ಏಳ್ತಾ ಇದ್ದೀನಿ.

ಓ.. ಅದು ನಿತ್ಯಾನಂದ ಸ್ವಾಮೀಜಿ ಕುಂಡಿಲಿನಿ ಪೂಜೆ ಅಂತ ಮಾಡಿ, ಅದೇನೋ ಮ ಆಕಿದ್ನಂತೆ, ಅದ ಕೇಳ್ತಿದ್ದಂಗೆ ಜನ ಕೂತಿದ್ದಂಗೆ ನ್ಯಗ್ಯಕೆ ಸುರು ಮಾಡಿದ್ರಂತೆ. ಸ್ವಾಮೀ ಟೀವಿನವ್ರ ಕರ್ದು ನೋಡಿ ನನ್ ಪವರ್ರು ಯಂಗದೆ ಅಂದ್ನಂತೆ.

ನೀನೇನೆ ಏಳು, ಅದ ಮರ್ಯಾದಿ ಇರರು ನೋಡಕ್ಕಾಯ್ತಾ ಇರ್ಲಿಲ್ಲ. ನಂಗೆ ಅಷ್ಟೊಂದ ನಾಚ್ಕೆ ಆಯ್ತು.

ನಿನಿಗೆ ನಾಚ್ಕೆ ಆಯ್ತು, ಅಲ್ಲಿ ಎಂಗಸ್ರು-ಗಂಡುಸ್ರು ಯಲ್ಲ ಸೇರ್ಕಂಡು ರಾಜಾರಸ್ವಾಗಿ ಕು ಮೈ ಕುಣುಸ್ತಿದ್ರಪ್ಪ. ಇದ್ಕೇನೇಳದು?

ಕ್ಯಾತೆ

ಈ. ಬಸವರಾಜು
ಮಲ್ಲೇನಹಳ್ಳಿ

ಅವ್ರು ಮನೆ ಜನ ನೋಡಿ ಏನಾರು ಅಂದರು, ಅನ್ನದ್ನೂ ಕಾ ಅಂಗಾಡ್ತಿದ್ರಪ್ಪ, ಯಾಕೋ ಕಾಲ ಕೆಟ್ಟೋಯ್ತು ಬುಡು.

ಯಣ್ಣ ನಂಗೊಂದು ಅನುಮಾನ!

ಅದೇನೇಳಣ್ಣ.

ಅವ್ರು ಹಿಂದಿನ್ ಜನುಮ್ದಲ್ಲಿ ಕಪ್ಪೆ-ಗಿಪ್ಪೆ ಆಗಿ ಉಟ್ಟದ್ರೇನೋ ಅಂತವ.

ಯಾಕೆ?

ಅವ್ರು ಕುಣಿತಿದ್ದ ನೋಡಿದ್ರೆ ಸೇಮ್ ಕಪ್ಪೆಯಂಗೆ ಕುಣಿತಿದ್ರು, ಅದ್ಕೆ ಅನುಮಾನ ಬಂತು.

ಅವ್ರು ಕಪ್ಪೆ ಅಂಗೆ ಕುಣಿತಿದ್ರು, ಆ ಸ್ವಾಮಿ ಕಿಸ್ಣುನ್ ತರ ಕೂತ್ಕಂಡು ನಗ್ತಾ ಇದ್ನಪ್ಪ. ಅವ್ನೂ ಮ ಸ್ವಾಮಿ ಅನ್ನದಾದ್ರೆ ಉಳಿದ್ ಸ್ವಾಮಿಗಳಿಗೆ ಬ್ಯಲೆ ಇಲ್ದಂಗಾಯ್ತದಪ್ಪ. ಆದ್ರೆ ಕುಣಿತಿದ್ರಲ, ಅ ನೋಡಿದ್ರೆ ತಲೆ ಕೆಟ್ಟೋರ್ ತರ ಕಾಣ್ತಿದ್ವಪ್ಪ. ಉಚ್ಚಾಸ್ಪತ್ರೆಯಿಂದ ಇಡ್ಕಂಬಂದಿದ್ರೇನೊ ಅನುಸ್ತಿ ಇದು ಎಲ್ಲಾದ್ರು ನಡ್ಯದುಂಟೆ?

ಏನಿಲ್ಲ ಕಣಣ್ಣ. ಅವ್ರು ನಮ್ಮಂಗೆಯ. ನಿತ್ಯಾನಂದ ಟೀವಿನವ್ರ ಕರ್ಸಿ ಓಪನ್ ಆಗಿ ಡ್ಯಾ ಮಾಡಿಸ್ದ. ಕ್ಯಲುವ್ರು ಬಾಗ್ಲಾಕ್ಯಂಡು ಡ್ಯಾನ್ಸ್ ಮಾಡುಸ್ತೌದು. ಇನ್ನೂ ಕ್ಯಲುವ್ರು ವಳ್ಳೆ ಸ್ವಾಮಿಗಳ ಅವ್ರೆ ಬುಡು.

ಯಾರ್ನ ವಳ್ಳೇರು ಅನ್ನದು ಕಾಣಪ್ಪ.

ಆ ಗದಗಿನ್ ಕಡೆ ವಬ್ ಸ್ವಾಮೀಜಿ ಪ್ಯಾಟ್ರಿ ಮಾಡಕೆ ಬ್ಯಳೆ ಬ್ಯಳ್ಯ ಜಮೀನ್ ಕೊಡಕಾಗದ ಅಂತವ ರೈತ್ರು ಜ್ವತೆ ಸೇರ್ಕಂಡು ಓರಾಟ ಮಾಡಿದ್ರಪ್ಪ. ಅವ್ರೆಲ್ಲ ವಳ್ಳೇರೆ ಅಲ್ವೆ?

ವಳ್ಳೇರು ಇದ್ದೇ ಇರ್ತರೆ, ಯಲ್ರೂ ಕುಂಡಲಿನಿ ಡ್ಯಾನ್ಸ್ ಮಾಡ್ತಾ ಇದ್ರೆ ಆದತೆ?

ಆದ್ರೆ ಗದಗ್ ಸ್ವಾಮಿಗಳು ಓರಾಟ ಮಾಡಿ ಸರ್ಕಾರದವ್ರು ರೈತ್ರು ಬೂಮಿಯ ತಗಳದ ಅಂದ್ ಮ್ಯಾಲೆ ಅದ್ಯಾರೊ ಕ್ಯಲುವ್ರು ನಾವು ಬೂಮಿ ಕೊಡ್ತಿವಿ, ತಗಳ್ಳೇಬೆಕು ಅಂತವ ಸ್ವಾಮಿಗ ಮಟುದ್ ಮುಂದೆ ಓರಾಟ ಮಾಡಿದ್ರಂತಲ?

ಏ.. ಇದ ಆಡ ಮಗ ಬೇಕಾದ್ರೂ ಏಳ್ತದಪ್ಪ. ಅವ್ರಿಗ್ಯಲ್ಲ ಯಡೂರಪ್ಪುನ್ ಕಡೇರು ದು ಕೊಟ್ಟು ಇಂಗನ್ನಿ ಅಂತ ಏಳಿ ಕಳಿಸಿರ್ಬೌದು, ಇಲ್ಲ ಅಂದ್ರೆ ಜಮೀನ್ ಗೆಯ್ನಾರದವಿರಬೇಕ ಈಗ ಜಮೀನ್ ಕೊಡ್ತವೆ, ಬಂದ್ ದುಡ್ಡ ಕುಡ್ದು-ತಿಂದು ಹಾಳ್ ಮಾಡ್ತವೆ ಅಮ್ಯಾಲೆ ಹರ ಸಿವಪ್ಪ ಕಾಯೋ ತಂದೆ ಅಂತವ ಬಿಕ್ಷ ಬೇಡ್ತವೆ ಅಷ್ಟೆಯ

ಅದಿರ್ಲಿ, ಕುಂಡಲಿನಿ ಡ್ಯಾನ್ಸ್ ಪೋಗ್ರಾಂಗೆ ಪ್ರಮೋದ್ ಮುತಾಲಿಕ್ ಓಗಿಲ್ವಲ ಯಾಕೆ?

ಯಾಕೆ? ಅವ್ನಿಗೂ ಇದ್ಕೂ ಏನ್ ಸಮಂದ?

ಅವ್ನು ನಿತ್ಯಾನಂದಸ್ವಾಮಿಗಳ ಬಕ್ತ. ಅವ್ನಿಗೆ ತ್ಸಂದ್ರೆ ಆದಾಗ ಮುತಾಲಿಕ್ ಓಗಿ ಸ್ವಾಮಿ, ನೀ ಯದ್ರಿಕ ಬ್ಯಾಡಿ ಅಂತ ಏಳಿ ಬಂದಿದ್ದ. ಅದ್ಕೆ ಓಗಿರ್ಬೌದು ಅಂದ್ಕಂಡೆ.

ಅವ್ನು ಓಗಿದ್ರೆ ಇನ್ನೂ ನೋಡಕೆ ಚನ್ನಾಗಿತ್ತು. ಯಾಕೊ ಊರಲ್ಲಿ ಇತ್ತಿಲ್ವೇನೊ.

ಭಾರತ-ಅಮೆರಿಕಾ ಜಂಟಿ ಹೇಳಿಕೆಯ ಸಾರ

ಪುಟ 7 ರಿಂದ

ದುರದೃಷ್ಟದಿಂದ ಯಾವುದಾದರೂ ಪರಮಾಣು ಅಪಘಾತ ಸಂಭವಿಸಿದರೆ ಅದರ ಬಾಧ್ಯತೆ, ಹೊಣೆಗಳು ಪರಮಾಣು ಪೂರೈಕೆದಾರರ ಮೇಲೆ ಬರದಂತಹ ತಿದ್ದುಪಡಿ ಅದಕ್ಕೆ ಬೇಕಾಗಿದೆ. ಈ ವಿಷಯದಲ್ಲಿ ಭಾರತ-ಅಮೆರಿಕಾ ಪರಮಾಣು ವ್ಯವಹಾರದಲ್ಲಿ ಹಿನ್ನೆಲೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಆಗಿನ ಅಣು ಶಕ್ತಿ ಆಯೋಗದ ಆಗಿನ ಅಧ್ಯಕ್ಷ ಅನಿಲ್ ಕಾಕೋಡ್ಕರ್ ಅವರ ಏನು ಹೇಳುತ್ತಾರೆ ಎಂಬುದನ್ನು ಗಮನಿಸುವುದು ಮಹತ್ವ ಪಡೆಯುತ್ತದೆ. ಅಮೆರಿಕಾ 2008ರಲ್ಲಿ ಪರಮಾಣು ಪೂರೈಕೆದಾರರ ಗುಂಪು (ಎನ್‌ಎಸ್‌ಜಿ) 'ಅಣುಸಮೃದ್ಧಿ ಮತ್ತು ಮರುಸಂಸ್ಕರಣ'ದ(ಇಎನ್‌ಆರ್) ತಂತ್ರಜ್ಞಾನಗಳ ವರ್ಗಾವಣೆಗೆ ಅನುಮತಿ ಕೊಡುವ 'ಸ್ವಚ್ಛ ವಿನಾಯ್ತಿ' ಕೊಡುತ್ತದೆ ಎಂಬ ಭರವಸೆಯನ್ನು ನೀಡಿದ್ದರೂ, ಈಗ ಮಾತಿಗೆ ತಪ್ಪಿ ಇಂತಹ ವರ್ಗಾವಣೆಯನ್ನು ಪ್ರಸರಣ-ನಿಷೇಧ ಸಂಧಿ(ಎನ್‌ಪಿಟಿ)ಗೆ ಸಹಿ ಹಾಕಿರುವ ದೇಶಗಳಿಗೆ ಮಾತ್ರ ಮಾಡಲು ಅನುಮತಿಯಿದೆ ಎಂದು ಹೇಳುತ್ತಿದೆ. ಈ ಎನ್‌ಪಿಟಿ ಅತ್ಯಂತ ಪಕ್ಷಪಾತಪೂರ್ಣವಾಗಿರುವುದರಿಂದ ಅದಕ್ಕೆ ಸಹಿ ಹಾಕಲು ಭಾರತ ನಿರಾಕರಿ ಸುತ್ತಿದೆ. ಕಾಕೋಡ್ಕರ್ ಅಮೆರಿಕಾದ ಈ ನಿಲುವನ್ನು 'ವಿಶ್ವಾಸ ಘಾತ' ಎಂದಿದ್ದಾರೆ. ಎನ್‌ಪಿಟಿಗೆ ಭಾರತ ಸಹಿ ಹಾಕಬೇಕೆಂಬ ಒತ್ತಡದ ಬಗ್ಗೆ ಅವರದ್ದು ಸ್ಪಷ್ಟ ನಿಲುವು- 'ನಾವು ನಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಬೇಕು' ಎಂಬುದು. ಭಾರತದ ಅಣುಶಕ್ತಿ ಆಯೋಗದ ಇನ್ನೊಬ್ಬ ಮಾಜಿ ಅಧ್ಯಕ್ಷರಾದ ಪಿ.ಕೆ.ಅಯ್ಯಂಗಾರ್, ಹೊಸ ಶರತ್ತುಗಳು "ಭಾರತ ಎನ್‌ಪಿಟಿಗೆ ಸಹಿ ಹಾಕುವಂತೆ ಬಲವಂತ ಮಾಡುವ ಒಂದು ಪರೋಕ್ಷ ವಿಧಾನ. ಆರಂಭದಿಂದಲೇ ಭಾರತ-ಅಮೆರಿಕಾ ವ್ಯವಹಾರ ಆರಂಭವೇ ಕಾಣದಂತದ್ದು ಎಂದು ನನಗನ್ನಿಸಿತ್ತು, ಅದು ನಿಜವಾಗುತ್ತಿದೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಭಾರತ-ಅಮೆರಿಕಾ ಆಯಕಟ್ಟಿನ ಸಂವಾದ ಪ್ರತಿವರ್ಷ ನಡೆಯುತ್ತದೆ, ಮುಂದಿನದ್ದನ್ನು ವಾಶಿಂಗ್ಟನ್ ಡಿಸಿಯಲ್ಲಿ 2012ರಲ್ಲಿ ನಡೆಸುವ ಯೋಜನೆಯಿದೆ ಎಂದು ಪ್ರಕಟಿಸಲಾಗಿದೆ. ಈ ಸಂವಾದ ಯಾವ ದಿಕ್ಕಿನಲ್ಲಿ ಸಾಗಿದೆ ಎಂಬುದನ್ನು ಗಮನಿಸಿದರೆ ಇದು ಭಾರತದ ಮಟ್ಟಿಗೆ ಅಮೆರಿಕನ್ ಸಾಮ್ರಾಜ್ಯಶಾಹಿಯ ಕಾರ್ಯ ತಂತ್ರಗಳಲ್ಲಿ ಜಾಗತಿಕ ಭೌಗೋಳಿಕ-ರಾಜಕೀಯ ಅಡಿಯಾಳು ಮಿತ್ರನ ಪಾತ್ರವನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ ಎಂಬುದು ಸ್ಪಷ್ಟ. ಭಾರತದ ಶಕ್ತಿ ಅಡಗಿದ್ದುದು, ಈಗಲೂ ಅದು ಆಧರಿಸಿ ರುವುದು ಅಂತರ್ರಾಷ್ಟ್ರೀಯ ವ್ಯವಹಾರಗಳಲ್ಲಿ ಅಭಿವೃದ್ಧಿಶೀಲ ಜಗತ್ತಿನ ಕೋಟ್ಯಂತರ ನಿವಾಸಿಗಳ ಆಕಾಂಕ್ಷೆಗಳನ್ನು ಬಿಂಬಿಸುವ ಅದರ ಸ್ವತಂತ್ರ ಪಾತ್ರವನ್ನು. ಇದು, ಭಾರತ ಎಲ್ಲ ದೇಶಗಳೊಂದಿಗೆ 'ಪಂಚಶೀಲ'ದ ನೀತಿಗಳನ್ನು ಆಧರಿಸಿ ತನ್ನ ಸಂಬಂಧಗಳನ್ನು ಉತ್ತಮ ಪಡಿಸಲು ಪ್ರಯತ್ನಿ ಸುತ್ತಲೇ ಒಂದು ಸ್ವತಂತ್ರ ವಿದೇಶಾಂಗ ನೀತಿಯನ್ನು ಯಾವುದೇ ರಾಜಿಗಿಳಿಯದೆ ಉಳಿಸಿಕೊಳ್ಳುವುದರಿಂದ ಮಾತ್ರವೇ ಸಾಧ್ಯ. ಅದನ್ನು ಅಮೆರಿಕಾದ ಜಾಗತಿಕ ಕಾರ್ಯತಂತ್ರದ ಭಾಗೀದಾರ ನಾಗಿ ಮಾಡಿ ಭಾರತ ರಾಷ್ಟ್ರಗಳ ಕೂಟದಲ್ಲಿ ನ್ಯಾಯವಾಗಿ ತಾನು ವಹಿಸಬೇಕಾದ ಪಾತ್ರ ಮತ್ತು ಅಧಿಕಾರವನ್ನು ವಹಿಸದಂತೆ ಮಾಡುವ ಪ್ರಯತ್ನಗಳನ್ನು ಸಂಪೂರ್ಣ ವಾಗಿ ಪ್ರತಿರೋಧಿಸಬೇಕಾಗಿದೆ.

●

ಯುಪಿಎ ದರ್ಬಾರ್ ....

ಪುಟ 13 ರಿಂದ

ಬೆಂಬಲವನ್ನು ಹಿಂತೆಗೆದುಕೊಂಡಾಗ, ಸರಕಾರವನ್ನು ಉಳಿಸಲು ಪ್ರತಿಪಕ್ಷಗಳ ಸಂಸದರಿಗೆ ಲಂಚ ಕೊಡಲಾಗಿತ್ತು ಎಂಬ ಆಪಾದನೆಯ ಕುರಿತಾದ ಮೊಕದ್ದಮೆ ಇದು. ಇನ್ನೆರಡು ದಿನಗಳ ನಂತರ ಸುಹೈಲ್ ಹಿಂದುಸ್ತಾನಿ ಎಂಬಾತನಿಗೆ ಸಮನ್ಸ್ ಹೋಗಿದ್ದು, ಆತ ತನಗೆ ಅಮರ್ ಸಿಂಗ್ ರಿಂದ ಮತ್ತು ಕಾಂಗ್ರೆಸ್ ಅಧ್ಯಕ್ಷರ ರಾಜಕೀಯ ಕಾರ್ಯದರ್ಶಿ ಅಹ್ಮದ್ ಪಟೇಲ್ ರಿಂದ ಕರೆಗಳು ಬಂದಿದ್ದವು, ಪ್ರಧಾನಂತ್ರಿಗಳ ನಿಕಟವರ್ತಿಗಳಿಂದ ಮತ್ತು ಕಾಂಗ್ರೆಸ್ ಅಧ್ಯಕ್ಷರ ನಿವಾಸದಿಂದಲೂ ಕರೆಗಳು ಬಂದಿದ್ದವು ಎಂದಿದ್ದಾನೆ. ಈತ ಭಾರತೀಯ ಜನತಾ ಯುವ ಮೋರ್ಚಾದ ಒಬ್ಬ ಕಾರ್ಯಕರ್ತನಂತೆ. ಈಗ ಆತನನ್ನೂ ಬಂಧಿಸಲಾಗಿದೆ. ಸಕ್ಸೇನಾರನ್ನು ಬಿಜೆಪಿ ಸಂಸದರ ಬಳಿಗೊಯ್ದ ಕಾರಿನ ಚಾಲಕ ಸಂಜಯ್ ಹುಡುಕಾಟ ನಡೆದಿದೆ.

★

ಐಎಇಎ ಒಪ್ಪುವ ಪರಮಾಣು ಹೊಣೆಗಾರಿಕೆ ಕಾನೂನು : ಭಾರತಕ್ಕೆ ಅಮೆರಿಕಾ 'ಸಲಹೆ'!

ಯಾವ ಪರಮಾಣು ವ್ಯವಹಾರಕ್ಕಾಗಿ ಈ 'ವೋಟಿಗಾಗಿ ನೋಟು' ಹಗರಣ ನಡೆಯಿತೋ ಆ ವ್ಯವಹಾರಕ್ಕೇ ಕುತ್ತು ಬಂದಿರುವ ಬಗ್ಗೆ ಈ ಅಂಕಣದಲ್ಲಿ ಓದಿರುವಿರಿ. ಈ ವ್ಯವಹಾರ ಕುದುರಿಸುವಲ್ಲಿ ಸಕ್ರಿಯ ಪಾತ್ರ ವಹಿಸಿದ್ದ ಪ್ರಸಿದ್ಧ ಪರಮಾಣು ತಜ್ಞರಿಗೇ ಈ ಬಗ್ಗೆ ಸಂದೇಹ ಉಂಟಾಗಿದೆ. ಆದರೆ ಈ ಬಗ್ಗೆ ಸಂದೇಹ ಬೇಡ ಎಂದಿರುವ ಅಮೆರಿಕಾದ ವಿದೇಶಾಂಗ ಸಚಿವರು ತಮ್ಮ ಭಾರತ ಭೇಟಿಯ ಸಂದರ್ಭದಲ್ಲಿ ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಭಾರತ ಅಂಗೀಕರಿಸಿದ ಪರಮಾಣು ಬಾಧ್ಯತಾ ಕಾನೂನು ಸಂಪೂರ್ಣವಾಗಿ 'ಪರಮಾಣು ಅನಾಹುತಕ್ಕೆ ಪೂರಕ ಪರಿಹಾರ ಕುರಿತ ಅಧಿನಿರ್ಣಯ' (ಸಿಎಸ್‌ಜಿ)ಕ್ಕೆ ಅನುಗುಣವಾಗಿ ಇರುವಂತೆ ಅಂತರ್ರಾಷ್ಟ್ರೀಯ ಅಣುಶಕ್ತಿ ಏಜೆನ್ಸಿ(ಐಎಇಎ)ಯೊಂದಿಗೆ 'ಸಂವಾದ' ನಡೆಸಬೇಕೆಂದು 'ಪ್ರೋತ್ಸಾಹಿಸಿ'ದ್ದಾರೆ.

ಈ ಸಿಎಸ್‌ಜಿಯಲ್ಲಿ ವಿದೇಶಿ ಪೂರೈಕೆದಾರರ ಕಾರಣದಿಂದ ಪರಮಾಣು ಅನಾಹುತ ಸಂಭವಿಸಿದಾಗಲೂ ಈ ಬಗ್ಗೆ ಅವರಿಗೆ ಏನೂ ಬಾಧ್ಯತೆಯಿರುವುದಿಲ್ಲ. ಆದರೆ ಎಡಪಕ್ಷಗಳ ಒತ್ತಾಯದಿಂದಾಗಿ ಭಾರತದ ಸಂಸತ್ತು ಅಂಗೀಕರಿಸಿದ ಪರಮಾಣು ಬಾಧ್ಯತಾ ಕಾನೂನಿನಲ್ಲಿ ಪರಿಹಾರ ನೀಡಿಕೆಯಲ್ಲಿ ವಿದೇಶಿ ಪೂರೈಕೆದಾರರನ್ನು ಬಾಧ್ಯಗೊಳಿಸಲಾಗಿದೆ. ಆದರೆ ತಮ್ಮ ಮೇಲೆ ಇಂತಹ ಯಾವ ಬಾಧ್ಯತೆಯನ್ನೂ ಇಷ್ಟಪಡದ ಅಮೆರಿಕಾದ ಪರಮಾಣು ಉದ್ದಿಮೆ ವಲಯದ ಒತ್ತಡದಿಂದಾಗಿ ಅವರ ಸರಕಾರ ಸಿಎಸ್‌ಜಿಗೆ ಅನುಗುಣವಾಗಿರಬೇಕು ಎಂಬ ಒತ್ತಡವನ್ನು ಈಗಲೂ ಹಾಕುತ್ತಿದೆ.

ಒಟ್ಟಾರೆಯಾಗಿ ಯುಪಿಎ ಸರಕಾರ ಈ ವಿಷಯದಲ್ಲಿ ಬಹಳಷ್ಟು ಚಂಚಲತೆ ಪ್ರದರ್ಶಿಸುತ್ತಾ ಬಂದಿದೆ. ಅಮೆರಿಕನ್ ಸರಕಾರದ, ಅಂದರೆ ವಾಸ್ತವವಾಗಿ ಅಮೆರಿಕಾದ ಪರಮಾಣು ಉದ್ದಿಮೆಯ ಹಿತಗಳಿಗೆ ಮಣೆ ಹಾಕುವ ಆಶಯವನ್ನು ತೋರುತ್ತಾ ಬಂದಿದೆ. ಈ ಕಾನೂನನ್ನು ಅಂಗೀಕರಿಸಿ ವರ್ಷವೇ ಸಂದು ಹೋದರೂ, ಇದುವರೆಗೂ ಇದರ ಅಧಿಸೂಚನೆ ಹೊರಡಿಸಿಲ್ಲ, ಅದನ್ನು ಜಾರಿಗೆ ತಂದಿಲ್ಲ; ಹೊಸ ಕಾನೂನು ತಂದಾಗ ಸಂಸತ್ತಿನ ಮುಂದೆ ಅದರಡಿಯಲ್ಲಿ ರೂಪಿಸಿದ ನಿಯಮಾವಳಿಗಳನ್ನು ಇಡಬೇಕಾಗಿದ್ದರೂ, ಈ ದಿಕ್ಕಿನಲ್ಲಿಯೂ ಅದು ಏನೂ ಮಾಡಿಲ್ಲ. ಇದೆಲ್ಲ ಅದರ ಉದ್ದೇಶದ ಬಗ್ಗೆ ಸಂದೇಹ ಮೂಡಿಸುವಂತದ್ದು.

ಯುಪಿಎ-2 ಸರಕಾರ ತನ್ನ ಚಂಚಲತೆಯನ್ನು ಬಿಟ್ಟು ಅಮೆರಿಕನ್ ವಿದೇಶಾಂಗ ಸಚಿವರ 'ಸಲಹೆ'ಯನ್ನು ದೃಢವಾಗಿ ತಿರಸ್ಕರಿಸಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಜಪಾನಿನ ಫುಕುಶಿಮಾ ಪರಮಾಣು ಅನಾಹುತದ ಸಂದರ್ಭದಲ್ಲಿ ಇದು ಬಹಳ ಮಹತ್ವದ್ದಾಗುತ್ತದೆ ಎಂದಿದೆ.

★

ನವ-ಉದಾರವಾದಿ ಚೌಕಟ್ಟಿಗೆ ಬಿಗಿದುಕೊಂಡ ಆಹಾರ ಭದ್ರತೆ ಮಸೂದೆ ಸಿದ್ಧ

ಯುಪಿಎ-2 ಸರಕಾರ ತನ್ನ 'ಆಮ್ ಆದ್ಮಿ' ಕಾಳಜಿಗಳ ಪ್ರತೀಕವೆಂದು ಬಹಳವಾಗಿ ಟಾಂಟಾಂ ಮಾಡಿರುವ ಆಹಾರ ಭದ್ರತಾ ಮಸೂದೆಯನ್ನು ಕೊನೆಗೂ 'ಮಂತ್ರಿಗಳ ಗುಂಪು' ಅಂತಿಮಗೊಳಿಸಿದೆಯಂತೆ. ಆದರೆ ಇದರಲ್ಲಿ 'ಆಮ್ ಆದ್ಮಿ'ಗೆ ಕೊಡುವುದಕ್ಕಿಂತಲೂ ಅವರಿಂದ ಕಿತ್ತುಕೊಳ್ಳುವುದೇ ಹೆಚ್ಚಿದೆ ಎಂದು ತಜ್ಞರು ಹೇಳುತ್ತಿದ್ದಾರೆ. ಒಂದೆಡೆ ದೊಡ್ಡ ಪ್ರಮಾಣದ ಆಹಾರಧಾನ್ಯಗಳ ದಾಸ್ತಾನು, ಗೋದಾಮುಗಳಲ್ಲಿ ಕೊಳೆಯುತ್ತಿರುವ ಸನ್ನಿವೇಶ, ಇನ್ನೊಂದೆಡೆ ಜನಗಳಲ್ಲಿ ವ್ಯಾಪಕವಾದ ಪೋಷಕಾಂಶ-ಹೀನತೆ, ಇಂತಹ ದ್ವಂದ್ವ ಪರಿಸ್ಥಿತಿಯನ್ನು ನಿವಾರಿಸುವ ಅಗತ್ಯವಿದ್ದರೂ. ಅದಕ್ಕೆ ಈ ಮಸೂದೆಯಲ್ಲಿ ಅವಕಾಶವಿದ್ದರೂ, ಈ ಮಸೂದೆ ಮಾತ್ರ ಅದನ್ನು ಮಾಡಿಲ್ಲ ಎಂದು ಆಹಾರ ಭದ್ರತೆಯ ಬಗ್ಗೆ ಆಳವಾದ ಅಧ್ಯಯನ ನಡೆಸಿರುವ ಸಿಪಿಐ(ಎಂ) ಸಂಸದರಾದ ಬೃಂದಾ ಕಾರಟ್ ಟೀಕಿಸಿದ್ದಾರೆ. ಏಕೆಂದರೆ ಇದು ಸಾರ್ವತ್ರಿಕ ಪಡಿತರ ವ್ಯವಸ್ಥೆಯಿಂದ ಮಾತ್ರ ಸಾಧ್ಯ. ನವ-ಉದಾರವಾದೀ ಚೌಕಟ್ಟಿಗೆ ತನ್ನನ್ನು ಬಂಧಿಸಿಕೊಂಡಿರುವ ಯುಪಿಎ-2 ಸರಕಾರಕ್ಕೆ ಇದು ಅಪಥ್ಯ.

ಈ ಮಸೂದೆ ಕನಿಷ್ಟ ಐದು ಅಂಶಗಳಲ್ಲಿ ಜನತೆಗೆ ವಂಚನೆ ಮಾಡಿದೆ ಎಂದು ಬೃಂದಾ ಕಾರಟ್ ಹೇಳುತ್ತಾರೆ. ಒಂದು, ಇದು 'ಗುರಿಯಿಟ್ಟ' ಸಾರ್ವಜನಿಕ ವಿತರಣಾ ವ್ಯವಸ್ಥೆಯ ವ್ಯಾಪ್ತಿಯನ್ನು ಗ್ರಾಮೀಣ ಪ್ರದೇಶಗಳಲ್ಲಿ 82%ದಿಂದ 75%ಕ್ಕೆ, ನಗರಪ್ರದೇಶಗಳಲ್ಲಿ 50% ಕುಟುಂಬಗಳಿಗೆ ಇಳಿಸಿದೆ; ಎರಡು, ಈಗಿರುವ ಬಿಪಿಎಲ್ ಫಲಾನುಭವಿಗಳ(ರಾಜ್ಯಸರಕಾರಗಳು ಗುರುತಿಸಿರುವ) ಪ್ರಮಾಣವನ್ನು ಕೂಡ ಗ್ರಾಮೀಣ ಪ್ರದೇಶಗಳಲ್ಲಿ 56%ದಿಂದ 46%ಕ್ಕೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 28%ಕ್ಕೆ ಇಳಿಸಿದೆ; ಮೂರು, ಆಹಾರಧಾನ್ಯಗಳ ನೀಡಿಕೆ ಪ್ರಮಾಣವನ್ನು ಕೂಡ ಕುಟುಂಬಕ್ಕೆ 35 ಕೆ.ಜಿ.ಯಿಂದ ಇಳಿಸಿದೆ, ವ್ಯಕ್ತಿ ಆಧಾರಿತವಾದ ಕಡಿಮೆ ಪ್ರಮಾಣದ ಕೋಟಾಗಳನ್ನು ಹಾಕಿದೆ; ನಾಲ್ಕು, ಹತ್ತಕ್ಕಿಂತಲೂ ಹೆಚ್ಚು ರಾಜ್ಯಗಳಲ್ಲಿ ಈಗಾಗಲೇ ಅಕ್ಕಿಯ ಬೆಲೆ 2ರೂ.ಇದ್ದರೂ, ಈ ಮಸೂದೆ ಅದನ್ನು ಬಿಪಿಎಲ್ ಕುಟುಂಬಗಳಿಗೆ 3ರೂ.ಗೆ ಏರಿಸಿದೆ, ಎಪಿಎಲ್ ಕುಟುಂಬಗಳಿಗೆ ಬೆಲೆ ಸೂಚ್ಯಂಕದ ಪ್ರಕಾರ ಹೆಚ್ಚುವಂತೆ ಮಾಡಿದೆ; ಐದು, ಎಪಿಎಲ್ ಕುಟುಂಬಗಳ ಸಂಖ್ಯೆಯನ್ನು ಕೂಡ ಇದು ಇಳಿಸಿದೆ.

ಇಷ್ಟೇ ಅಲ್ಲ, ಈ ಮಸೂದೆ ಬಿಪಿಎಲ್/ಎಪಿಎಲ್ ಸಂಖ್ಯೆಯ ನಿರ್ಧಾರ, ಮಾನದಂಡ, ಖರ್ಚು ಇತ್ಯಾದಿಗಳ ವಿಷಯದಲ್ಲಿ ಅಧಿಕಾರಗಳನ್ನು ರಾಜ್ಯ ಸರಕಾರಗಳಿಂದ ಕಿತ್ತುಕೊಂಡು ಕೇಂದ್ರ ಸರಕಾರದ ಕೈಗಳಲ್ಲಿಟ್ಟಿದೆ. ರಾಜ್ಯ ಸರಕಾರಗಳು ಬಯಸಿದರೂ ಈ ವಿಶ್ವಬ್ಯಾಂಕ್ ಪಥ್ಯವನ್ನು ಒಪ್ಪಿರುವ ಮಸೂದೆಗೆ ಪರ್ಯಾಯವಾದ ದಾರಿಯನ್ನು ಅನುಸರಿಸುವಂತಿಲ್ಲ.

ರಾಷ್ಟ್ರೀಯ ಆಹಾರಭದ್ರತಾ ಮಸೂದೆ 2011 ಜನಸಾಮಾನ್ಯರಿಗೆ ಆಹಾರದ ವಂಚನೆ, ಹಸಿವು, ಪೋಷಣಾಂಶ ಕೊರತೆ ಮತ್ತು ಆಹಾರ ಅಭದ್ರತೆಯ ಮೂಲ ಪ್ರಶ್ನೆಗಳನ್ನು ಎದುರಿಸುವುದಿಲ್ಲ, ಬಡತನದ ಅಂದಾಜು ಮತ್ತು ಕೋಟಾಗಳ ನಿರ್ಧಾರದಲ್ಲಿ ಬಡವ-ವಿರೋಧಿ ವಿಧಾನಗಳಿಗೆ ಕಾನೂನಿನ ಮಂಜೂರಾತಿ ನೀಡುತ್ತದಷ್ಟೇ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ ಎಂದು ಬೃಂದಾ ಕಾರಟ್ ಹೇಳುತ್ತಾರೆ.

●

ಇತ್ತೀಚೆಗೆ ಗದಗ ಜಿಲ್ಲೆಯಲ್ಲಿ ನಡೆದ ಪೋಸ್ಕೋ ವಿರೋಧಿ ರೈತ ಚಳುವಳಿ ಒಂದುಹಂತದ ವಿಜಯ ದಾಖಲಿಸಿದೆ. ರೈತರ ಒಪ್ಪಿಗೆ ಇಲ್ಲದ ಫಲವತ್ತಾದ ಭೂಮಿ ಕಬಳಿಸುವ ಸಂಚು ಈ ಹಂತದಲ್ಲಿ ವಿಫಲವಾಗಿದೆ. ಆದರೆ ಮತ್ತೆ ಆ ಅಪಾಯ ಎದ್ದು ಬಂದರೂ ಬಂದೀತು. ಹೋರಾಟದ ಒಂದು ವರದಿ ಹೋರಾಟ ಸಮಿತಿಯ ಸಂಚಾಲಕರಲ್ಲಿ ಒಬ್ಬರಾದ ಬಿ.ಎಸ್.ಸೊಪ್ಪಿನ ಅವರಿಂದ

ರೈತರ ಪ್ರತಿರೋಧ ಪೋಸ್ಕೋಗೆ ಹಿನ್ನಡೆ

ಬಿ.ಎಸ್. ಸೊಪ್ಪಿನ

ಭೂಮಿ ನಮ್ಮ ಪೂರ್ವಜರಿಂದ ನಮಗೆ ಬಂದ ಬಳುವಳಿ. ಅದನ್ನು ನಮ್ಮ ಮುಂದಿನ ಪೀಳಿಗೆಗೆ ನಾವು ಕೊಡಬೇಕಾಗುತ್ತದೆ. ಅದನ್ನು ಮಾರಿಕೊಳ್ಳುವುದು ತಪ್ಪಲ್ಲವೇ? ಅವರನ್ನು ಭೂ ಹೀನರನ್ನಾಗಿ ಮಾಡುವುದು ಯಾವ ನ್ಯಾಯ?" ಎಂಬುದು ಜಂತ್ಲಿ-ಶಿರೂರ ಗ್ರಾಮದ ಪ್ರಗತಿಪರ ರೈತ ಚನ್ನಪ್ಪ ಬೂದಿಹಾಳ ಅವರ ಅಭಿಮತ. "ನಮ್ಮ ಮಕ್ಕಳಿಗೆ ನೌಕರಿ ಕೊಡ್ಲಾಕ ಇವರ್‍ಯಾರ್ರಿ" ಎಂದು ಕೇಳುತ್ತಾರೆ ಹಳ್ಳಿಯ ಗುಡಿಯ ರೈತ ಮಹಿಳೆ ಅನ್ನಪೂರ್ಣಮ್ಮ. "ಕೇವಲ ರೊಕ್ಕಾ, ಕಬ್ಬಿಣ ತಂದು ಬದಕಾಗುತ್ತದೇನ್ರಿ" ಎಂದು ಇನ್ನೊಬ್ಬ ರೈತ ಕೇಳುತ್ತಾರೆ. ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಹಳ್ಳಿಗುಡಿ ಜಂತ್ಲಿ-ಶಿರೂರ ಹಾಗೂ ಮೇವುಂಡಿ ಗ್ರಾಮಗಳಲ್ಲಿ ಸುತ್ತಾಡಿದರೆ ಇಂಥ ಅನೇಕ ಮಾತುಗಳು ರೈತರಿಂದ ಕೇಳಿ ಬರುತ್ತದೆ. ಕಾರಣವಿಷ್ಟೆ



ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವು ಈ ಗ್ರಾಮಗಳ 7,189 ಎಕರೆ ಕೃಷಿ ಜಮೀನು ಸ್ವಾಧೀನ ಮಾಡಿಕೊಂಡು ಮೂರು ಕೈಗಾರಿಕೆಗಳಿಗೆ ನೀಡಲು ಮುಂದಾಗಿತ್ತು.

ಈ ಪ್ರದೇಶವು ಅಲ್ಲಲ್ಲಿ ಒಂದಿಷ್ಟು ಕೆಂಪು ಮಿಶ್ರಿತ ಕಪ್ಪು ಭೂಮಿಯನ್ನು ಬಿಟ್ಟರೆ ಉಳಿದಂತೆ ಕಪ್ಪು ಯರಿ ಮಣ್ಣಿನಿಂದ ಕೂಡಿದ ಫಲವತ್ತಾದ ಭೂಮಿ. ಬಿಳಿ ಜೋಳ, ಹತ್ತಿ, ಸೂರ್ಯಕಾಂತಿ, ಈರುಳ್ಳಿ, ಮೆಣಸಿನಕಾಯಿ, ದ್ವಿದಳ ಧಾನ್ಯಗಳು ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಜಂತ್ಲಿ-ಶಿರೂರ ಭೂಮಿಯಂತೂ ಈರುಳ್ಳಿಗೆ ಫಲವತ್ತಾದ ಭೂಮಿಯಾಗಿದೆ. ಹಳ್ಳಿಗುಡಿಯಲ್ಲಿ ಬಿಳಿಜೋಳವನ್ನು ಧಾರಾಳವಾಗಿ ರೈತರು ಬೆಳೆಯುತ್ತಾರೆ. ಸಿಂಗಟೂರು ಏತ ನೀರಾವರಿ ಯೋಜನೆ ಜಾರಿಗೆ ಬಂದರೆ ಇಲ್ಲಿನ ಸುಮಾರು ಭೂಮಿ ನೀರುಣ್ಣುವದು. ಸರ್ಕಾರದ ಸಂಕಲ್ಪದ ಕೊರತೆಯಿಂದ 400 ಕೋಟಿ ರೂ. ಖರ್ಚು ಮಾಡಿಯೂ ಈ ಯೋಜನೆ ಇನ್ನೂ ಕಾರ್ಯಗತವಾಗಿಲ್ಲ ಎಂಬ ಕೊರಗು ರೈತರದು. ಆದರೂ ಅಲ್ಲಲ್ಲಿ ಕೊಳವೆ ಬಾವಿಗಳ ಮೂಲಕ ಮೇವುಂಡಿ, ಜಂತ್ಲಿ-ಶಿರೂರ ಗ್ರಾಮಗಳ ರೈತರು ಉತ್ಕೃಷ್ಟ ಬೆಳೆ ತೆಗೆಯುತ್ತಾರೆ. ಜಂತ್ಲಿ-ಶಿರೂರ ಕೆರೆಯಿಂದ ಸುಮಾರು 1200 ಎಕರೆ ಭೂಮಿ ನೀರುಣ್ಣುವುದು. ಇಂಥ ಫಲವತ್ತಾದ ಭೂಮಿಯನ್ನು ಸರ್ಕಾರ ಕೈಗಾರಿಕಾ ಸ್ಥಾಪನೆಗೆ ನೀಡುತ್ತಿರುವುದು ಸರ್ವಥಾ ನ್ಯಾಯೋಚಿತವಾಗಿರಲಿಲ್ಲ. ಆದರೆ ಸರ್ಕಾರ ಅಭಿವೃದ್ಧಿ ಹೆಸರಿನಲ್ಲಿ ವಾಣಿಜ್ಯೋದ್ಯಮಿಗಳ ಪರವಾಗಿ ವಹಿಸಿತು.

ಹಳ್ಳಿಗುಡಿ ಗ್ರಾಮದ 3,382 ಎಕರೆ ಜಮೀನು ದಕ್ಷಿಣ ಕೊರಿಯಾ ಮೂಲದ ಒಂದು ಬಹುರಾಷ್ಟ್ರೀಯ ಉಕ್ಕು ಕಾರ್ಖಾನೆಯಾದ ಪೋಸ್ಕೋಗೆ, ಜಂತ್ಲಿ-ಶಿರೂರ ಗ್ರಾಮಗಳ 1,570 ಎಕರೆ ಎಸ್.ಆರ್.ಗ್ರೂಪ್ ಕಂಪನಿಗೆ ಮೇವುಂಡಿ ಗ್ರಾಮದ 735 ಎಕರೆ ಆಧುನಿಕ ಮೆಟಲಿಕ್ ಕಂಪನಿಗೆ ಕೊಡುವುದೆಂದು ನಿಗದಿಯಾಗಿತ್ತು. ಮೊದಲಿನ ಎರಡು ಕಂಪನಿಗಳು ಉಕ್ಕು ತಯಾರಿಕಾ ಘಟಕಗಳಾಗಿದ್ದರೆ ಮೂರನೆಯದು ಅನಿಲ ವಿದ್ಯುತ್ ತಯಾರಿಕಾ ಕೈಗಾರಿಕೆಯಾಗಿದೆ. ಒಟ್ಟು 5,687 ಎಕರೆ ಜಮೀನು ಸ್ವಾಧೀನಕ್ಕೆ ಸಂಬಂಧಿಸಿದಂತೆ ರೈತರಿಗೆ ಧಾರವಾಡದ ಕೆಐಎಡಿಬಿ ಕಛೇರಿಯಿಂದ ನೋಟೀಸ್‌ಗಳು ಜಾರಿಯಾಗಿವೆ. ಹಳ್ಳಿಗುಡಿ ಮತ್ತು ಜಂತ್ಲಿ-ಶಿರೂರ ಗ್ರಾಮಗಳ ರೈತರಿಗೆ 28/1 ಮತ್ತು 28/2 ನೋಟೀಸ್‌ಗಳು ಜಾರಿಯಾಗಿವೆ. ಮೇವುಂಡಿ ರೈತರಿಗೆ ಮೊದಲ ನೋಟೀಸ್ ಮಾತ್ರ ರವಾನೆಯಾಗಿದೆ. ಸರ್ಕಾರ ಈ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಕೈಗಾರಿಕೆಗಳಿಗೆ ಹಸ್ತಾಂತರಿಸಬೇಕೆಂದು ನಿರ್ಧಾರಕ್ಕೆ ಬರಲು ಕಾರಣವೇನು ಎಂದು ಸರಿಯಾಗಿ ಗ್ರಹಿಸಬೇಕು. ಆದರೆ ಸರ್ಕಾರದ ದೃಷ್ಟಿಯಲ್ಲಿ ಇದೊಂದು ಬರಡು ಭೂಮಿ, ಹೆಚ್ಚೇನು ಬೆಳೆ ಬೆಳೆಯಲಾರದು. ಉಸ್ತುವಾರಿ ಮಂತ್ರಿ ಮಾತಿನಿಂದಲೆ ಈ ವಿಚಾರ ಸ್ಪಷ್ಟವಾಗುತ್ತದೆ. ರೈತರು ಭೂಮಿ ಕೊಡಲು ನಿರಾಕರಿಸಿದಾಗ "ಕಳೆದ ಎರಡು ಮೂರು ವರ್ಷಗಳಲ್ಲಿ ನೀನು ಬೆಳೆ ತೆಗೆದಿದ್ದು ಎಷ್ಟು? ಎಂದು ಛೇಡಿಸಲಾಗಿತ್ತು. ಅಂದರೆ ಸಾಧಾರಣ ಬೆಳೆ ಬಂದಿದೆ ಎಂಬುದು ಅವರ ಮಾತಿನ ತಾತ್ಪರ್ಯ. ಅಂದಾಗ ಇಂಥ ಭೂಮಿಯನ್ನು ಕೈಗಾರಿಕೆಗೆ ಕೊಡಲು ಅಡ್ಡಿಯಿಲ್ಲ ಅಂತ ಅರ್ಥ. ಸರ್ಕಾರದ ತಿಳುವಳಿಕೆ ಏನೇ ಇರಲಿ ಕೈಗಾರಿಕೋದ್ಯಮಿಗಳಿಗಂತೂ ಒಂದು ಕಡೆ, ಬಳ್ಳಾರಿ ಖನಿಜ ಸಂಪತ್ತು ಇನ್ನೊಂದು ಕಡೆ. ಕಪ್ಪತ್ತಗುಡ್ಡದ ಬಳಕೆಯಾಗದ ಖನಿಜ ಸಂಪತ್ತಿನ ಮೇಲೂ ಅವರ ದೃಷ್ಟಿ ಇರುವುದು ಅಕ್ಷರಶಃ ಸತ್ಯ. ಆದರೆ ರೈತರು ತಮ್ಮ ಕೃಷಿಯೋಗ್ಯ ಭೂಮಿಯನ್ನು ಕೈಗಾರಿಕೆಗೆ ಕೊಡಲು ಸುತಾರಾಮ್ ಸಿದ್ಧರಿಲ್ಲ. ಆದರೆ ಸರ್ಕಾರ ಎಡವಿದ್ದೆಲ್ಲಿ? ಸರ್ಕಾರ ತನ್ನ ಪ್ರತಿನಿಧಿಯನ್ನು

ಪುಟ 10ಕ್ಕೆ

POSCO-India
building better tomorrow with steel



ಪೋಸ್ಕೋ ಚರಿತ್ರೆ – 'ಬಂಡವಾಳ'

- 1960 ಉಕ್ಕು ತಯಾರಿಕಾ ಘಟಕ ಸ್ಥಾಪನೆಗೆ ಯೋಜನೆ
- 1968 ಪೋಹಾಂಗ ಸ್ಟೀಲು ಕಂಪನಿ, ಅಸ್ತಿತ್ವಕ್ಕೆ ಯಾವುದೇ ಬಂಡವಾಳವಿಲ್ಲದೆ, ಅನುಭವ ಇಲ್ಲದ ಹಾಗೂ ಯಾವುದೇ ತಾಂತ್ರಿಕತೆ ರಹಿತವಾದ ಕಂಪನಿಗೆ ಟಿ ಜಾನ್ ಪಾರ್ಕ್ (Tea Joon Park) ಅಧ್ಯಕ್ಷರಾಗಿ ಆಯ್ಕೆಗೊಂಡರು. ನೌಕರರ ತ್ಯಾಗದಿಂದ ಕಂಪನಿಗೆ ಒಂದು ಕಛೇರಿ ನಿವೇಶನ.
- 1973 ಮೊದಲ ಉತ್ಪಾದನೆ, 1.30ದ. ಲಕ್ಷ ಟನ್ ಉಕ್ಕು
- 1998 ಪೋಸ್ಕೊ ಜಗತ್ತಿನ ಉತ್ಪಾದನೆ. ದೊಡ್ಡ ಉಕ್ಕು ತಯಾರಿಕೆ ಕೈಗಾರಿಕೆಯಲ್ಲೂ ಒಂದಾಯಿತು.
- 2000 ಪೋಸ್ಕೊ ಖಾಸಗೀಕರಣ ಗೊಂಡಿದೆ.
- 2005 ಪೋಸ್ಕೊ ಇಂಡಿಯಾ ಕಂಪನಿ ಸ್ಥಾಪನೆಯೊಂದಿಗೆ ಭಾರತಕ್ಕೆ ಕಾಲಿಟ್ಟಿದೆ. ಭುವನೇಶ್ವರದಲ್ಲಿ (ಒರಿಸ್ಸಾ) ಮುಖ್ಯ ಕಛೇರಿ ಮುಂಬಾಗದಲ್ಲಿ ಇನ್ನೊಂದು ಕಛೇರಿ ನಂತರ ದೆಹಲಿಯಲ್ಲಿ ಮೂರನೇ ಕಛೇರಿ ಇದೆ.

ನಿಮಗಿದು ತಿಳಿದಿರಲಿ

ಪೋಸ್ಕೋ ಎಂಬ ಕಂಪನಿಯು ದಕ್ಷಿಣ ಕೊರಿಯಾ ಮೂಲದ್ದು. ಈ ಬಹುರಾಷ್ಟ್ರೀಯ ಉಕ್ಕು ಕಂಪನಿಯನ್ನು ಸ್ವತಃ ದಕ್ಷಿಣ ಕೊರಿಯದಲ್ಲೇ ಕಪ್ಪುಪಟ್ಟಿಗೆ ಸೇರಿಸಲಾಗಿದೆ. ಬ್ರೆಜಿಲ್ ದೇಶದಿಂದ ಈ ಕಂಪನಿಯನ್ನು ಹೊರಗಟ್ಟಲಾಗಿದೆ.

JANASHAKTHI KANNADA VARA PATRIKE: Printed by G.N.NAGARAJ, No 12. 18th, Cross, S.R.Nagar, BANGALORE-560027 Published By: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH